ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ
### ಎಂ.ಎ. (ಪ್ರಥಮ)

# ದಿವಾನಿ ಹಕ್ಕುಗಳು, ರೆಗ್ಯುಲೇಟಿಂಗ್ ಕಾಯಿದೆ, ವಾರೆನ್ ಹೇಸ್ಟಿಂಗ್ಸ್, ದ್ವಿಮುಖ ಸರ್ಕಾರ, ರಾಬರ್ಟ್ ಕ್ಲೈವ್, ಆಂಗ್ಲೋ – ಫ್ರೆಂಚ್ ಪೈಪೋಟಿ, ವಿಕ್ಟೋರಿಯ ಘೋಷಣೆ 1935ರ ಕಾಯಿದೆ

ಕೋರ್ಸ್ – 3 ಬ್ಲಾಕ್ – 3

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ -3

ಬ್ಲಾಕ್

# 3


| ಘಟಕ | ವಿಷಯ | ಪುಟ |
|---|---|---|
| ಘಟಕ - 75 | ಪ್ರಭುತ್ವದ ನೇರ ಆಳ್ವಿಕೆಗೆ ಕಾರಣ ಮತ್ತು ಪರಿಣಾಮಗಳು - ರಾಣಿಯ ಘೋಷಣೆ | 1-10 |
| ಘಟಕ - 76 | ಇಂಗ್ಲೆಂಡಿನ ಭಾರತದ ಸರ್ಕಾರ | 11-18 |
| ಘಟಕ - 77 | ಪ್ರಭುತ್ವ ಕಾಲದ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು | 19-30 |
| ಘಟಕ - 78 | ಹಣಕಾಸು - ಆಡಳಿತ ಸೇವೆಗಳು ಮತ್ತು ರಕ್ಷಣೆ (1858-1909) | 31-46 |
| ಘಟಕ - 79 | ವಿದೇಶಾಂಗ ವ್ಯವಹಾರ ಮತ್ತು ಗಡಿನಾಡ ನೀತಿ (1858 - 1909) | 47-64 |
| ಘಟಕ - 80 | ಪ್ರಭುತ್ವದ ಆಳ್ವಿಕೆಯಲ್ಲಿ ನ್ಯಾಯಾಂಗ ಮತ್ತು ಕಾನೂನು ವ್ಯವಸ್ಥೆ | 65-71 |

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*


## ಪಠ್ಯಕ್ರಮ ನಿರೂಪಕರು


ಡಾ. ಎನ್. ಸರಸ್ವತಿ
ಇತಿಹಾಸ ಪ್ರವಾಚಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು


ಘಟಕಗಳು **75** ರಿಂದ **80**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, **2013**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ - 3

## ಬ್ಲಾಕ್ - 3

### ಪೀಠಿಕೆ

1857 ರ ಸಿಪಾಯಿದಂಗೆ ಬ್ರಿಟಿಷ್ ಭಾರತದ ಇತಿಹಾಸದಲ್ಲಿ ಅತ್ಯಂತ ಮಹತ್ವ ಘಟ್ಟ. ಈ ಘಟನೆಯ ನಂತರ ಕಂಪೆನಿಯ ಆಳ್ವಿಕೆ ಕೊನೆಗೊಂಡು ಬ್ರಿಟಿಷ್ ಪ್ರಭುತ್ವವು ನೇರವಾಗಿ ಭಾರತದ ಆಡಳಿತವನ್ನು ವಹಿಸಿಕೊಂಡಿತ್ತು. 1857 ರಿಂದ 1909 ರವರೆಗಿನ ಅವಧಿಯಲ್ಲಿ ಬ್ರಿಟಿಷ್ ಭಾರತದಲ್ಲಾದ ಸಂವಿಧಾನಾತ್ಮಕ ಬೆಳವಣಿಗೆ ಅಥವಾ ಬದಲಾವಣೆಗಳನ್ನು ಈ ಬ್ಲಾಕ್ ನಿಮಗೆ ತಿಳಿಸಿಕೊಡುತ್ತದೆ. ಈ ಬ್ಲಾಕಿನಲ್ಲಿ ಒಟ್ಟು ಆರು ಘಟಕಗಳಿವೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 75

## ಬ್ರಿಟಿಷ್ ಚಕ್ರವರ್ತಿನಿಯ ಕೈಕೆಳಗೆ ಭಾರತ ಸರ್ಕಾರ -1858 ರ ಘೋಷಣೆ


75.0 ಪ್ರಸ್ತಾವನೆ

75.1 1858 ರ ವಿಕ್ಟೋರಿಯ ಮಹಾರಾಣಿಯ ಘೋಷಣೆ

75.2 ಬ್ರಿಟಿಷ್ ಚಕ್ರವರ್ತಿನಿಯ ಕೈಕೆಳಗೆ ಭಾರತ ಆಡಳಿತದ ಸ್ವರೂಪ

75.3 ಇಂಡಿಯನ್ ಕೌನ್ಸಿಲ್ ಆಕ್ಟ್ 1861

75.4 ಇಂಡಿಯನ್ ಕೌನ್ಸಿಲ್ ಆಕ್ಟ್ 1892

75.5 ಉಪಸಂಹಾರ

75.6 ಮಾದರಿ ಪ್ರಶ್ನೆಗಳು

75.7 ಪರಾಮರ್ಶನ ಕೃತಿಗಳು

## 75.0 ಪ್ರಸ್ತಾವನೆ

1857 ರ ಭಾರತದ ಕ್ರಾಂತಿ, ಭಾರತದಲ್ಲಿ ಭದ್ರವಾಗಿ ಸ್ಥಾಪಿತವಾದ ಮೇಲೆ ಬ್ರಿಟಿಷ್ ಆಡಳಿತವನ್ನು ಕಿತ್ತೊಗೆಯಲು ನಡೆಸಿದ ಮೊತ್ತ ಮೊದಲ ಪ್ರಯತ್ನ. ಅದು ಹಳೆಯ ಪದ್ಧತಿಗೆ ಮಾರಕವಾದ ಹೊಡೆತ ಕೊಟ್ಟಿತು. ಕ್ರಾಂತಿಯು ಹೌಸ್ ಆಫ್ ಕಾಮನ್ಸ್‌ನಲ್ಲಿ ಭಾರತವನ್ನು ಕುರಿತ ಹೊಸ ಚರ್ಚೆಗೆ ಎಡೆಕೊಟ್ಟಿತು. ಫಲವಾಗಿ ಹೊಸತೊಂದು ನೀತಿಯ ಆಧಾರವಾಗಲು ತಕ್ಕ ಕೆಲವು ತತ್ವಗಳನ್ನು ಒಳಗೊಂಡ ನಿರ್ಣಯಗಳು ಅಂಗೀಕೃತವಾದುವು. ಈ ಆಧಾರದ ಮೇಲೆ ಮಸೂದೆಯೊಂದು ಮಂಡಿಸಲ್ಪಟ್ಟಿತು. ಅದೇ ಕೊನೆಗೆ 1858 ರ "ದಿ ಆಕ್ಟ್ ಫಾರ್ ದಿ ಗುಡ್ ಗವರ್ನಮೆಂಟ್ ಆಫ್ ಇಂಡಿಯಾ" ಆಯಿತು.

ಈ ಆಕ್ಟ್ ಭಾರತದಲ್ಲಿ ಪ್ರಚಾರವಾಗಿದ್ದ ಸರಕಾರದ ವ್ಯವಸ್ಥೆಯನ್ನು ಮೂಲತಃ ಬದಲಾಯಿಸಲಿಲ್ಲ. ಆಡಳಿತ ಯಂತ್ರವನ್ನು ಸುಧಾರಿಸಿ, ಇಂಗ್ಲೆಂಡಿನಿಂದಲೇ ಮೇಲ್ವಿಚಾರಣೆ ನಡೆಸಿ ನಿಯಂತ್ರಣಗೊಳಿಸಲು ತಕ್ಕಂತೆ ಅಳವಡಿಸುವಷ್ಟು ಸೀಮಿತವಾಯಿತು.

ಆಕ್ಟ್ ಕೋರ್ಟ್ ಆಫ್ ಡೈರೆಕ್ಟರ್ ಮಂಡಳಿಯನ್ನು ಮತ್ತು ನಿಯಂತ್ರಿಕ ಮಂಡಳಿಯನ್ನು ತೆಗದು ಹಾಕಿತು. ಸರಕಾರವನ್ನು ರಾಜ್ಯಗಳನ್ನು ಮತ್ತು ವರಮಾನವನ್ನು ಕಂಪೆನಿಯಿಂದ ಸಿಂಹಾಸನಕ್ಕೆ ವರ್ಗಾಹಿಸಿತು. ಅಲ್ಲದೆ ಭಾರತವನ್ನು ಇಂಗ್ಲೀಷ್ ಸಾರ್ವಭೌಮತ್ವದ ಹೆಸರಿನಲ್ಲಿ ಚಕ್ರವರ್ತಿ ಆಳತಕ್ಕದ್ದು ಎಂದು ಘೋಷಿಸಿತು. ಒಬ್ಬ ಅಡಿಷನಲ್ ಪ್ರಿನ್ಸಿಪಲ್ ಸೆಕ್ರೆಟರಿ ಆಫ್ ಸ್ಟೇಟ್ (ಫಾರ್ ಇಂಡಿಯ) ಹುದ್ದೆಯನ್ನು ನೇಮಕಮಾಡಿ, ಕೌನ್ಸಿಲ್ ಆಫ್ ಇಂಡಿಯಾ ಮಂಡಳಿಯನ್ನು ರಚಿಸಿತು.

## 75.1 1858 ರ ವಿಕ್ಟೋರಿಯ ಮಹಾರಾಣಿಯ ಘೋಷಣೆ

ಈಸ್ಟ್ ಇಂಡಿಯಾ ಕಂಪೆನಿಯ ಶತಮಾನದ ಕಾಲದ ಆಡಳಿತವನ್ನು ಕೊನೆ ಮುಟ್ಟಿಸಿದ 1858 ರ ವಿಕ್ಟೋರಿಯ ಮಹಾರಾಣಿಯ ಘೋಷಣೆ ಉಳಿದ ಅಂಶಗಳ ಜೊತೆಗೆ ಹೀಗೆ ಹೇಳಿತು.

(1) ಆದ್ದರಿಂದ ಈಗ, ನಾವು ಮೇಲೆ ಹೇಳಿದ ಸರಕಾರವನ್ನು ನಾವೇ ವಹಿಸಿಕೊಂಡಿದ್ದೇವೆ.

(2) ನಾವು ವಿಸ್ಕೌಂಟ್ ಕೌನ್ನಿಂಗ್ ಅವರನ್ನು ನಮ್ಮ ಮೊದಲನೆಯ ವೈಸರಾಯ್ ಮತ್ತು ಗವರ್ನರ್ ಜನರಲ್ ಆಗಿ ನೇಮಿಸಿದ್ದೇವೆ. ನಮ್ಮ ಮೇಲೆ ಹೇಳಿದ ರಾಜ್ಯಗಳಿಗೆ ಅಧಿಕಾರಿಯಾಗಿದ್ದು ಅವರು ಸರಕಾರವನ್ನು ನಮ್ಮ ಹೆಸರಿನಲ್ಲಿ ನಿರ್ವಹಿಸುತ್ತಾರೆ. ಸಾಮಾನ್ಯವಾಗಿ ನಮ್ಮ ಹೆಸರಿನಲ್ಲಿ, ನಿಮ್ಮವರಾಗಿ ನಿರ್ವಸುತ್ತಾರೆ. ಆಗಿಂದಾಗ ನಮ್ಮ ರಾಜ್ಯದ ಪ್ರಧಾನ ಕಾರ್ಯದರ್ಶಿಗಳ ಮೂಲಕ, ಕಾರ್ಯದರ್ಶಿಗಳ ಮೂಲಕ ಪಡೆಯುವ ಆದೇಶಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ನಡೆಸುತ್ತಾರೆ.

(3) ನಾವು ಈ ಮೂಲಕ ಭಾರತದ ದೇಶೀಯ ರಾಜರುಗಳಿಗೆ ಹೀಗೆ ಘೋಷಿಸುತ್ತೇವೆ. ಅವರು ಈಸ್ಟ್ ಇಂಡಿಯಾ ಕಂಪೆನಿಯೊಂದಿಗೆ ಅಥವಾ ಅದರ ಅಧಿಕಾರದಲ್ಲಿ ಮಾಡಿಕೊಂಡಿರುವ ಎಲ್ಲ ಒಪ್ಪಂದಗಳನ್ನು, ಕಟ್ಟಳೆಗಳನ್ನು, ಒಪ್ಪಿಸಿಕೊಳ್ಳಲಾಗಿದೆ ಮತ್ತು ಚಾಚು ತಪ್ಪದೆ ಪಾಲಿಸಲಾಗುತ್ತಿದೆ. ಅದೇ ರೀತಿಯ ವ್ಯವಹರಣೆಯನ್ನು ಅದರಿಂದಲೂ ನಿರೀಕ್ಷಿಸಲಾಗಿದೆ.

(4) ನಮ್ಮ ಪ್ರಸಕ್ತ ಸಾಮ್ರಾಜ್ಯದ ಗಡಿಗಳನ್ನು ವಿಸ್ತರಿಸುವ ಅಪೇಕ್ಷೆ ನಮಗಿಲ್ಲ, ನಮ್ಮ ಸಾಮ್ರಾಜ್ಯಗಳ ಮೇಲೆ ಯಾವುದೇ ಆಕ್ರಮಣವನ್ನು ನಾವು ಸಹಿಸುವುದಿಲ್ಲ, ಯಾವುದೇ ಹಕ್ಕುಗಳ ಚ್ಯುತಿಗೆ ಅವಕಾಶ ನೀಡುವುದಿಲ್ಲ, ಅದೇ ರೀತಿ ಉಳಿದವರ ಹಕ್ಕುಗಳ ಮೇಲೆ ಆಕ್ರಮಣವನ್ನು ಅನುಮತಿಸುವುದೂ ಇಲ್ಲ.

(5) ನಾವು ದೇಶೀಯ ರಾಜರ ಹಕ್ಕುಗಳನ್ನು ಗೌರವ ಘನತೆಗಳನ್ನೂ, ನಮ್ಮದರಂತೆಯೇ ಗೌರವಿಸುತ್ತೇವೆ. ಅವರು ನಮ್ಮ ಪ್ರಜೆಗಳಂತೆಯೇ ಆಂತರಿಕ ಶಾಂತಿ ಮತ್ತು ಉತ್ತಮ ಸರಕಾರದಿಂದ ಮಾತ್ರವೇ ಸಾಧಿತವಾಗಬಹುದಾದ ಸಂಪತ್ತು ಮತ್ತು ಸಾಮಾಜಿಕ ಪ್ರಗತಿಗಳನ್ನು ಸವಿಯಲಿ ಎಂದು ಅಪೇಕ್ಷಿಸುತ್ತೇವೆ.

(6) ನಾವು ಭಾರತದ ರಾಜ್ಯಗಳ ದೇಶೀಯ ಜನರ ಬಗೆಗೆ, ಉಳಿದ ನಮ್ಮ ಪ್ರಜೆಗಳಿಗೆ ಹೇಗೋ ಹಾಗೆಯೇ ಕರ್ತವ್ಯಬದ್ಧವಾಗಿರುತ್ತೇವೆ. ಸರ್ವಶಕ್ತನಾದ ಭಗವಂತನ ಅನುಗ್ರಹದಿಂದ ನಾವು ಆ ಕರ್ತವ್ಯಗಳನ್ನು ವಿದೇಯತೆಯಿಂದಲೂ, ಆತ್ಮ ಸಾಕ್ಷಿಯಿಂದಲೂ ನಿರ್ವಹಿಸುತ್ತೇವೆ.

(7) ನಮ್ಮ ಪ್ರಜೆಗಳ ಮೇಲೆ ನಮ್ಮ ನಂಬಿಕೆಗಳನ್ನು (ಧಾರ್ಮಿಕ) ಹೇರುವ ಆಸೆಯನ್ನು ಹಕ್ಕನ್ನು ನಾವು ಬದಿಗೊತ್ತಿರುತ್ತೇವೆ. ಯಾರಿಗೆ ಆಗಲಿ ಧಾರ್ಮಿಕ ನಂಬಿಕೆ ಅಥವಾ ಆಚರಣೆಯ ಕಾರಣದಿಂದಾಗಿ ಪಕ್ಷಪಾತ ತೋರುವುದಿಲ್ಲ, ಅಥವಾ ಯಾರನ್ನೂ ಹಿಂಸಿಸುವುದಿಲ್ಲ, ಯಾರಿಗೂ ತೊಂದರೆ ಉಂಟುಮಾಡುವುದಿಲ್ಲ. ಇದು ನಮ್ಮ ಅಪೇಕ್ಷೆ ಮತ್ತು ಸಂತೋಷ. ಎಲ್ಲರೂ ಸಮಾನವಾಗಿ ಕಾನೂನಿನ ನಿಷ್ಪಕ್ಷಪಾತ ರಕ್ಷಣೆ ಪಡೆಯುತ್ತಾರೆ. ನಮ್ಮ ಕೈಕೆಳಗೆ ಅಧಿಕಾರಿಗಳಾಗಿ ಇರುವ ಎಲ್ಲರಿಗೂ ಈ ಮೂಲಕ ಕಟ್ಟಪ್ಪಣೆ ಮಾಡಲಾಗಿದೆ. ಅವರು ನಮ್ಮ ಪ್ರಜೆಗಳ ಧಾರ್ಮಿಕ ನಂಬಿಕೆ, ಆರಾಧತಿಗಳ ನಡುವೆ ಯಾವುದೇ ರೀತಿಯಲ್ಲಿ ಮೂಗು ಹಾಯಿಸದಿರಲಿ, ಅದರಿಂದ ನಮಗೆ ತುಂಬಾ ಅಸಮಧಾನವುಂಟಾಗುತ್ತದೆ.

(8) ಇದೂ ನಮ್ಮ ಅಪೇಕ್ಷೆ. ನಮ್ಮ ಪ್ರಜೆಗಳು ಅವರು ಯಾವುದೇ ಜನಾಂಗ ಅಥವಾ ಮತದವರಾಗಲಿ, ನಿಷ್ಪಕ್ಷಪಾತವಾಗಿ ಧಾರಳವಾಗಿ ನಮ್ಮ ಸೇವಾ ವರ್ಗಕ್ಕೆ ಸೇರಬಹುದು. ತಮ್ಮ ಶಿಕ್ಷಣ, ಸಾಮರ್ಥ್ಯ, ಪ್ರಾಮಾಣಿಕತೆಗಳಿಂದ ಅವರು ಆಯಾ ವೃತ್ತಿಗಳಿಗೆ ಅರ್ಹರಾಗಿರುತ್ತಾರೆ.

(9) ಭಾರತದ ದೇಶೀಯ ಜನರು ತಮ್ಮ ಪೂರ್ವಜರಿಂದ ಬಂದ ಭೂಮಿಯನ್ನು ಎಷ್ಟು ಮಟ್ಟಿನ ಗೌರವದಿಂದ ಕಾಣುತ್ತಾರೆ ಎಂಬುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಅದಕ್ಕೆ ಸಂಬಂಧಪಟ್ಟ ಎಲ್ಲ ಹಕ್ಕುಗಳ ಬಗೆಗೂ ನಾವು ರಕ್ಷಣೆ ಕೊಡಲು ಇಚ್ಛಿಸುತ್ತೇವೆ. ಧರ್ಮ ಸಮ್ಮತವಾಗಿ ರಾಜ್ಯಕ್ಕೆ ಸಲ್ಲಿಸಬೇಕಾದ ಅಗತ್ಯಗಳನ್ನು ಪೂರೈಸುವುದಾಗಲಿ, ಕಾನೂನುಗಳನ್ನು ರಚಿಸಿ ಚಲಾಯಿಸುವುದರಲ್ಲಿಯೂ ಕೂಡ ಭಾರತದ ಪ್ರಾಚೀನ ಹಕ್ಕುಗಳು ಮತ್ತು ರೂಢಿಗಳಿಗೆ ಸಲ್ಲಬೇಕಾದ ಗೌರವ ಕೊಟ್ಟೇ ತೀರುತ್ತೇವೆ.

(10) ವಿಧಿಯ ಅನುಗ್ರಹದಿಂದ ಆಂತರಿಕ ಶಾಂತಿಯು ಸ್ಥಾಪಿತವಾದಾಗ ಭಾರತದ ಶಾಂತಿಯುತ ಕೈಗಾರಿಕೋದ್ಯಮವನ್ನು ಪ್ರಚೋದಿಸಬೇಕು. ಸಾರ್ವಜನಿಕ ಉಪಯೋಗ ಮತ್ತು ಸುಧಾರಣೆಯ ಕೆಲಸಗಳನ್ನು ಹೆಚ್ಚುಪಡಿಸಬೇಕು. ಅಲ್ಲಿ ವಾಸಿಸಲು ನಮ್ಮ ಪ್ರಜೆಗಳೆಲ್ಲರಿಗೂ ಲಾಭವಾಗುವಂತೆ ಸರಕಾರವನ್ನು ಆಳಬೇಕು ಎಂಬುದು ನಮ್ಮ ಆತ್ಮೀಯವಾದ ಆಕಾಂಕ್ಷೆ. ಅವರ ಸಂಪತ್ತಿನಲ್ಲಿ ನಮ್ಮ ಶಕ್ತಿಯಿದೆ. ಅವರ ತೃಪ್ತಿಯಲ್ಲಿ ನಮ್ಮ ಭದ್ರತೆಯಿದೆ. ಅವರ ಕೃತಜ್ಞತೆಯಲ್ಲಿ ನಮ್ಮ ಅತ್ಯುನ್ನತ ಪ್ರತಿಫಲವಿದೆ.

## 75.2 ಬ್ರಿಟಿಷ್ ಚಕ್ರವರ್ತಿಯ ಕೈಕೆಳಗೆ ಭಾರತ ಆಡಳಿತದ ಸ್ವರೂಪ

ಭಾರತ ಸರ್ಕಾರದ ಹೊಣೆಯನ್ನು ನೇರವಾಗಿ ಚಕ್ರವರ್ತಿನಿಯು ವಹಿಸಿಕೊಂಡುದರಿಂದ ಅಸ್ತಿತ್ವಕ್ಕೆ ಬಂದ ಅತ್ಯಂತ ಮುಖ್ಯವಾದ ಒಂದು ಹುದ್ದೆ ಭಾರತಕ್ಕೆ ಒಬ್ಬ ಕಾರ್ಯದರ್ಶಿ, ಫಲವಾಗಿ ಎಲ್ಲ ಅಧಿಕಾರಿಗಳೂ ಶಾಸಕಾಂಗ, ಆಡಳಿತ ಮತ್ತು ಆರ್ಥಿಕ ಎಲ್ಲವೂ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಇನ್ ಕೌನ್ಸಿಲ್ ಎಂಬ ಈ ಅಧಿಕಾರದಲ್ಲಿ ಪ್ರಭುತ್ವದ ಪರವಾಗಿ ಕೇಂದ್ರಿಕೃತವಾದವು. ಭಾರತದಲ್ಲಾದರೆ, ಆಡಳಿತದ ಮುಖ್ಯಾಧಿಕಾರಿ ಗವರ್ನರ್ ಜನರಲ್ ಇನ್ ಕೌನ್ಸಿಲ್. ಆತನು ಗವರ್ನರರು, ಲೆಫ್ಟಿನೆಂಟ್ ಗವರ್ನರರು ಅಥವಾ ಚೀಫ್ ಕಮೀಷನರುಗಳಿಂದ ನಿರ್ವಹಿಸಲ್ಪಡುತ್ತಿದ್ದ ಆಯಾ ಪ್ರಾಂತದ ಪ್ರದೇಶ ಅಥವಾ ಪ್ರಾಮುಖ್ಯಕ್ಕನುಗುಣವಾಗಿ ಪ್ರಾಂತಗಳ ಮೇಲೆ ಆತನು ಅತ್ಯಂತ ಕಟ್ಟುನಿಟ್ಟಾದ ನಿಯಂತ್ರಣ ಹೊಂದಿದ್ದನು. ಈ ಗವರ್ನರ್‌ಗಳಿಗೆ ಸ್ವತಂತ್ರವಾದ ಅಧಿಕಾರಗಳಿರಲಿಲ್ಲ. ಅವರು ಗವರ್ನರ್ ಜನರಲ್ ಇನ್ ಕೌನ್ಸಿಲ್‌ನ ಪ್ರತಿನಿಧಿಗಳಾಗಿದ್ದರು. ಪ್ರಾಂತ್ಯಗಳನ್ನು ಜಿಲ್ಲೆಗಳಾಗಿ ವಿಭಾಗಿಸಲಾಗಿತ್ತು. ಪ್ರತಿಯೊಂದು ಜಿಲ್ಲೆಗೂ ಒಬ್ಬ ಕಲೆಕ್ಟರ್, ಮ್ಯಾಜಿಸ್ಟ್ರೇಟ್ ಅಥವಾ ಡೆಪ್ಯುಟಿ ಕಮೀಷನರ್ ಅಧಿಕಾರಿಯಾಗಿದ್ದನು. ಈ ರೀತಿಯ ನಾಲ್ಕು ಅಂತಸ್ತಿನ ಆಡಳಿತ ವ್ಯವಸ್ಥೆಯನ್ನು "ಕೇಂದ್ರೀಕೃತ ಪ್ರಭುತ್ವ" ಎಂದು ಕರೆಯಬಹುದು. ಇದರ ಲಕ್ಷಣ ಅಧಿಕಾರಗಳನ್ನು ಬೇರೆ ಬೇರೆ ಮಟ್ಟವಾಗಿ ಮಾಡಿರುವುದು. ಇದರಲ್ಲಿ ಕೆಳಗಿನವರು ಮೇಲಿನವರ ಪ್ರತಿನಿಧಿಗಳಾಗಿದ್ದು, ಅವರಿಗೆ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

ಈ ಕೇಂದ್ರೀಕೃತ ಆಡಳಿತದ ಶಿಖರ ಸ್ಥಾನದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಮತ್ತು ಅವನ ಕೌನ್ಸಿಲ್ ಇದ್ದರು. ಅವನು ಬ್ರಿಟಿಷ್ ಪಾರ್ಲಿಮೆಂಟಿಗೆ ಉತ್ತರಾಧಿಕಾರಿಯಾಗಾದ್ದನು. ಅವನ ಕೆಳಗೆ ವೈಸರಾಯಿ ಮತ್ತು ಗೌರ್ನರ್ ಜನರಲ್ ಆಫ್ ಇಂಡಿಯಾ ಇನ್ ಕೌನ್ಸಿಲ್. ಇವನು "ಸ್ಥಳದಲ್ಲಿದ್ದು" ಆಡಳಿತ ನಿರ್ವಹಿಸಬೇಕಾದ ವ್ಯಕ್ತಿ. ಆಮೇಲೆ ಗವರ್ನರರು, ಲೆಫ್ಟಿನೆಂಟ್ ಗವರ್ನರರು ಮತ್ತು ಚೀಫ್ ಕಮೀಷನರು ಇದ್ದು, ನಂತರ ಕೊನೆಯದಾಗಿ ಕಲೆಕ್ಟರರು ಅಥವಾ ಡೆಪ್ಯುಟಿ ಕಮೀಷನರು ಇರುತ್ತಿದ್ದರು.

ಮೇಲಿನಿಂದ ಕೆಳಗಿನವರೆಗೆ ಇಡೀ ವ್ಯವಸ್ಥೆಗ ಬಹಳ ಚೆನ್ನಾಗಿ ನೇಯಲ್ಪಟ್ಟಿತ್ತು. ಉತ್ತಮವಾಗಿ ಕೇಂದ್ರೀಕೃತವಾಗಿತ್ತು. ಅಭೇದವಾದ ಉಕ್ಕಿನ ಚೌಕಟ್ಟಿನಂತೆ ಇದ್ದು ಪೂರ್ಣ ಪ್ರಮಾಣದ ನಿರಂಕುಶ ಪ್ರಭುತ್ವದ ಎಲ್ಲ ಲಕ್ಷಣಗಳನ್ನೂ ಹೊಂದಿತ್ತು. ಈ ತೊಡಕಿನ ವ್ಯವಸ್ಥೆಯಲ್ಲಿ ಪ್ರತಿಯೊಂದು ಅಧಿಕಾರದ ಬಗೆಗೂ ಸ್ವಲ್ಪ ವಿಸ್ತಾರವಾಗಿ ವ್ಯವಹರಿಸುವುದು ಇಲ್ಲಿ ಸೂಕ್ತವಾಗಿ ಕಾಣಿಸುತ್ತದೆ.

*ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್*

1858 ರ ಆಕ್ಟ್‌ನ ಪ್ರಕಾರ ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಗೆ "ಭಾರತದ ಸರಾಕರ ಅಥವಾ ವರಮಾನಗಳಿಗೆ ಯಾವುದೇ ರೀತಿ ಸಂಬಂಧಪಟ್ಟ ಎಲ್ಲ ಕಾರ್ಯಾಚರಣೆಗಳು, ವ್ಯವಹಾರಗಳು ಮತ್ತು ವಿಚಾರಗಳ ಮೇಲೆ ಮೇಲ್ವಿಚಾರಣೆ ನಿರ್ದೇಶನ ಮತ್ತು ನಿಯಂತ್ರಣದ" ಜವಾಬ್ದಾರಿ ಬಿದ್ದಿತ್ತು. ಈ ಕೆಲಸದಲ್ಲಿ ಆತನಿಗೆ ಭಾರತದ ಬಗ್ಗೆ ಪರಿಪೂರ್ಣ ಜ್ಞಾನ ಮತ್ತು ಅನುಭವ ಪಡೆದಿದ್ದ ಜನರಿದ್ದ ಒಂದು ಕೌನ್ಸಿಲ್ ಸಹಾಯ ಮಾಡುತ್ತಿತ್ತು. ಮೊದಲಿಗೆ ಕೌನ್ಸಿಲ್ ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಯ ಮೇಲೆ ಹಾಕಿದ್ದ ಒಂದು ನಿರ್ಬಂಧ ಅಥವಾ ತಡೆಯಂತೆ ಉದ್ದೇಶಿತವಾಗಿದ್ದರೂ ಕೂಡ, ಕಾಲಾನುಕ್ರಮದಲ್ಲಿ ಅವನ ಸ್ಥಾನ ಎಲ್ಲವನ್ನೂ ಮೀರಿಸಲು ಅಧಿಕಾರ ಪಡೆಯಿತು. ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಯನ್ನು ತಡೆಹಿಡಿಯಬಹುದಾದ ಅಧಿಕಾರ ಪಾರ್ಲಿಮೆಂಟಿಗೆ ಮಾತ್ರ ಉಳಿಯಿತು. ತತ್ವಶಃ ಭಾರತ ಸರ್ಕಾರದ ಮೇಲೆ ಅವರದ್ದೇ ಪರಮಾಧಿಕಾರವಾಗಿತ್ತು. ಆದರೆ ಆಚರಣೆಯಲ್ಲಿ ಅದು ಎಲ್ಲವನ್ನೂ ತನ್ನ ಪ್ರತಿನಿಧಿಯಾಗಿದ್ದ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಬಿಟ್ಟುಕೊಟ್ಟಿತ್ತು.

ಪಾರ್ಲಿಮೆಂಟಿಗೆ ಅಲಕ್ಷ್ಯ ಹಾಗೂ ಕೌನ್ಸಿಲಿನ ಶಕ್ತ ಹೀನತೆಗಳಿಂದಾಗಿ ಸೆಕ್ರೆಟರಿ ಆಫ್ ಸ್ಟೇಟ್ ತಾನೇತಾನಾದ ನಾಯಕನಾದನು. ಸಮಸ್ತ ಭಾರತೀಯ ಆಡಳಿತದ ಮೇಲೂ, ಸಂಪೂರ್ಣ ನಿಯಂತ್ರಣವನ್ನು ಅವನು ಚಲಾಯಿಸಿದನು. ಈ ನಿಯಂತ್ರಣಕ್ಕೆ ಆಧಾರ ಮೇಲೆ ಹೇಳಿದ ಭಾರತದ ವ್ಯವಹಾರಗಳ ಮೇಲೆ ಪಾರ್ಲಿಮೆಂಟಿನ ಅಧಿಕಾರವೇ ಕೊನೆಯದು, ಸಂಪೂರ್ಣವಾದುದು ಎಂಬ ತತ್ವ, ಭಾರತದಿಂದ 6000 ಮೈಲಿಗಿಂತಲೂ ಹೆಚ್ಚು ದೂರದಲ್ಲಿ ಕುಳಿತ ಸೆಕ್ರೆಟರಿ ಆಫ್ ಸ್ಟೇಟ್ ಭಾರತದ ಬೃಹತ್ ಪ್ರಮಾಣದ ಆಡಳಿತ ವ್ಯವಸ್ಥೆಯ ಅಸಂಖ್ಯ ಮುಖ ಚಟುವಟಿಕೆಗಳನ್ನು, ಕಾರ್ಯಭಾರಗಳನ್ನು ನಿಯಂತ್ರಿಸುವುದೆನ್ನುವುದು ವಿಚಿತ್ರವಾಗಿ ಕಂಡಿತು. ಆದರೂ ವಸ್ತು ಸ್ಥಿತಿ ಹಾಗಿತ್ತು. ಮುಂದೆ ಬಂದ ಭಾರತದ ಆಡಳಿತದ ಅತ್ಯಂತ ಸಣ್ಣ ಪುಟ್ಟ ವಿಷಯಗಳಲ್ಲೂ ವ್ಯವಸ್ಥಿತವಾದ ರೀತಿಯಲ್ಲಿ ಮಧ್ಯ ಪ್ರವೇಶ ಮಾಡುವಂತಾಗಿ ಅಡ್ಡಿಯಾಗತೊಡಗಿತು. ಅದನ್ನು ವಿರೋಧದಿಂದ ಗವರ್ನರ್ ಜನರಲ್ಲಿಗೆ ಇಡೀ ವ್ಯವಸ್ಥೆಯ ಆಧಾರವಾಗಿದ್ದ ಮಹಾ ತತ್ವವನ್ನು ಹೀಗೆ ಹೇಳಲಾಯಿತು. "ಭಾರತದ ಎಲ್ಲ ವ್ಯವಹಾರಗಳ ಅಂತಿಮ ನಿಯಂತ್ರಣ ಮತ್ತು ನಿರ್ದೇಶನ ಗೃಹಸರಕಾರದಲ್ಲಿಯೇ ಹೊರತು, ಭಾರತದಲ್ಲೇ ಪಾರ್ಲಿಮೆಂಟರಿ ಆಕ್ಟ್‌ಗಳ ಮೂಲಕ ಚಕ್ರವರ್ತಿಯು ಸ್ಥಾಪಿಸಿ ನೇಮಿಸಿದ ಅಧಿಕಾರಿ ಒಳಪಡಲಿಲ್ಲ".

ಹೀಗೆ ಸೆಕ್ರೆಟರಿ ಆಫ್ ಸ್ಟೇಟ್ ಚಲಾಯಿಸುತ್ತಿದ್ದ ನಿಯಂತ್ರಣ ಸಂಪೂರ್ಣವಾಗಿದ್ದುದು ಮಾತ್ರವಲ್ಲದೇ, ಭಾರತ ಸರ್ಕಾರದ ಶಾಸಕಾಂಗ ಆಡಳಿತ ಆರ್ಥಿಕ ಎಲ್ಲ ಕಾರ್ಯಕ್ಷೇತ್ರವನ್ನೂ ವ್ಯಾಪಿಸಿತ್ತು. ಈ ಅತಿಯಾದ ಮಧ್ಯ ಪ್ರವೇಶದ ಬಗ್ಗೆ ಹೆಚ್ಚು ಕಡಿಮೆ ಪ್ರತಿಯೊಬ್ಬ ಗವರ್ನರ್ ಜನರಲ್ಲನೂ ಎಷ್ಟರ ಮಟ್ಟಿಗೆ ಬೇಸರ ಪಡುತ್ತಿದ್ದನೆಂಬುದನ್ನು ಲಾರ್ಡ್ ಮಿಂಟೋ ಬರೆದ ಒಂದು ಖಾಸಗೀ ಪತ್ರದಿಂದ ತೆಗೆದ ಈ ಭಾಗ ತೋರಿಸುತ್ತದೆ.

ಭಾರತೀಯ ನೀತಿಯ ಹಿರಿಯ ತತ್ವಗಳನ್ನು ನಿರ್ದೇಶಿಸುವುದು ಮಟ್ಟಿಗೆ ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಯ ಗುರಿ ಎಂದು ನಾನು ತಿಳಿದುಕೊಂಡಿದ್ದೆ. ರಾಷ್ಟ್ರದ ಆಡಳಿತ ಭಾರತ ಸರಕಾರಕ್ಕೆ ಸೇರಿದ್ದು ಎಂದು ಭಾವಿಸಿದ್ದೆ. ಆದರೆ ಪ್ರತಿಯೊಂದರಲ್ಲಿಯೂ ಮಧ್ಯ ಪ್ರವೇಶಿಸಿಲಾಗುತ್ತಿದೆ. ಇದು ವೈಸರಾಯಿಗೆ ನಿರಂತರವಾಗಿ ತೀವ್ರವಾದ ಆತಂಕವನ್ನು ಮಾತ್ರ ಉಂಟುಮಾಡುತ್ತಿದೆ. ಏಕೆಂದರೆ ಏನೇ ಮಾಡಿದರೂ ಸೆಕ್ರೆಟರಿ ಆಫ್ ಸ್ಟೇಟ್ ಭಾರತದ ಆಡಳಿತ ನಡೆಸುವುದು ಸಾಧ್ಯವಾಗುವುದಿಲ್ಲ.

*ಗವರ್ನರ್ ಜನರಲ್ ಇನ್ ಕೌನ್ಸಿಲ್*

ರೆಗ್ಯುಲೇಟಿಂಗ್ ಆಕ್ಟ್‌ನ್ನು ಜಾರಿಗೆ ತಂದಿದುದರಿಂದ ಹೇಗೆ ಬಂಗಾಳದ ಗವರ್ನರ್ ಜನರಲ್ಲನಿಗೆ ಕೆಲವು ವಿಚಾರಗಳಲ್ಲಿ ಮದರಾಸು ಮತ್ತು ಬೊಂಬಾಯಿ ಪ್ರೆಸಿಡೆನ್ಸಿಗಳ ಮೇಲೆಯೂ ನಿಯಂತ್ರಣವಿರುವಂತೆ ಕೇಂದ್ರ ಅಧಿಕಾರ ಮಾಡುತ್ತಿತ್ತು ಎಂಬುದನ್ನು ಮೊದಲೇ

ನೋಡಿದ್ದೇವೆ. 60 ವರ್ಷಗಳಿಗಿಂತಲೂ ಹೆಚ್ಚು ಕಾಲ ಈ ಕ್ರಮ ಒಂದೇ ಸಮನಾಗಿ ಮುಂದುವರಿಯಿತು. 1833 ರ ಆಕ್ಟ್ ಜಾರಿಗೆ ಬಂದುದರಿಂದ ಅದು ಪರಾಕಾಷ್ಠೆಯನ್ನು ಪಡೆಯಿತು. ಆ ಸಮಯದಲ್ಲಿ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಕರ್ತವ್ಯಗಳ ನಡುವೆ ವಿಭಜನ ರೇಖೆಯನ್ನು ಎಳೆದು ಗುರುತಿಸುವುದು ನಿಜಕ್ಕೂ ಕಷ್ಟವಾಗಿತ್ತು. ಪ್ರಾಂತೀಯ ಸರಕಾರದ ನಿರ್ವಹಣೆಯಲ್ಲಿದ್ದ ಯಾವುದೇ ವಿಚಾರವನ್ನು ಕುರಿತು ವ್ಯವಹರಿಸಲು ಕೇಂದ್ರ ಸರ್ಕಾರ ಸಂಪೂರ್ಣವಾಗಿ ಸಮರ್ಥವಾಗಿತ್ತು. ಎಷ್ಟು ಮಟ್ಟಿಗೆ ಅದು ತನ್ನ ಆ ಅಧಿಕಾರವನ್ನು ಚಲಾಯಿಸುತ್ತಿತ್ತು ಎನ್ನುವುದನ್ನು ಸ್ವಲ್ಪ ವಿವರವಾಗಿ ಪರಿಶೀಲಿಸಬೇಕಾಗುತ್ತದೆ.

ಆರ್ಥಿಕ ಕ್ಷೇತ್ರದಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ಪ್ರಾಂತೀಯ ಆಡಳಿತದ ಮೇಲೆ ಬೀರುತ್ತಿದ್ದ ನಿಯಂತ್ರಣ ಸಂಪೂರ್ಣವಾಗಿತ್ತು. ಇದು 1858 ರ ಆಕ್ಟ್‌ನ ಫಲ. ಅದರಲ್ಲಿ ರಾಷ್ಟ್ರದ ಸಮಸ್ತ ವರಮಾನವೂ ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಸೇರಿದ್ದು ಎಂಬ ಅವಕಾಶ ದೊರೆತ್ತಿತ್ತು. ಪ್ರಾಂತೀಯ ಸರ್ಕಾರಗಳು ತಮ್ಮದೇ ಇರಾದೆಯಿಂದ ಒಂದೇ ಒಂದು ರೂಪಾಯಿಯನ್ನು ವಸೂಲಿ ಮಾಡುವಂತಿರಲಿಲ್ಲ. ವೆಚ್ಚ ಮಾಡುವಂತಿರಲಿಲ್ಲ. ಲಾರ್ಡ್ ಮೇಯೋ (1870) ಮತ್ತು ಮುಂದೆ ಬಂದವರು ಪ್ರಾಂತೀಯ ವ್ಯವಸ್ಥೆಗಳ ಮೂಲಕ ಆಡಳಿತದ ಕೆಲವೊಂದು ನಿರ್ದಿಷ್ಟ ಮಟ್ಟವನ್ನು ಕಾಪಾಡಲು ಅಗತ್ಯವಾದಷ್ಟು ಹಣವನ್ನು ಇಟ್ಟುಕೊಳ್ಳಲು ಅವಕಾಶವಿರಬೇಕೆಂದು ಪ್ರಯತ್ನಿಸಿದರಾದರೂ ಅದರ ರಕ್ಷಣೆ ಭಾರತ ಸರಕಾರಕ್ಕೆ ಇನ್ನೂ ಅನಧೀಕೃತವಾಗಿಯೇ ಉಳಿಯಿತು. ಈ ಆರ್ಥಿಕ ನಿಯಂತ್ರಣವನ್ನು ಮುಖ್ಯವಾಗಿ ನಾಲ್ಕು ಮಾರ್ಗಗಳಿಂದ ಚಲಾಯಿಸಲಾಗುತ್ತಿತ್ತು.

(ಅ) ಕೇಂದ್ರದಿಂದ ಅನುಮತಿ ಬೇಕಾಗಿದ್ದ ಎಲ್ಲ ಪ್ರಾಂತೀಯ ಮುಂಗಡ ಪತ್ರಗಳನ್ನು ಕಟ್ಟೆಚ್ಚರಿಕೆಯಿಂದ ಪರೀಕ್ಷಿಸಲಾಗುತ್ತಿತ್ತು.

(ಆ) ಆರ್ಥಿಕ ನಿಯಮಾವಳಿಗಳ ತಾಕೀತುಗಳಿಂದ ವೆಚ್ಚವನ್ನು ನಿಯಂತ್ರಿಸಲಾಗುತ್ತಿತ್ತು.

(ಇ) ಹೊಸ ಪ್ರಾಂತೀಯ ತೆರಿಗೆಗಳನ್ನು ವಿಧಿಸುವುದರ ವಿರುದ್ಧ ಅಡ್ಡಿಗಳಿದ್ದವು. ಅದಕ್ಕೆ ಯಾವಾಗಲೂ ಕೇಂದ್ರದ ಅನುಮತಿ ಅಗತ್ಯವಾಗಿತ್ತು.

(ಈ) ಭಾರತದಲ್ಲಿಯಾಗಲಿ, ಇಂಗ್ಲೆಂಡಿನಲ್ಲಾಗಲಿ ಮೂಲ ವೆಚ್ಚಕ್ಕಾಗಿ ಹಣವನ್ನು ಸಾಲ ತೆಗೆಯುವುದನ್ನು ನಿಷೇಧಿಸಿತ್ತು. ಪ್ರಾಂತಗಳು ಸಾಲವನ್ನು ಸೂಚಿಸಿದಾಗಲೆಲ್ಲ ಭಾರತ ಸರಕಾರವು ಹಣವನ್ನು ಸಾಲ ಕೊಡುತ್ತಿತ್ತು.

ಪ್ರಾಂತೀಯ ಶಾಸಕಾಂಗದ ಮೆಲೆ ಕೇಂದ್ರದ ನಿಯಂತ್ರಣ ಎನ್ನುವುದು ಭಾರತ ಸರ್ಕಾರವು ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಯನ್ನು ಅವಲಂಬಿಸಿದುದರ ಪರಿಣಾಮವಾಗಿತ್ತು. ಕೇಂದ್ರ ಮತ್ತು ಪ್ರಾಂತಗಳ ಶಾಸಕಾಂಗ ಅಧಿಕಾರಗಳನ್ನು ಇವು ಎಂದು ಬೇರೆಯಾಗಿ ಗುರುತಿಸಲು ಸಾಧ್ಯವಿರಲಿಲ್ಲ. ಫಲ, ಇಡೀ ಶಾಸಕಾಂಗದ ಕ್ಷೇತ್ರದಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್ ತಾನೇ ತಾನಾಗಿ ಪ್ರಭುತ್ವ ಪಡೆದದ್ದು. ಪ್ರಾಂತಗಳು ಈ ಕ್ಷೇತ್ರಕ್ಕೆ ಪ್ರವೇಶಿಸಬೇಕಾದರೆ ಅದಕ್ಕೆ ಮೊದಲೇ ಕೇಂದ್ರ ಸರ್ಕಾರದ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್ ಅಧಿಕಾರಿಯ ಪೂರ್ವಭಾವಿ ಅನುಮತಿ ಪಡೆಯಲೇಬೇಕಾಗಿತ್ತು. ಅಲ್ಲದೇ ಪ್ರಾಂತೀಯವಾದ ಯಾವುದೇ ಮಸೂದೆಯು ಗವರ್ನರ್ ಜನರಲ್ಲನ ಸಮ್ಮತಿಯಿಲ್ಲದೆ ಆಕ್ಟ್ ಆಗುತ್ತಿರಲಿಲ್ಲ.

ಆಡಳಿತ ಕ್ಷೇತ್ರದಲ್ಲಿಯೂ ನಿಯಂತ್ರಣ ತುಂಬ ವ್ಯಾಪಕವಾಗಿತ್ತು. ಒಂದು ಕಡೆ ಆದ ಆಧುನಿಕ ನಿಯಂತ್ರಣದ ನೇರವಾದ ಫಲ. ಇನ್ನೊಂದು ಕಡೆ, ಇಡೀ ರಾಷ್ಟ್ರದಲ್ಲಿ ಏಕರೂಪದ ಒಂದು ಆಡಳಿತ ವ್ಯವಸ್ಥೆಯನ್ನಿಟ್ಟುಕೊಳ್ಳಬೇಕೆಂಬ ನೀತಿಯ ಪರಿಣಾಮ. ಆಡಳಿತ ನಿರ್ವಹಣೆಯ ಹೊಣೆ ಹೊತ್ತಿದ್ದ ಪಬ್ಲಿಕ್ ಸರ್ವಿಸ್ ಅಧಿಕಾರಿಗಳನ್ನೂ ಸೆಕ್ರೆಟರಿ ಆಫ್ ಸ್ಟೇಟ್ ನೇರವಾಗಿ ತಾನೇ ನೇಮಕ ಮಾಡುತ್ತಿದ್ದನು. ಅವರ ಸೇವಾನಿಯಮಗಳನ್ನು ಆತನೇ ನಿರ್ಧರಿಸುತ್ತಿದ್ದನು. ಕೊನೆಯದಾಗಿ ಆಡಳಿತ ವ್ಯವಸ್ಥೆಯ ಸುಧಾರಣೆ ಮತ್ತು ಪ್ರಗತಿಗೆ ತಕ್ಕ ನೀತಿಗಳನ್ನು ನಿರ್ಣಯಗಳ ರೂಪದಲ್ಲಿ ಮಂಡಿಸುವುದು ಭಾರತ ಸರ್ಕಾರದ ಕರ್ತವ್ಯವಾಗಿತ್ತು. ಪ್ರಾಂತಗಳೇನಿದ್ದರೂ ಈ ನಿರ್ಣಯಗಳನ್ನು ಜಾರಿಗೆ ತರುವುದರಲ್ಲಿ ಕೇಂದ್ರದ ಪ್ರತಿನಿಧಿಗಳಾಗಿ ವರ್ತಿಸುತ್ತಿದ್ದವು.

ಮುಂದಿನ ವಿಶ್ಲೇಷಣೆ ರಾಷ್ಟ್ರದ ಸರಕಾರವು ಒಂದೇ ಆಗಿತ್ತು ಎನ್ನುವುದನ್ನು ತೋರಿಸುತ್ತದೆ. ಪ್ರಾಂತಗಳು ಗಣನೀಯ ಪ್ರಮಾಣದ ಅಧಿಕಾರಗಳನ್ನು ಅನುಭವಿಸುತ್ತಿದ್ದರೂ ಕೂಡ, ನಿಜದಲ್ಲಿ ಕೇಂದ್ರ ಸರ್ಕಾರದ 'ಪ್ರತಿನಿಧಿ' ಗಳಾಗಿದ್ದವು. ಪ್ರಾಂತೀಯ ಅಧಿಕಾರಿಗಳ ವ್ಯಾಪ್ತಿ, ಕೇಂದ್ರದ ನಿಯಂತ್ರಣದ ಸ್ವರೂಪ ಇವು ಒಂದು ಫೆಡರಲ್ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ಸ್ಥಳೀಯ ಅಧಿಕಾರಿಗಳ ಸಂವಿಧಾನಿಕ

ಬೇರ್ಪಡಿಕೆಯಿಂದ ಬರುವಂತದಾಗಿರಲಿಲ್ಲ, ಕ್ರಮೇಣ ವಿಕಾಸಗೊಂಡ ಆಡಳಿತ ವ್ಯವಸ್ಥೆಯಲ್ಲಿರಬಹುದಾದ ಎಲ್ಲ ದೋಷಗಳೂ ಅದರಲ್ಲಿ ಇದ್ದವು. ಅದು ಸ್ಥಳೀಯ ಸರಕಾರಗಳ ಉತ್ಸಾಹವನ್ನು ಕುಂದಿಸಿತು. ಅವು ಕೇಂದ್ರ ಸರಕಾರದ ವಿವಿಧ ಶಾಖೆಗಳ ಅಧೀನವಾಗುವಂತೆ ಮಾಡಿದ್ದಲ್ಲದೆ, ಕೆಳಗಿನ ಮಟ್ಟಗಳಲ್ಲಿಯೂ ಕೂಡ ಜನರ ಹಿತಾಸಕ್ತಿಗಳು ಮತ್ತು ಸರಕಾರದಲ್ಲಿ ಅವರು ಪಾಲುಗೊಳ್ಳುವಿಕೆಗೂ ಅಡ್ಡಲಾಗಿ ನಿಂತಿತು. ಈ ಕೆಡಕುಗಳಲ್ಲಿ ಬಹಳ ಮುಖ್ಯವಾದುದನ್ನು ಈ ರೀತಿ ಪಟ್ಟಿ ಮಾಡಬಹುದು.

(1) ದೇಶೀಯವಾದ ಸ್ವಯಂ ಸರಕಾರ ವ್ಯವಸ್ಥೆಯ -ಗ್ರಾಮ ಪಂಚಾಯಿತಿಯ ಅವನತಿ

(2) ಜನಾಂಗ, ಸಂಸ್ಕೃತಿ ಅಥವಾ ಭಾಷಾ ಸಂಬಂಧಗಳಂತಹ ಒಟ್ಟು ತತ್ವಗಳಿಗೆ ಬೆಲೆಕೊಡದೆ ಪ್ರಾಂತಗಳನ್ನು ಬೇರೆ ಬೇರೆ ಗುಂಪು ಮಾಡಿದುದು.

(3) ಸಾರ್ವಜನಿಕ ತೆರಿಗೆಯಲ್ಲಿ ಅಪಾರವಾದ ಹೆಚ್ಚಳ, ಹಾಗೆಯೇ ವೆಚ್ಚದಲ್ಲೂ, ವಿಶೇಷತಃ ಮಿಲಿಟರಿ ವೆಚ್ಚದ ಹೆಚ್ಚಳ

(4) ಶಿಕ್ಷಣ, ಸಾರ್ವಜನಿಕ ಆರೋಗ್ಯ, ಕೃಷಿ, ಸಹಕಾರ ಮುಂತಾದ ರಾಷ್ಟ್ರ ನಿರ್ಮಾಣ ಚಟುವಟಿಕೆಗಳಿಗೆ ಸಾಕಷ್ಟು ಗಮನ ಕೊಡದೆ ಹೋದುದು.

(5) ದೇಶೀಯವಾದ ಕೈಗಾರಿಕೆ ಮತ್ತು ಚೀನಾವನ್ನು ಕಡೆಗಣಿಸಿದುದು. ಫಲವಾಗಿ ಆಗಾಗ ಕ್ಷಾಮ ಡಾಮರ ಸಾಂಪ್ರದಾಯಿಕಗಳಲ್ಲಿ ಶಿಖರಾವಸ್ಥೆಗೇರುತ್ತಿದ್ದ ಅತಿರೇಖದ ದಾರಿದ್ರ್ಯ ಕಾಣಿಸಿಕೊಂಡದ್ದು.

(6) ಪತ್ರಿಕಾ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ ಮತ್ತು ಚಲನವಲನ ಸ್ವಾತಂತ್ರ್ಯಗಳ ಮೇಲೆ ಅಡ್ಡಿಗಳನ್ನು ಹಾಕಿ ಜನರ ರಾಜಕೀಯ ಚಟುವಟಿಕೆಗಳ ಮೇಲೆ ಅತಿಯಾದ ತಡೆಯುಂಟುಮಾಡಿದುದು.

ಬ್ರಿಟಿಷ್ ಬ್ಯೂರಾ ಕ್ರಸಿಯು ಭಾರತದಲ್ಲಿ ಅನಿವಾರ್ಯವಾಗಿ ವಿಫಲವಾದುದನ್ನು ಗೋಖಲೆಯು ಈ ರೀತಿ ವರ್ಣಿಸಿದರು.

ಎಲ್ಲಿ ಸಾರ್ವಜನಿಕ ಅಭಿಪ್ರಾಯದಿಂದ ನಿಯಂತ್ರಿತವಾಗಿಲ್ಲವೋ ಅಲ್ಲಿ ಸದಸ್ಯರು ತಾವು ಅಧಿಕಾರವನ್ನು ಚಲಾಯಿಸಬೇಕಾದ ನೆಲದಲ್ಲಿ ಕೇವಲ ತಾತ್ಕಾಲಿಕವಾಗಿ ವಾಸಿಸುತ್ತಾರೋ ಅಂತ ಕಡೆ ದೇಶೀಯವಾದ ನೌಕರಶಾಹಿ ಆಡಳಿತವು ಸಾಧಿಸುವ ದಕ್ಷತೆ ಬಹಳ ಮಿತವಾಗಿರುತ್ತದೆ. ಒಂದು ವ್ಯವಸ್ಥಿತವಾದ ಸ್ವಯಂ ಆಡಳಿತದಲ್ಲಿ ಮಾತ್ರವೇ ಸಾಧಿತಲಾಗಬಹುದಾದ ದಕ್ಷತೆಯೊಂದಿಗೆ ಅದನ್ನು ಎಂದಿಗೂ ಹೋಲಿಸಲಾಗುವುದಿಲ್ಲ. ಭಾರತ ಸರ್ಕಾರದ ಪ್ರಸಕ್ತ ಸ್ವರೂಪವು ತೀವ್ರವಾಗಿ ಕೇಂದ್ರೀಕೃತವಾದ ನೌಕರಶಾಹಿ. ಇದರಲ್ಲಿ ಕೇಂದ್ರದ ಅಧಿಕಾರಿಗಳು ಕೇವಲ ಐದು ವರ್ಷಗಳವರೆಗೆ ಅಧಿಕಾರದಲ್ಲಿ ಇರುತ್ತಾರೆ. ಆಮೇಲೆ ಅವರು ರಾಷ್ಟ್ರದ ವೆಚ್ಚದಲ್ಲಿ ಆಡಳಿತ ವಿಚಾರಗಳಲ್ಲಿ ತಾವು ಗಳಿಸಿದ ಎಲ್ಲ ಜ್ಞಾನ ಮತ್ತು ಅನುಭವಗಳನ್ನು ಹೊತ್ತು ತಮ್ಮ ನಾಡಿಗೆ ಹೊರಟು ಹೋಗುತ್ತಾರೆ. ಅವರ ಸ್ಥಾನಗಳಿಸಿ ಹೊಸಬರು ಬರುತ್ತಾರೆ. ಐದು ವರ್ಷವಾದ ಮೇಲೆ ಅವರು ನಿವೃತ್ತರಾಗುತ್ತಾರೆ. ಹೀಗಿರುವಾಗ ಸರಕಾರದಲ್ಲಿ ಯಾವುನೇ ಒಬ್ಬನಾದರೂ ಅಧಿಕಾರ ಶಾಶ್ವತವಾಗಿ ರಾಷ್ಟ್ರಪ್ರೇಮದಲ್ಲಿ ಈ ರಾಷ್ಟ್ರದ ಜನರೇ ಆಸಕ್ತರಾಗಿರುವ ಹಾಗೆ ಆಸಕ್ತನಾದವನು ಉಳಿಯುವುದಿಲ್ಲ. ಇದರ ಒಂದು ಫಲ, ಜನರ ನಿಜವಾದ ಯೋಗಕ್ಷೇಮ ಎನ್ನುವುದು ಕ್ರಮಬದ್ಧವಾಗಿ ಇಂಗ್ಲೀಷ್ ವಾಣಿಜ್ಯ ವರ್ಗದ ಜನರ ಮಿಲಿಟರಿ ಮತ್ತು ಸೇವಾ ಆಸಕ್ತಿಗಳಿಗೆ ಅಧೀನವಾಗುವುದು. ಅಂಥ ವ್ಯವಸ್ಥೆಯಲ್ಲಿ ಶಾಂತಿ ಶಿಸ್ತುಗಳನ್ನು ಸಾಧಿಸಬಹುದಾದರೂ, ಸ್ವಲ್ಪ ಮಟ್ಟಿನ ದಕ್ಷ ಆಡಳಿತ ಸಾಧ್ಯವಾಗಬಹುದಾದರೂ, ಆ ದಕ್ಷತೆಯ ಮಾದರಿ ಯಾವಾಗಲೂ ಕೆಳಮಟ್ಟದ್ದೇ ಆಗಿರುತ್ತದೆ. ಅಲ್ಲದೆ ಅಂಥ ಆಡಳಿತ ದಕ್ಷತೆ ಕೂಡ ಆಳಲ್ಪಡುವವರ ವಿರೋಧ ಬೆಳೆಯುತ್ತಲೇ ಹೋಗುವುದರಿಂದ ಕೆಳಗಿಳಿಯುತ್ತದೆ. ನಿದರ್ಶನವಾಗಿ ಹೇಳುವುದಾದರೆ, ಲಾರ್ಡ್ ಕರ್ಜನ್‌ಗಿಂತ ಹೆಚ್ಚು ಕಷ್ಟಪಟ್ಟು, ಅಧಿಕ ದಕ್ಷತೆಯಿಂದ ದುಡಿದವರು ಬೇರೆ ಇಲ್ಲ. ಆದರೂ ಈತ ಭಾರತವನ್ನು ಬಿಟ್ಟಾಗ ಇದ್ದುದಕ್ಕಿಂತ ಆಳವೂ ವ್ಯಾಪಕವೂ ಆದ ಅತೃಪ್ತಿ ಬೇರೆ ಸಂದರ್ಭದಲ್ಲಿ ಇರಲಿಲ್ಲ. ಈಚಿನ ಕಾಲಗಳಲ್ಲಿನ ಬೇರೆ ಯಾವ ವೈಸರಾಯಿ ಲಾರ್ಡ್ ಮಿಂಟೋನಷ್ಟು ಮಟ್ಟಿಗೆ ಕಷ್ಟಗಳ ಪರಂಪರೆಯನ್ನು ಎದುರಿಸಬೇಕಾಗಲಿಲ್ಲ.

ಭಾರತದಲ್ಲಿ ಅತಿ ಹೆಚ್ಚಾಗಿ ಕೇಂದ್ರೀಕೃತವಾದ ಬ್ರಿಟಿಷ್ ಬ್ಯೂರಾಕ್ರಸಿಯ ವಿಫಲತೆ ಮತ್ತು ಅದರ ದುಷ್ಪರಿಣಾಮಗಳು ಭಾರತದಲ್ಲೂ ಬ್ರಿಟನ್ನಿನಲ್ಲೂ ಗಣನೀಯವಾದ ಟೀಕೆ ವಿಮರ್ಶೆಗಳಿಗೆ ಗುರಿಯಾಗಿದ್ದವು. 1858 ರ ಚಕ್ರವರ್ತಿಯ ಘೋಷಣೆಯ ಕೆಲವು ಭಾಗಗಳು, ಬ್ರಿಟಿಷ್ ಸರಕಾರಕ್ಕೆ ಅವು ಅರಿವಾಗಿದ್ದವು. ಅವುಗಳನ್ನು ಪರಿಹರಿಸಲು ಸರಕಾರ ಉತ್ಸುಕವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಪರಿಹಾರಗಳು ಏನೇ ಇದ್ದರೂ ಎರಡು ತತ್ವಗಳನ್ನು ಒಳಗೊಂಡ ಹೊಸ ನೀತಿಯೊಂದರ ಅನುಸರಣೆಯಲ್ಲಿತ್ತು ಎಂಬುದೂ ಸ್ಪಷ್ಟವಾಗಿತ್ತು. ಆ ನೀತಿಗಳು ವಿಕೇಂದ್ರೀಕರಣ ಮತ್ತು ಆಡಳಿತದಲ್ಲಿ ಪ್ರಜಾಪ್ರಭುತ್ವ, ದುರದೃಷ್ಟವಶಾತ್ ಈ ಕ್ರಿಯೆಗಳು ತೀರಾ ಮಂದಗತಿಯಲ್ಲಿದ್ದವಾಗಿ, ಉಂಟಾದ ಬದಲಾವಣೆಯು ಉದ್ದೇಶಿತವಾದ ದಿಕ್ಕಿನಲ್ಲಿ ಯಾವುದೇ ಉತ್ತಮ ಫಲವನ್ನು ಉಂಟುಮಾಡಲು ಅಸಮರ್ಥವಾಗಿತ್ತು. ಈಗ ನಾವು ಈ ಕ್ರಮಗಳ ಕಡೆಗೆ ಗಮನ ಹರಿಸಬಹುದು. ಇವು ಪ್ರಾರಂಭವಾದದ್ದು 1861 ರ ಇಂಡಿಯನ್ ಕೌನ್ಸಿಲ್ ಆಕ್ಟ್‌ನಿಂದ.

## 75.3 ಇಂಡಿಯನ್ ಕೌನ್ಸಿಲ್ ಆಕ್ಟ್ 1861

ರೆಗ್ಯುಲೇಟಿಂಗ್ ಆಕ್ಟ್ ಕೇಂದ್ರೀಕರಣದ ಕ್ರಿಯೆಯನ್ನು ತೊಡಗಿಸಿದರೆ 1861 ರ ಇಂಡಿಯನ್ ಕೌನ್ಸಿಲ್ ಆಕ್ಟ್ ವಿಕೇದ್ರೀಕರಣದ ಕ್ರಿಯೆಯನ್ನು ಮೊದಲು ಮಾಡಿತು. ಅದು ಇಪ್ಪತ್ತನೆಯ ಶತಮಾನದ ಭಾರತದ ಶಾಸಕಾಂಗವನ್ನು ಕುರಿತ ಪ್ರಧಾನ ಸನ್ನದು. ಬೊಂಬಾಯಿ ಮತ್ತು ಮದರಾಸುಗಳಿಗೆ ಅವು ಕೇಂದ್ರ ಸರಕಾರಕ್ಕೆ ವಹಿಸಿ ಕಳೆದುಕೊಂಡಿದ್ದ ಶಾಸಕ ಅಧಿಕಾರಗಳನ್ನು ಮತ್ತು ಈ ಆಕ್ಟ್ ದೊರಕಿಸಿತು. ಇತರ ಪ್ರಾಂತಗಳಲ್ಲೂ ಅಷ್ಟೇ ಅಧಿಕಾರವುಳ್ಳ ಕೌನ್ಸಿಲ್‌ಗಳನ್ನು ಸ್ಥಾಪಿಸಲು ಅವಕಾಶವಾಯಿತು. ಹೀಗೆ ಶಾಸಕಾಂಗ ವಿಕೇಂದ್ರೀಕರಣದಲ್ಲಿ ಮೊದಲ ಹೆಜ್ಜೆ ಕಂಡು ಬಂದಿತು. ಆದರೆ ಕೌನ್ಸಿಲುಗಳ ಅಧಿಕಾರಗಳ ಮೇಲೆ ಬಹಳ ಕಟ್ಟುನಿಟ್ಟಾದ ತಡೆಗಳೇನೋ ಇದ್ದೆ ಇದ್ದುವು. ಮೊದಲ್ಲೆಲ್ಲಾ ಪ್ರಾಂತೀಯ ಕೌನ್ಸಿಲ್ಲುಗಳಲ್ಲಿ ಅಂಗೀಕೃತವಾದ ಕಾನೂನುಗಳು ತಾವೇ ತಾವಾಗಿ ಜಾರಿಗೆ ಬಂದು ಬಿಡುತ್ತಿದ್ದವು. 1861 ರಿಂದ ಕ್ಷೇಮ ವಿಚಾರಗಳಲ್ಲಿ ಪ್ರಾಂತೀಯ ಕೌನ್ಸಿಲುಗಳ ಶಾಸನಗಳಿಗೆ ಗವರ್ನರ್ ಜನರಲ್ಲರ ಪೂರ್ವ ಭಾವೀ ತಮ್ಮ ತಿ ಅತ್ಯಗತ್ಯವಾಯಿತು. ಎಲ್ಲ ಸಂದರ್ಭಗಳಲ್ಲಿಯೂ ಕಾನೂನು ಸಿಂಧುವಾಗಬೇಕಾಗಿದ್ದರೆ ಗವರ್ನರ್ ಮಾತ್ರವಲ್ಲ, ಗವರ್ನರ್ ಜನರಲ್ಲರ ಸಮ್ಮತಿಯೂ ಅಗತ್ಯವಾಯಿತು. ಹೀಗೆ ಬ್ರಿಟಿಷ್ ಭಾರತದ ಶಾಸನಾಧಿಕಾರ ಸಮಸ್ತಕ್ಕೂ ಗವರ್ನರ್ ಜನರಲ್ ಮುಖ್ಯಸ್ಥನಾದನು.

ಇಲ್ಲಿಯವರೆಗೆ ಪ್ರಾಂತೀಯ ಕೌನ್ಸಿಲ್ಲುಗಳು ಸರಕಾರದ ಕಾರ್ಯ ವ್ಯವಹಾರಗಳ ಮಧ್ಯೆ ಪ್ರವೇಶಿಸುವ ಅಧಿಕಾರ ಹೊಂದಿದ್ದುವು. ಇದು ತೀರಾ ಅನಪೇಕ್ಷಣೀಯ ಎಂದು ಟೀಕೆ ಎದ್ದಿತ್ತು. 1861 ರ ಆಕ್ಟ್ ಈ ದೋಷವನ್ನು ತೆಗೆದು ಹಾಕಿತು. ಹೊಸ ಕೌನ್ಸಿಲ್ಲುಗಳ ಕರ್ತವ್ಯಗಳನ್ನು ಶಾಸನ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿತು.

ಸಿಪಾಯಿ ದಂಗೆ ಎಂದು ಕರೆಯಲಾದ ಪ್ರಾಂತೀಯ ಭೀಕರ ಘಟನೆಗಳು, ಶಾಸಕಾಂಗಕ್ಕೆ ಭಾರತೀಯರನ್ನು ಸೇರಿಸಿಕೊಳ್ಳುವುದರ ಅಪಾಯಗಳು ಏನು ಎಂಬುದನ್ನು ಬ್ರಿಟಿಷ್ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟವು. ಈ ದೋಷವನ್ನು ಪರಿಹರಿಸಲು ಕೊನೆಯ ಪಕ್ಷ ಒಂದು ಪ್ರಾರಂಭವಂತೂ ಆಯಿತು. ಮೊದಲ ಬಾರಿಗೆ ಕೆಲವರು ಭಾರತೀಯರನ್ನು ಕೇಂದ್ರದ ಕೌನ್ಸಿಲಿಗೆ ಸೇರಿಸಿಕೊಂಡುದುದರಿಂದ, ಆಕ್ಟ್ ಹೆಚ್ಚಿನ ಸದಸ್ಯರನ್ನು, ಆರಕ್ಕಿಂತ ಕಡಿಮೆಯಿಲ್ಲದೆ ಹನ್ನೆರಡಕ್ಕಿಂತ ಹೆಚ್ಚಾಗದ ಸಂಖ್ಯೆಯಲ್ಲಿ ಎರಡು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಅವಕಾಶ ನೀಡಿತು. ಅವರಲ್ಲಿ ಅರ್ಧಕ್ಕಿಂತ ಕಡಿಮೆಯಾಗದಷ್ಟು ಜನ ಅಧಿಕಾರಿಗಳಲ್ಲದವರು ಎಂದಾಯಿತು. ಈ ನಿಯಮದ ಉತ್ತರಾರ್ಧದ ಉದ್ದೇಶ ಗವರ್ನರ್ ಜನರಲ್ಲರ ಕೌನ್ಸಿಲ್‌ನಲ್ಲಿ ಕೆಲವರಾದರೂ ಭಾರತೀಯರನ್ನು ಸೇರಿಸಿಕೊಳ್ಳಬೇಕೆನ್ನುವುದು. ಆ ರೀತಿ ಭಾರತೀಯರ ಸೇರ್ಪಡೆಯು ಪ್ರಜಾಪ್ರಭುತ್ವ ರೀತಿಯ ಪ್ರಾತಿನಿಧ್ಯದ ಆಧಾರದಿಂದ ಆಗಿರದಿದ್ದರೂ, ಹಾಗೆ ನಾಮಕರಣಗೊಂಡವರು ಹೆಚ್ಚು ಕಡಿಮೆ ಎಲ್ಲರೂ ಭಾರತೀಯ ರಾಜರೋ ಅವರ ದಿವಾನರೋ ಅಥವಾ ದೊಡ್ಡ ಜಮೀನುದಾರರೋ ಆಗಿದ್ದರೂ ಕೂಡ, ಅದರ ಮಹತ್ವವನ್ನು ಅಲ್ಲಗಳೆಯುವಂತಿರಲಿಲ್ಲ. ಅದು ವಾಸ್ತವವಾಗಿ ಸರಕಾರದಲ್ಲಿ ಭಾರತೀಯ ಪ್ರಾತಿನಿಧ್ಯ ಎಂಬ ತತ್ವವನ್ನು ಮಾನ್ಯ ಮಾಡಿದುದರ ಫಲವಾಗಿತ್ತು. ಆದ್ದರಿಂದಲೇ ಹೊಸತೊಂದು ಮಾನೋಭಾವದ ಪ್ರಾರಂಭವನ್ನು ಅದು ಗುರುತಿಸಿತು.

## 75.4 ಇಂಡಿಯನ್ ಕೌನ್ಸಿಲ್ ಆಕ್ಟ್, 1892

ಅನತಿಕಾಲದಲ್ಲೇ 1861 ರ ಆಕ್ಟ್ ಪ್ರಕಾರ ಸ್ಥಾಪಿಸಿದ ಕೌನ್ಸಿಲುಗಳು ಸಾಲವು ಎಂಬುದು ಕಂಡುಬಂದಿತು. ಅದರಲ್ಲಿ ಭಾರತೀಯ ಪ್ರಾತಿನಿಧ್ಯವನ್ನು ಹೆಚ್ಚಿಸಬೇಕು ಎಂಬ ಒತ್ತಾಯದ ಬೇಡಿಕೆ ಅಧಿಕವಾಯಿತು. ಹೊಸದಾಗಿ ಸ್ಥಾಪಿತವಾದ ಕಲ್ಕತ್ತ ಮದರಾಸು ಮತ್ತು ಬೊಂಬಾಯಿ ವಿಶ್ವ ವಿದ್ಯಾನಿಲಯಗಳು ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿ ಸಾರ್ವಜನಿಕ ವ್ಯವಹಾರಗಳಿಗೆ ತಕ್ಕ ಶಿಕ್ಷಣ ಮತ್ತು ಅನುಭವವುಳ್ಳ ಭಾರತೀಯರ ಸಂಖ್ಯೆಯನ್ನು ಹೆಚ್ಚು ಮಾಡಿ ಆ ಬೇಡಿಕೆಯನ್ನು ಪೋಷಿಸಿದವು. 1885 ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಉದಯವಾದದ್ದು ಬೇಡಿಕೆಯನ್ನು ಒತ್ತಿ ಹೇಳುವುದಕ್ಕೆ, ಅಧಿಕಾರಿಗಳಿಗೆ ಅದನ್ನು ಮನದಟ್ಟು ಮಾಡಿಕೊಡುವುದಕ್ಕೆ ಒಂದು ರಂಗವನ್ನು ನಿರ್ಮಿಸಿತು. ಆದ್ದರಿಂದ ಸರಕಾರವು ಕೌನ್ಸಿಲುಗಳ ಸುಧಾರಣೆಗೆ ಗಮನ ಕೊಡಬೇಕಾಯಿತು. ಇದರ ಫಲವೇ 1892 ರ ಇಂಡಿಯನ್ ಕೌನ್ಸಿಲ್ ಆಕ್ಟ್. ಆಗ ಭಾರತಕ್ಕೆ ಅಂಡರ್ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ್ ಕರ್ಜನ್ ಈ ಆಕ್ಟ್‌ನ ಉದ್ದೇಶವನ್ನು ಹೀಗೆ ವಿವರಿಸಿದನು. "ಭಾರತ ಸರಕಾರದ ತಳಹದಿಯನ್ನು ವಿಶಾಲಗೊಳಿಸಿ, ಕರ್ತವ್ಯಗಳನ್ನು ವಿಸ್ತರಿಸುವುದು ಭಾರತೀಯ ಸಮಾಜದ ದೇಶೀಯ ಮತ್ತು ಅಧಿಕಾರಗಳಲ್ಲದ ಜನರಿಗೆ ಸರಕಾರದ ಕೆಲಸದಲ್ಲಿ ಪಾಲ್ಗೊಳ್ಳಲು ಇನ್ನೂ ಹೆಚ್ಚಿನ ಅವಕಾಶಗಳನ್ನು ಒದಗಿಸುವುದು; ಆ ರೀತಿಯಾಗಿ 1858 ರಲ್ಲಿ ಭಾರತದ ಸರಕಾರದ ಆಡಳಿತವನ್ನು ಪ್ರಭುತ್ವವು ಕೈಗೆತ್ತಿಕೊಂಡಂದಿನಿಂದ ಭಾರತ ಸಮಾಜದ ಉನ್ನತ ವರ್ಗಗಳಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಬೆಳೆದು ಕಾಣಿಸಿದ ರಾಜಕೀಯ ಆಸಕ್ತಿ ಮತ್ತು ಸಾಮರ್ಥ್ಯಗಳಿಗೆ ಅಧಿಕೃತ ಮನ್ನಣೆ ನೀಡುವುದು".

ಕೌನ್ಸಿಲುಗಳ ಸದಸ್ಯತ್ವ ಸಂಖ್ಯೆಯ ಹೆಚ್ಚಳಕ್ಕೆ ಆಕ್ಟ್ ಅವಕಾಶ ಮಾಡಿತು. ಆದರೆ ಸದಸ್ಯರ ಆಯ್ಕೆಯ ವಿಧಾನದ ವಿಷಯದಲ್ಲಿ ಮಟ್ಟಿಗೆ ಭಿನ್ನಾಭಿಪ್ರಾಯವಿತ್ತು. ಸಂಪ್ರದಾಯವಾದಿಗಳು ಆ ಹಂತದಲ್ಲಿ ಚುನಾವಣೆ ಸರ್ವದಾ ಆಯುಕ್ತ ಎಂದು ಭಾವಿಸಿದರು. ಲಿಬರಲ್ ಪಕ್ಷದವರು ಇದಕ್ಕೆ ವಿರುದ್ಧವಾಗಿ ಚುನಾವಣೆಯ ತತ್ತ್ವವನ್ನು ಪರಿಚಯ ಮಾಡಲೇಬೇಕು ಎಂದು ಆಲೋಚಿಸಿದರು. ಕೊನೆಗೆ ಒಂದು ಮಧ್ಯಸ್ತಿಕೆಯ ಸೂತ್ರವನ್ನು ಅನುಸರಿಸಲಾಯಿತು. ನಾಮಕರಣ ಮಾಡುವುದಕ್ಕೆ ಮುಂಚಿತವಾಗಿ ಸರಕಾರವು ಪೌರಸಭೆ, ಜಿಲ್ಲಾ ಮಂಡಲಿ, ವಿಶ್ವವಿದ್ಯಾನಿಲಯ, ಚೇಂಬರ್ ಆಫ್ ಕಾಮರ್ಸ್, ಜಮೀನುದಾರರು ಮುಂತಾದ ಸಂಸ್ಥೆಗಳ ಸಲಹೆ ಪಡೆದುಕೊಳ್ಳತಕ್ಕದ್ದು ಎಂದು ತೀರ್ಮಾನವಾಯಿತು. ಈ ಸಂಸ್ಥೆಗಳು ಶಿಫಾರಸ್ಸು ಮಾಡಬಹುದಾಗಿದ್ದಿತು ಅಷ್ಟೇ. ಸೆಕ್ರೆಟರಿ ಆಫ್ ಸ್ಟೇಟ್‌ನ ಸಮ್ಮತಿಯಂತೆ ಈ ಶಿಫಾರಸ್ಸುಗಳನ್ನು ಒಪ್ಪುವ ಅಥವಾ ಬಿಡುವ ಅಧಿಕಾರ ಸರಕಾರಕ್ಕೆ ಇದ್ದೇ ಇತ್ತು.

## 75.5 ಉಪಸಂಹಾರ

ಕೌನ್ಸಿಲ್ಲುಗಳ ಕರ್ತವ್ಯಗಳನ್ನು ವಿಸ್ತರಿಸುವುದಕ್ಕೂ ಅಷ್ಟು ಅವಕಾಶ ಮಾಡಿಕೊಟ್ಟಿತು. ಇದರ ಫಲವಾಗಿ, ಶಾಸಕಾಂಗ ಕರ್ತವ್ಯಗಳ ಜೊತೆಗೆ ಕೌನ್ಸಿಲುಗಳು ವಾರ್ಷಿಕ ಆರ್ಥಿಕ ವರದಿಯನ್ನು ಕುರಿತು ಚರ್ಚೆ ನಡೆಸುವ ಹಾಗೂ ವಿಧಿಸಿದ ನಿಯಮಾವಳಿಗಳು ಮತ್ತು ಮಿತಿಗಳ ಪ್ರಕಾರ ಪ್ರಶ್ನೆಗಳನ್ನು ಕೇಳುವ ಅಧಿಕಾರವನ್ನು ಪಡೆದವು.

## 75.6 ಮಾದರಿಯ ಪ್ರಶ್ನೆಗಳು

(1) 1858 ರ ಕಾಯ್ದೆಯ ಸಂವಿಧಾನಾತ್ಮಕ ಮಹತ್ವವೇನು? ಭಾರತದಲ್ಲಿ ಅದು ವಸಾಹತುಶಾಹಿ ಸರ್ಕಾರವನ್ನು ಭದ್ರಪಡಿಸಲು ಹೇಗೆ ನೆರವಾಯಿತು ವಿವರಿಸಿ.

(2) ಬ್ರಿಟಿಷ್ ರಾಣಿಯ ಘೋಷಣೆಯು ಭಾರತದಲ್ಲಿ ಆಡಳಿತ ಬೆಳವಣಿಗೆಯನ್ನು ಕುಂಠಿತಗೊಳಿಸಲು ವಿಷಾದಿಸಿ.

## 75.7 ಪರಾಮರ್ಶನ ಕೃತಿಗಳು


| | | |
|---|---|---|
| 1. M.V. Pylle | : | "the Constitutional History of India |
| 2. Coupland .R. | : | Constitutional Problem in India (1949) |
| 3. Cowell, Herbert | : | History and Constitution of the Courts and Legislative, Authorities in India (1936) |
| 4. Cumming, Sir John | : | Modern India (1932) |



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

# ಟಿಪ್ಪಣಿಗಳು

# ಘಟಕ - 76

## ಭಾರತ ಸರ್ಕಾರ - 1858 ರಿಂದ 1905

76.0 ಪ್ರಸ್ತಾವನೆ

76.1 ಭಾರತೀಯ ಸರ್ಕಾರ

76.2 ಉಪಸಂಹಾರ

76.3 ಮಾದರಿ ಪ್ರಶ್ನೆಗಳು

76.4 ಪರಾಮರ್ಶನ ಕೃತಿಗಳು

## 76.0 ಪ್ರಸ್ತಾವನೆ

ಬೋರ್ಡ್ ಆಫ್ ಕಂಟ್ರೋಲಿನ ಅಥವಾ ಹೆಚ್ಚು ಯುಕ್ತವಾಗಿ ಅದರ ಅಧ್ಯಕ್ಷ ಮತ್ತು ಕೋರ್ಟ್ ಆಫ್ ಡೈರಕ್ಟರುಗಳ ದ್ವಿ ಅಧಿಕಾರವನ್ನು 1858 ರ ಕಾಯ್ದೆ ಕೊನೆಗೊಳಿಸಿತು. ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆದ ಪಾರ್ಲಿಮೆಂಟರಿ ಮಂತ್ರಿಗೆ ಭಾರತ ಸರ್ಕಾರದ ಮೇಲೆ ಸಂಪೂರ್ಣ ನಿಯಂತ್ರಣದ ಅಧಿಕಾರಗಳನ್ನು ಈಗ ನೀಡಲಾಗಿತ್ತು. ಭಾರತದ ಬಗ್ಗೆ ಇಂಗ್ಲೀಷ್ ರಾಜಕಾರಣಿಗಳ ಸಾಮಾನ್ಯ ಜ್ಞಾನದ ಅಭಾವದ ದೃಷ್ಟಿಯಿಂದ ಮತ್ತು ಏಕೈಕ ವ್ಯಕ್ತಿಯಿಂದ ಇಂತಹ ಮಹಾ ಅಧಿಕಾರ ಹಾಗೂ ಸಹಾಯ ನಡೆಸುವುದನ್ನು ನಿಯಂತ್ರಿಸುವ ದೃಷ್ಟಿಯಿಂದ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಸಲಹೆ ನೀಡಲು ಒಂದು ಕೌನ್ಸಿಲನ್ನು ರಚಿಸಲಾಯಿತು. ಭಾರತದ ಕೌನ್ಸಿಲ್‌ನಲ್ಲಿ (Council of India) ಭಾರತದ ಬಗ್ಗೆ ಅನುಭವ ಪಡೆದ ಸದಸ್ಯರಿದ್ದರು. ಸದಸ್ಯರಿಗೆ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸ್ವಾತಂತ್ರ್ಯವಿರುವ ದೃಷ್ಟಿಯಿಂದ ಅವರನ್ನು ಸದ್ ವ್ಯವಹಾರದ ಕಾಲದಲ್ಲಿ ನೇಮಕ ಮಾಡಲಾಗುತ್ತಿತ್ತು. ಅವರಿಗೆ ನಿರ್ದಿಷ್ಟ ಅಧಿಕಾರಗಳನ್ನು ನೀಡಲಾಗಿತ್ತು ಮತ್ತು ಭಾರತದ ಆದಾಯದ ವೆಚ್ಚ ಹಾಗೂ ವಿನಿಯೋಗಕ್ಕೆ ಹಾಗೂ ವೈಸರಾಯ್ ಮಂಡಳಿಯ ಸಾಮಾನ್ಯ ಸದಸ್ಯರ ನೇಮಕಕ್ಕೆ ಅವರ ಅಂಗೀಕಾರ ಅವಶ್ಯವಾಗಿತ್ತು. ಆದರೆ ಸೆಕ್ರೆಟರಿ ಆಫ್ ಸ್ಟೇಟ್ ತನ್ನ ಕೌನ್ಸಿಲಿಗೆ ಸಂಪೂರ್ಣವಾಗಿ ಅಧೀನನಾಗಿರಲಿಲ್ಲ; ತುರ್ತು ಹಾಗೂ ಗುಪ್ತ ವಿಷಯಗಳ ಬಗ್ಗೆ ತಾನೇ ಅಧಿಕಾರ ಚಲಾಹಿಸಬಹುದಿತ್ತು. ನೀತಿ ನಿರ್ಧರಿಸುವಲ್ಲಿ ಕೌನ್ಸಿಲಿಗೆ ಪರಿಣಾಮಕಾರಿ ಪಾತ್ರ ಇರಬಹುದೆಂದು ಆಶಿಸಲಾಗಿತ್ತು.

ಪ್ರಮುಖ ವಿಷಯಗಳಲ್ಲೆಲ್ಲ ಸೆಕ್ರೆಟರಿ ಆಫ್ ಸ್ಟೇಟ್ ತನ್ನ ಕೌನ್ಸಿಲನ್ನು ನಿರ್ಲಕ್ಷಿಸುವುದು ಬಹುಬೇಗನೇ ಸ್ಪಷ್ಟವಾಗಿ ಕಂಡು ಬಂದಿತು. 1869 ರ ಕಾಯ್ದೆಯಿಂದ ಅವನ ಸ್ಥಾನವನ್ನು ಕಾನೂನು ಬದ್ಧಗೊಳಿಸಲಾಯಿತು. ಈ ಕಾಯ್ದೆಯಿಂದ ಕೌನ್ಸಿಲ್‌ನ ಬಹುಪಾಲು ಅಧಿಕಾರಗಳನ್ನು ಕಿತ್ತುಕೊಳ್ಳಲಾಯಿತು; ಅಲ್ಲದೆ ಕೌನ್ಸಿಲ್‌ನ ಸದಸ್ಯರ ಅಧಿಕಾರಾವಧಿ ಕೇವಲ ಹತ್ತು ವರ್ಷಗಳಾಗಿದ್ದು ಇದನ್ನು ಸೆಕ್ರೆಟರಿ ಆಫ್ ಸ್ಟೇಟ್‌ನ ಇಚ್ಛಾನುಸಾರ ಮುಂದುವರೆಸಬಹುದಿತ್ತು. ಈ ಬದಲಾವಣೆಯನ್ನು ಸರ್ ಚಾರ್ಲ್ಸ್ ಡಿಲ್ಕೆ ಕಾಮನ್ಸ್ ಸಭೆಯಲ್ಲಿ ಸ್ಪಷ್ಟವಾಗಿ ಸೂಚಿಸಿದನು. "ಸೆಕ್ರೆಟರಿ ಆಫ್ ಸ್ಟೇಟ್‌ನ ಅಧಿಕಾರಕ್ಕೆ ಸಾಧ್ಯವಾದಷ್ಟು ತಡೆ ಹಾಕುವುದೇ ಕೌನ್ಸಿಲ್ ನೇಮಿಸಿದ ಸಮಯದಲ್ಲಿ ಇದ್ದ ಭಾವನೆಯಾಗಿತ್ತು. ಆದರೆ ಆ ಭಾವನೆ ಈಗಿಲ್ಲವಾಗಿದೆ ಮತ್ತು ಕೌನ್ಸಿಲ್ ಈಗ ಎಲ್ಲ ರೀತಿಯಲ್ಲೂ ಸುಹಾತ್ಮಕ ಅಂಗವಾಗಿವೆಯೇ ವಿನಾಃ ನಿಯಂತ್ರಣಾಂಗವಾಗಿಲ್ಲವೆಂದು ಗುರುತಿಸಲಾಗಿದೆ".

ಇತರ ಯಂತ್ರಗಳಂತೆ, ಸೆಕ್ರೆಟರಿ ಆಫ್ ಸ್ಟೇಟ್ ಸಹ ಬ್ರಿಟಿಷ ಪಾರ್ಲಿಮೆಂಟಿಗೆ ಹೊಣೆಗಾರನಾಗಿದ್ದನು. ಆದರೆ, ಇಂಗ್ಲೀಷ್ ರಾಜಕಾರಣಿಗಳಾಗಿ ಭಾರತದ ವ್ಯವಹಾರಗಳ ಬಗ್ಗೆ ತಿಳುವಳಿಕೆ ಕಡಿಮೆಯಾಗಿದ್ದು ಅವರು ಭಾರತದ ವ್ಯವಹಾರಗಳ ಬಗ್ಗೆ ಅಲ್ಪಾಸಕ್ತರಾಗಿದ್ದುದರಿಂದ ಭಾರತದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಮೇಲೆ ಪಾರ್ಲಿಮೆಂಟಿನ ನಿಯಂತ್ರಣ ಕಾರ್ಯರೂಪಕ್ಕೆ ಬರಲೇ ಇಲ್ಲ. ಆದ್ದರಿಂದ ಭಾರತ ಸರ್ಕಾರದ ಮೇಲೆ ಸೆಕ್ರೆಟರಿ ಆಫ್ ಸ್ಟೇಟಿಗೆ ಕಾನೂನಿನ ದೃಷ್ಟಿಯಿಂದಲ್ಲದಿದ್ದರೂ ಕಾರ್ಯ ರೂಪದಲ್ಲಿ ಹೆಚ್ಚಿನ ಅಧಿಕಾರವಿತ್ತು. ವೈಟ್ ಹಾಲ್‌ನಲ್ಲಿನ ಸ್ವದೇಶ ಸರಕಾರ ಮತ್ತು ಭಾರತದಲ್ಲಿನ ಸರಕಾರಗಳ ನಡುವಣ ಸಂಬಂಧದ ಮೇಲೆ ಇದು ಸಹಜವಾಗಿ ತನ್ನದೇ ಆದ ಪ್ರತಿಕ್ರಿಯೆ ಪಡೆದಿತ್ತು.

1858 ರ ಕಾಯ್ದೆ ಭಾರತ ಸರ್ಕಾರಕ್ಕೆ ಒಡೆಯನ ಬದಲಾವಣೆಯಲ್ಲದೆ ಮತ್ತೇನೂ ಅಲ್ಲವೆಂಬಂತೆ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದರೆ ವಾಸ್ತವವಾಗಿ ಅದು ಗಮನಾರ್ಹ ಬದಲಾವಣೆಗಳನ್ನು ಉಂಟುಮಾಡಿತ್ತು.

ಕೋರ್ಟ್ ಆಫ್ ಡೈರೆಕ್ಟರ್ಸ್ ಹಾಗೂ ಬೋರ್ಡ್ ಆಫ್ ಕಂಟ್ರೋಲ್‌ಗಳ ಅಧಿಕಾರ ಮಿನಿಸ್ಟರ್ ಆಫ್ ಸ್ಟೇಟ್‌ನಲ್ಲಿ ಕೇಂದ್ರೀಕೃತವಾಗಿದ್ದು, ಇದು ಮುಖ್ಯ ಪರಿಣಾಮಗಳಿಗೆ ಕಾರಣವಾಯಿತು. ಇಬ್ಬರಿಗೆ ಸೇವೆ ಸಲ್ಲಿಸುವುದು ಪ್ರಯಾಸಕರವಾದುದಾದರೂ ಅದರಲ್ಲಿ ಕೆಲವು ಅನುಕೂಲಗಳಿದ್ದವು. ಇಬ್ಬರ ನಡುವೆ ಇದ್ದ ಖಾಯಂ ವೈರದ ಬಗ್ಗೆ ಸಂಪೂರ್ಣವಾಗಿ ಅರಿತಿದ್ದ ಸಮರ್ಥ ಹಾಗೂ ವ್ಯವಹಾರ ನಿಪುಣ ಗವರ್ನರ್ ಜನರಲ್ ಒಬ್ಬರ ಮೇಲೊಬ್ಬರನ್ನು ಎತ್ತಿ ಕಟ್ಟಬಹುದಿತ್ತು ಮತ್ತು ತನ್ನದೇ ಆದ ಮಾರ್ಗಗಳನ್ನು ಹೊಂದಿದ್ದು, ಆ ರೀತಿ ಮಾಡುತ್ತಲೂ ಇದ್ದ. ಇಷ್ಟೇ ಅಲ್ಲ, ಈ ಎರಡು ಅಧಿಕಾರ ವರ್ಗಗಳ ನಡುವಣ ವೈರ ಅವು ಸಮರ್ಥವಾದ ಹಾಗೂ ಸತ್ವಪೂರ್ಣ ನೀತಿಯನ್ನು ರೂಪಿಸುವುದಕ್ಕೆ ಅಡ್ಡಿಯಾಗಿತ್ತು. ಇಂಥ ನೀತಿಯನ್ನು ಭಾರತ ಸರ್ಕಾರ ಅನುಮೋದಿಸಲಿಲ್ಲ. ಅಲ್ಲದೆ, ಮಿನಿಸ್ಟರ್ ಆಫ್ ಸ್ಟೇಟ್ ಯಾವಾಗಲೂ ಬೋರ್ಡ್ ಆಫ್ ಕಂಟ್ರೋಲ್‌ನ ಅದ್ಯಕ್ಷನಿಗಿಂತ ಹೆಚ್ಚಿನ

ಪ್ರಭಾವಹೊಂದಿದವನಾಗಿರುತ್ತಿದ್ದ. ನಾವು ಈಗಾಗಲೇ ಗಮನಿಸಿರುವಂತೆ ಪ್ರಸಕ್ತ ಸಂದರ್ಭದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ವಾಸ್ತವವಾಗಿ ಯಾವುದೇ ನಿಯಂತ್ರಣವಿಲ್ಲದೆ ತನ್ನ ಅಧಿಕಾರ ಚಲಾಯಿಸುತ್ತಿದ್ದ ಮತ್ತು ಅವನು ವಾಸ್ತವವಾಗಿ ಹೆಚ್ಚಿನ ಪ್ರಭಾವ ಬೀರಬಹುದಾಗಿತ್ತು. ಅಲ್ಲದೆ, 1858 ರ ಕಾಯ್ದೆ ಇಂಡಿಯಾ ಕೌನ್ಸಿಲ್‌ಗೆ ಭಾರತ ಸರ್ಕಾರವಿತ್ತ ನೀತಿಯ ಮೇಲೆ ಹೆಚ್ಚಿನ ಅಧಿಕಾರಗಳನ್ನು ನೀಡಿತು. ಈ ಅಧಿಕಾರಿಗಳು ಕ್ರಮೇಣ ಸೆಕ್ರೆಟರಿ ಆಫ್ ಸ್ಟೇಟ್ ಕೈ ಸೇರಿದವು ಮತ್ತು ವೈಸರಾಯ್ ಹಾಗೂ ಅವನ ಕೌನ್ಸಿಲ್‌ನ ಮೇಲೆ ಪರಿಣಾಮಕಾರಿ ನಿಯಂತ್ರಣ ಬೀರಲು ಸಹಾಯ ಮಾಡಿಕೊಟ್ಟಿತ್ತು.

ಆದರೆ ಶಾಸನಗಳನ್ನು ರೂಪಿಸುವುದರ ಜೊತೆಗೆ, ಸೆಕ್ರೆಟರಿ ಆಫ್ ಸ್ಟೇಟ್‌ನ ಅಧಿಕಾರಗಳನ್ನು ಹೆಚ್ಚಿಸುವ ಇತರ ಅಂಶಗಳೂ ಇದ್ದವು. ಇಂಗ್ಲೆಂಡ್ ಹಾಗೂ ಭಾರತದ ನಡುವೆ 1870 ರಲ್ಲಿ ನೇರ ತಂತಿ ವ್ಯವಸ್ಥೆಯನ್ನು ಸ್ಥಾಪಿಸಿದುದು ವಿಶೇಷ ಪರಿಣಾಮಕಾರಿ ಪ್ರಾಮುಖ್ಯ ಪಡೆದಿತ್ತು. ತುರ್ತು ವಿಷಯಗಳಲ್ಲಿ ಅವಶ್ಯವಾದಂಥ ಸಂದರ್ಭಗಳಲ್ಲಿ ನೀತಿಯ ಆರಂಭ ತನ್ನ ಕೈಯಲ್ಲಿರುವಾಗ, ಸಂಪರ್ಕದಲ್ಲಿನ ಈ ವಿಳಂಬ ಭಾರತ ಸರ್ಕಾರಕ್ಕೆ ಹೆಚ್ಚು ಅನುಕೂಲಕರವಾದುದಾಗಿತ್ತು ಹಾಗೂ ಸೆಕ್ರೆಟರಿ ಆಫ್ ಸ್ಟೇಟ್ ಅನ್ನು ಸಾಧಿತ ವಾಸ್ತವಾಂಶಗಳಿಂದ ಎದುರಿಸಲು ಸಾಧ್ಯಮಾಡಿಕೊಟ್ಟಿತು. ಭಾರತದಲ್ಲಿ ಘಟನಾವಳಿಗಳನ್ನು ನಿರಂತರವಾಗಿ ಸೆಕ್ರೆಟರಿ ಆಫ್ ಸ್ಟೇಟ್‌ಗೆ ತಿಳಿಸಿ, ಅವನಿಂದ ತಕ್ಷಣದ ಆದೇಶಗಳನ್ನು ಪಡೆಯುವ ಸ್ಥಿತಿಯಲ್ಲಿದ್ದಾಗ ಇವೆಲ್ಲವೂ ಬದಲಾಗಲೇಬೇಕಿತ್ತು. ಎಂದಿಗಿಂತ ಈಗ ಸೆಕ್ರೆಟರಿ ಆಫ್ ಸ್ಟೇಟ್ ಭಾರತದ ಆಡಳಿತದ ಮೇಲೆ ಹೆಚ್ಚು ಪರಿಣಾಮಕಾರಿ ನಿಯಂತ್ರಣ ಹೊಂದಿದ್ದ ಮತ್ತು ವೈಸರಾಯ್ ಈಗ ವಾಸ್ತವವಾಗಿ ಸೆಕ್ರೆಟರಿ ಆಫ್ 'ನಿಯೋಗಿ' ಮಾತ್ರವಾಗಿದ್ದ.

## 76.1 ಭಾರತೀಯ ಸರ್ಕಾರ

ನಾವು ಈಗಾಗಲೇ ಗಮನಿಸಿರುವಂತೆ, ಭಾರತ ಸರ್ಕಾರವನ್ನು 1858 ರಲ್ಲಿ ಚಕ್ರವರ್ತಿ ಸ್ವತಃ ತಾನೇ ವಹಿಸಿಕೊಂಡಾಗ ಭಾರತದಲ್ಲಿನ ಉನ್ನತ ಶಾಸಕಾಂಗ ಹಾಗೂ ಕಾರ್ಯಾಂಗಾಧಿಕಾರಿಗಳು ಗವರ್ನರ್ ಜನರಲ್-ಇನ್-ಕೌನ್ಸಿಲ್‌ನ ಕೈಸೇರಿತು. ಕಾರ್ಯಾಂಗದ ಅಧಿಕಾರಿಗಳಿಗಾಗಿ ಗವರ್ನರ್ ಜನರಲ್ ನಾಲ್ವರು ಸಾಮಾನ್ಯ ಸದಸ್ಯರು (ಹತ್ತು ವರ್ಷಗಳ ಅವಧಿಯ ಮೂವರು ಅಧಿಕಾರಿಗಳು ಮತ್ತು ಒಬ್ಬ ಬ್ಯಾರಿಸ್ಟರ್) ಮತ್ತು ವಿಶೇಷ ಸದಸ್ಯನಾದ ಕಮ್ಯಾಂಡರ್-ಇನ್-ಚೀಫ್ ಇವರಿಂದ ಕೂಡಿದ ಅಂದವಾಗಿತ್ತು. ಶಾಸನ ಕಾರ್ಯಗಳಿಗಾಗಿ ಈ ಅಂಗಕ್ಕೆ 1853 ರಲ್ಲಿ ಆರು ಮಂದಿ ಸದಸ್ಯರನ್ನು ಸೇರಿಸಲಾಯಿತು.

1853 ರ ಬದಲಾವಣೆ ಭಾರತದಲ್ಲಿ ಪಾರ್ಲಿಮೆಂಟರಿ ವ್ಯವಸ್ಥೆಯ ಸಾಧಾರಣ ರೀತಿಯ ಆರಂಭದ ಕುರುಹಾಗಿದೆ. ಆದ್ದರಿಂದ ಅದರ ಬಗ್ಗೆ ವಿಶೇಷ ಗಮನ ನೀಡಬೇಕಾದುದು ಅಗತ್ಯ. ಕೊವೆಲ್‌ನ ಅಭಿಪ್ರಾಯವೆಂದರೆ "ಚರ್ಚೆ ಲಿಖಿತ ರೂಪವಾಗಿರುವ ಬದಲು ವಾಕ್ ರೂಪದ್ದಾಯಿತು; ಮಸೂದೆಗಳನ್ನು ಏಕ ಸದಸ್ಯನಿಗೆ ಕಳುಹಿಸುವುದರ ಬದಲು ಸೆಲೆಕ್ಟ್ ಸಮಿತಿಗೆ ಕಳುಹಿಸಲಾಗಿತ್ತು; ಮತ್ತು ಶಾಸನ ವ್ಯವಹಾರಗಳು ಗುಪ್ತವಾಗಿಲ್ಲದೆ ಬಹಿರಂಗವಾಗಿ ನಡೆಯಲಾರಂಭಗೊಂಡವು.

ಆದಾಗ್ಯೂ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಎರಡು ದೊಡ್ಡ ನ್ಯೂನತೆಗಳಿದ್ದವು. ಯಾವ ಭಾರತೀಯನೂ ಅದರೊಡನೆ ಸಂಬಂಧ ಪಡೆದಿರಲಿಲ್ಲ; ಮತ್ತು ಇತರ ಪ್ರಾಂತಗಳಿಗೆ ಅನ್ವಯಿಸುವಂತೆ ಕಾನೂನುಗಳನ್ನು ಮಾಡಲು ಬಂಗಾಳದ ಹೊರಗಡೆಯ ಸ್ಥಳೀಯ ಸ್ಥಿತಿಗತಿಗಳ ಬಗ್ಗೆ ಅದರ ಜ್ಞಾನ ಅಪೂರ್ಣವಾಗಿದ್ದಿತು.

ಈ ನ್ಯೂನತೆಗಳ ಪೈಕಿ ಮೊದಲನೆಯ ನ್ಯೂನತೆ 1857 - 1859 ರ ದಂಗೆ ಕಾಲದಲ್ಲಿ ಅನೇಕರಿಗೆ ಮನದಟ್ಟಾಯಿತು. "ದಂಗೆಯ ಭಯಂಕರ ಘಟನೆಗಳು ದೇಶದ ಶಾಸನ ಕಾರ್ಯಗಳಲ್ಲಿ ಭಾರತೀಯರ ಸಂಬಂಧವನ್ನು ಸಂಪೂರ್ಣವಾಗಿ ದೂರವಿಡುವುದರಿಂದ ತಲೆದೋರುವ ಅಪಾಯಗಳ ಬಗ್ಗೆ ಅರಿವನ್ನುಂಟು ಮಾಡಿದವು" ಸರ್ ಸಯದ್ ಅಹಮದ್ ರಂತಹ ಭಾರತೀಯ ಜ್ಞಾನಿಗಳು ಈ ಅಪಾಯದ ಎರಡು ರೀತಿಯ ಲಕ್ಷಣಗಳನ್ನು ಸೂಚಿಸಿದರು. ಒಂದು ಕಡೆ, ಜನತೆಗೆ ಯಾವುದೇ ರೀತಿಯ ಅಪ್ರಿಯ ಕ್ರಮದ ವಿರುದ್ಧ ಯಾವ ತರದ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಅವಕಾಶವಿರಲಿಲ್ಲ; ಮತ್ತು ಮತ್ತೊಂದು ಕಡೆ ಸರ್ಕಾರ ತನ್ನ ಧ್ಯೇಯೋದ್ದೇಶಗಳನ್ನು ವಿವರಿಸುವ ಅವಕಾಶವನ್ನು ಕಳೆದುಕೊಂಡಿತ್ತು. ಹೀಗಾಗಿ ಜನತೆ ಇದನ್ನು ಅಪಾರ್ಥಮಾಡಿಕೊಳ್ಳುತ್ತಿತ್ತು. ಇಂಗ್ಲೀಷ್ ರಾಜಕಾರಣಿಗಳು ಸಹ ಈ ಅಭಿಪ್ರಾಯವನ್ನು ಅನುಮೋದಿಸಿದರು. "ಜನತೆಗೆ ಶಾಸನಗಳು ಸೂಕ್ತವಾಗಿವೆಯೇ ಇಲ್ಲವೇ ಎಂಬುದನ್ನು ಕ್ರಾಂತಿಯೊಂದಲ್ಲದೇ ಅರಿಯುವ ಬೇರೆ ಕೆಲವೇ ಕ್ರಮಗಳ ಮೂಲಕ ಕೋಟ್ಯಂತರ ಜನತೆಗೆ ಶಾಸನಗಳನ್ನು ಮಾಡುವ ಅಪಾಯಕಾರಿ ಪ್ರಯೋಗವನ್ನು

ಮುಂದುವರೆಸುವುದನ್ನು ನಿಲ್ಲಿಸಲು ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಭಾರತೀಯರನ್ನು ಸೇರಿಸುವ ಅವಶ್ಯಕತೆಯನ್ನು ಸರ್ ಬಾರ್ಟ್ಲ್ ಫ್ರಿಯರ್ 1860 ರ ತನ್ನ ಪ್ರಸಿದ್ಧ ಸೂಚನೆಯಲ್ಲಿ ಪ್ರತಿಪಾದಿಸಿದ.

ಅಸ್ತಿತ್ವದಲ್ಲಿದ್ದ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ರೂಢಮೂಲವಾಗಿದ್ದ ಈ ನ್ಯೂನತೆಗಳ ಜೊತೆಗೆ ಭಾರತ ಸರ್ಕಾರದ ಇಡೀ ರಚನಾ ವಿನ್ಯಾಸವನ್ನೇ ಬದಲಾಯಿಸುವಂತಹ ಕಷ್ಟಗಳು ತಲೆದೋರಿದವು. ಈ ಮುಂದಿನ ಸಾಲುಗಳಲ್ಲಿ ಇದನ್ನು ಸಮರ್ಥವಾಗಿ ಸಂಕ್ಷಿಪ್ತಗೊಳಿಸಲಾಗಿದೆ.

"1853 ರ ಕಾಯ್ದೆಯ ಯೋಜಕ ಧ್ಯೇಯಕ್ಕೆ ವಿರುದ್ಧವಾಗಿ ಲೆಜಿಸ್ಲೇಟಿವ್ ಕೌನ್ಸಿಲ್ ಕಾರ್ಯಾಂಗ ಹಾಗೂ ಅದರ ಕಾರ್ಯಗಳನ್ನು ಪ್ರಶ್ನಿಸುವ ಮತ್ತು ರಹಸ್ಯ ವರದಿಯ ಪತ್ರಗಳನ್ನು ಸಹ ತನ್ನ ಮುಂದಿಡಬೇಕೆಂದು ಒತ್ತಾಯಪಡಿಸುವ ಆಂಗ್ಲೋ-ಇಂಡಿಯನ್‌ರ ಕಾಮನ್ಸ್ ಸಭೆಯಾಗಿ ಬೆಳೆದಿದ್ದಿತು. ಕೌನ್ಸಿಲ್‌ನಲ್ಲಿ ಸಮಾಲೋಚಿಸುವ ಮೊದಲು ಶಾಸನ ಯೋಜನೆಗಳನ್ನು ಸೆಕ್ರೆಟರಿ ಆಫ್ ಸ್ಟೇಟ್‌ಗೆ (ಅಥವಾ 1858 ರ ಮೊದಲಿನ ಕೋರ್ಟ್ ಆಫ್ ಡೈರೆಕ್ಟರುಗಳು) ಅವಶ್ಯವಾದ ಯಾವುದೇ ಶಾಸನವನ್ನು ಅಂಗೀಕರಿಸಲು ಅದು ನಿರಾಕರಿಸಿತ್ತು; ಮತ್ತೊಂದು ಕಡೆ ಸ್ವತಂತ್ರ ಶಾಸನವು ತನ್ನ ಹಕ್ಕಿನ ಬಗ್ಗೆ ಅದು ಪ್ರತಿಪಾದಿಸುತ್ತಿತ್ತು.

ಲೆಜಿಸ್ಲೇಟಿವ್ ಕೌನ್ಸಿಲ್ ಆರಂಭದಿಂದಲೂ ಪ್ರದರ್ಶಿಸಿದಂತಹ ಸ್ವಾತಂತ್ರ್ಯ ಮನೋಭಾವ ಅಧರ ಕರ್ತೃ, ಬೋರ್ಡ್ ಆಫ್ ಕಂಟ್ರೋಲಿನ ಅಧ್ಯಕ್ಷ ಸರ್ ಚಾರ್ಲ್ಸ್ ವುಡ್‌ನ ಮನಸ್ಸನ್ನು ಕಲಕಿತ್ತು. "ಇದನ್ನು ಕೆಲವು ಯುವ ಭಾರತೀಯ ಭಾರತದಲ್ಲಿ ಸಂವಿಧಾನಾತ್ಮಕ ಪಾರ್ಲಿಮೆಂಟಿನ ಆರಂಭ ಹಾಗೂ ಕೇಂದ್ರವೆಂದು ಭಾವಿಸುವಂತೆ ನಾನು ಅದನ್ನು ಪರಿಗಣಿಸುವುದಿಲ್ಲ" ಎಂದು ಆತ ನುಡಿದನು. ಆದರೆ "ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಕಾನೂನು ಎಷ್ಟು ಅಧಿಕಾರಗಳನ್ನು ನೀಡಿದೆಯೋ ಅದಕ್ಕಿಂತ ಅಧಿಕವಾದುದನ್ನು ತಾನು ನೀಡಿಲ್ಲವೆಂದು ಡಾಲ್‌ಹೌಸಿ ಸ್ಪಷ್ಟಪಡಿಸಿದ. ವುಡ್ ತನ್ನ ಆಶಯಗಳಿಗೆ ಅನುಗುಣವಾಗಿ ಮಸೂದೆಯ ಪ್ರಭಾವವನ್ನು ಸೀಮಿತಗೊಳಿಸುವುದರಲ್ಲಿ ವಿಫಲರಾಗಿ ಶಾಸಕರಲ್ಲಿ ಮೊದಲಿಗನೂ ಅಲ್ಲ, ಕೊನೆಯವನೂ ಅಲ್ಲ ಎಂದು ಹೇಳಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಲ್ಪ ಕಾಲದಲ್ಲಿಯೇ ಪರಿಸ್ಥಿತಿ ಬದಲಾವಣೆಗೊಂಡಿತು. 1861 ರ ಇಂಡಿಯನ್ ಕೌನ್ಸಿಲ್ ಕಾಯ್ದೆ ಈ ದೇಶದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್‌ಗಳ ವಿಕಾಸದಲ್ಲಿನ ಮುಂದಣ ಮಹತ್ವದ ಮೈಲಿಗಲ್ಲು. ಕಾರ್ಯಾಂಗ ಮಂಡಳಿಗೆ ಅದು ಐದನೆ ಸಾಮಾನ್ಯ ಅಧಿಕಾರೇತರ ಸದಸ್ಯನನ್ನು ಸೇರಿಸಿತು ಮತ್ತು ವಿಶೇಷ ಸದಸ್ಯನಾಗಿ ಕಮ್ಯಾಂಡರ್ -ಇನ್-ಚೀಫ್‌ನನ್ನು ನೇಮಕ ಮಾಡುವ ಸೆಕ್ರೆಟರಿ ಆಫ್ ಸ್ಟೇಟ್‌ನ ಅಧಿಕಾರವನ್ನು ಮುಂದುವರಿಸಿತು. ಗವರ್ನರ್ ಜನರಲ್‌ನ ಅಧಿಕಾರವನ್ನು ಬಹುಮಟ್ಟಿಗೆ ವಿಸ್ತರಿಸಲಾಯಿತು. ಅಲ್ಲದೆ ಕೌನ್ಸಿಲ್‌ನ ವ್ಯವಹಾರಗಳನ್ನು ನಡೆಸಲು ನಿಯಮಗಳು ಹಾಗೂ ಆದೇಶಗಳನ್ನು ಮಾಡಲು ಅವನಿಗೆ ಮಸೂದೆ ಅಧಿಕಾರ ನೀಡಿತು. ಈಗ ಪೋರ್ಟ್‌ಫೋಲಿಯೊ (ಸಂವಿಭಾಗ) ವ್ಯವಸ್ಥೆ ಎಂದು ಪ್ರಸಿದ್ಧವಾಗಿರುವ ಪದ್ಧತಿಯನ್ನು ಆಚರಣೆಗೆ ತರಲು ಲಾರ್ಡ್ ಕ್ಯಾನಿಂಗ್ ಈ ಅಧಿಕಾರವನ್ನು ಪ್ರಯೋಗಿಸಿದನು. ಈ ವ್ಯವಸ್ಥೆಯಿಂದ ಪ್ರತಿಯೊಬ್ಬ ಸದಸ್ಯನನ್ನು ಒಂದು ಅಥವಾ ಹೆಚ್ಚು ವಿಭಾಗಗಳ ಮೇಲ್ವಿಚಾರಕನನ್ನಾಗಿ ನೇಮಿಸಲಾಯಿತು. ಆ ವಿಭಾಗದಲ್ಲಿನ ಸಣ್ಣ ಪುಟ್ಟ ವಿಷಯಗಳ ಬಗ್ಗೆ ತಾನೇ ಸ್ವತಃ ತೀರ್ಮಾನ ಕೈಗೊಳ್ಳಬಹುದಿತ್ತು. ಹೆಚ್ಚಿನ ಪ್ರಾಮುಖ್ಯದ ವಿಷಯಗಳನ್ನು ವೈಸರಾಯ್‌ನ ಸಲಹೆಯೊಡನೆ ತೀರ್ಮಾನಿಸಿ, ಸಾಮಾನ್ಯ ನೀತಿಯ ಪ್ರಶ್ನೆಗಳನ್ನು ಮಾತ್ರ ತೀರ್ಮಾನಕ್ಕಾಗಿ ಕೌನ್ಸಿಲ್‌ನ ಮುಂದೆ ತರಬೇಕಿತ್ತು. ವ್ಯವಹಾರಗಳ ಪ್ರಮಾಣದಲ್ಲಿನ ಹೆಚ್ಚಳದಿಂದ ಅಂತಹ ಪದ್ಧತಿ ಅನಿವಾರ್ಯವಾಯಿತು. ಆದರೆ ಈ ವ್ಯವಸ್ಥೆಯಿಂದ ಕೌನ್ಸಿಲ್‌ನ ಪ್ರಾಮುಖ್ಯ ಬಹುಮಟ್ಟಿಗೆ ಕುಂದುವುದಕ್ಕೆ ಕಾರಣವಾಯಿತು ಮತ್ತು ವೈಸರಾಯ್‌ನ ಪ್ರಭಾವ ಹಾಗೂ ಅಧಿಕಾರದ ಹೆಚ್ಚಳಕ್ಕೆ ಅಷ್ಟೆ ಕಾರಣವಾಯಿತು.

1861 ರ ಕಾಯ್ದೆಯ ಶಾಸನ ಸೌಲಭ್ಯಗಳು ಇನ್ನೂ ಹೆಚ್ಚು ಮುಖ್ಯವಾದವು. ಕಾನೂನು ರಚನೆಯ ಉದ್ದೇಶಕ್ಕಾಗಿ ಆರಕ್ಕೆ ಕಡಿಮೆಯಿಲ್ಲದಂತೆ ಹನ್ನೆರಡಕ್ಕೆ ಹೆಚ್ಚಿಲ್ಲದಂತೆ ಹೆಚ್ಚಿನ ಸದಸ್ಯರ ಸೇರಿಸುವಿಕೆಯಿಂದ ವೈಸರಾಯ್ ಕೌನ್ಸಿಲ್‌ನ್ನು ವಿಸ್ತರಿಸಲಾಯಿತು. ಇವರ ಪೈಕಿ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರು ಅಧಿಕಾರೇತರ ಸದಸ್ಯರಾಗಿರಬೇಕಿತ್ತು. ಈ ಹೆಚ್ಚಿನ ಸದಸ್ಯರನ್ನು ಗವರ್ನರ್ ಜನರಲ್ ಎರಡು ವರ್ಷಗಳ ಅವಧಿಗೆ ನಾಮಕರಣ ಮಾಡಬೇಕಿತ್ತು.

ಈ ಕೌನ್ಸಿಲ್‌ನ ಕಾರ್ಯವನ್ನು ಶಾಸನ ರೂಪಣೆಗೆ ಮಾತ್ರ ಕಟ್ಟುನಿಟ್ಟಾಗಿ ಸೀಮಿತಗೊಳಿಸಲಾಗಿತ್ತು, ಮತ್ತು ಈ ಕಾಯ್ದೆಯ ಇತರ ಯಾವುದೇ ವ್ಯವಹಾರ ನಡೆಸುವುದನ್ನು ಸ್ಪಷ್ಟವಾಗಿ ನಿಷೇಧಿಸಿತ್ತು. 'ಬ್ರಿಟಿಷ್ ಅಥವಾ ಸ್ಥಳೀಯ' ವಿದೇಶಿಯ ಅಥವಾ ಇತರರು ಯಾರಿಗೇ

ಆಗಲಿ ಅನ್ವಯಿಸುವಂತೆ ಮೇಲೆ ವಿವರಿಸಲಾದ ಕ್ಷೇತ್ರಗಳಲ್ಲಿನ ಎಲ್ಲ ಸ್ಥಳಗಳೂ ಮತ್ತು ಯಾವುದೇ ಪರಿಸ್ಥಿತಿಗಾಗಲಿ ಮತ್ತು ಚಕ್ರವರ್ತಿಯೊಡನೆ ಸಂಬಂಧ ಪಡೆದಿರುವ ರಾಜ್ಯಗಳು ಹಾಗೂ ರಾಜರ ಪ್ರಾಂತದಲ್ಲಿರುವ ಭಾರತ ಸರ್ಕಾರದ (ತರುವಾಯ ಸಕಲ ಬ್ರಿಟಿಷ್ ಪ್ರಜೆಗಳಿಗೂ ವಿಸ್ತರಿಸಲಾದ) ಸಕಲ ನೌಕರರಿಗೂ ಅನ್ವಯಿಸುವಂತೆ ನಿಯಮ ನಿಬಂಧನೆಗಳನ್ನು ಮಾಡಲು ಅಧಿಕಾರ ನೀಡಲಾಗಿತ್ತು. ಆದಾಗ್ಯೂ ವ್ಯಾಪಕವಾದ ಈ ಶಾಸನಾಧಿಕಾರ ಹಲವಾರು ಕಟ್ಟುನಿಟ್ಟುಗಳಿಗೊಳಪಟ್ಟಿತ್ತು. ಸಾರ್ವಜನಿಕ ಸಾಲ, ಸಾರ್ವಜನಿಕ ಕಂದಾಯ, ಭಾರತೀಯ ಧಾರ್ಮಿಕ ಸಂಸ್ಕಾರಗಳು, ಸೇನಾಶಿಸ್ತು ಹಾಗೂ ಭಾರತೀಯ ರಾಜ್ಯಗಳಿಗೆ ಸಂಬಂಧಿಸಿದಂತೆ ನೀತಿ ಮುಂತಾದ ಕೆಲವು ಸೂಚಿತ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಶಾಸನವನ್ನು ಮಾಡಲು ಗವರ್ನರ್ ಜನರಲ್‌ನ ಪೂರ್ವ ಮನ್ನಣೆ ಅಗತ್ಯವಾಗಿದ್ದುದು ಮೊದಲನೆಯದಾಗಿದ್ದಿತು.

ಎರಡನೆಯದಾಗಿ, ಇಂಗ್ಲೆಂಡಿನ ಸರ್ಕಾರದ ಅಧಿಕಾರವನ್ನು ಅತಿಕ್ರಮಿಸುವ ಅಥವಾ ಪಾರ್ಲಿಮೆಂಟ್ ಮಾಡಿರುವ ಕೆಲವು ಕಾಯ್ದೆಗಳ ಸೌಲಭ್ಯಗಳನ್ನು ಉಲ್ಲಂಘಿಸುವ ಶಾಸನಗಳನ್ನು ಮಾಡಕೂಡದು. ಮೂರನೆಯದಾಗಿ, ಕೌನ್ಸಿಲ್ ಅಂಗೀಕರಿಸಿದ ಯಾವುದೇ ಕಾನೂನಿನಷ್ಟೇ ಅಧಿಕಾರವುಳ್ಳ ಸುಗ್ರೀವಾಜ್ಞೆಗಳನ್ನು ಹೊರಡಿಸಲು ಅಧಿಕಾರ ನೀಡಲಾಗಿತ್ತು. ಕೊನೆಯದಾಗಿ, ಕೌನ್ಸಿಲ್ ಅಂಗೀಕರಿಸಿದ ಯಾವುದೇ ಕಾನೂನನ್ನು ಸಾಮ್ರಾಜ್ಞೆ ತಳ್ಳಿಹಾಕಬಹುದಿತ್ತು.

ಪ್ರೆಸಿಡೆನ್ಸಿಗಳ ಶಾಂತಿ ಹಾಗೂ ಸುಭದ್ರ ಸರ್ಕಾರಕ್ಕಾಗಿ "ನಿಯಮ ಮತ್ತು ನಿಬಂಧನೆಗಳನ್ನು" ಮಾಡುವ ಅಧಿಕಾರವನ್ನು 1861 ರ ಕಾಯ್ದೆ ಬೊಂಬಾಯಿ ಹಾಗೂ ಮದ್ರಾಸ್ ಸರ್ಕಾರಗಳಿಗೆ ಮತ್ತೆ ನೀಡಿತು. ಗವರ್ನರ್ ಜನರಲ್‌ನ ಕೌನ್ಸಿಲ್ ಮೇಲೆ ವಿಧಿಸಲಾಗಿದ್ದ ಪ್ರತಿಬಂಧನೆಗಳನ್ನು ಇಲ್ಲಿಗೂ ಅನ್ವಯಿಸಲಾಗಿತ್ತು. ಇದರ ಜೊತೆಗೆ ಹಣ ಚಲಾವಣೆ ಹಕ್ಕುಗಳು, ಅಂಚೆ ಮತ್ತು ತಂತಿ, ಪೀನಲ್ ಕೋಡ್ ಮುಂತಾದ ಅಖಿಲ ಭಾರತೀಯ ವಿಷಯಗಳ ಮೇಲೆ ನಿಬಂಧನೆಗಳನ್ನು ರಚಿಸುವುದರ ಪೂರ್ವದಲ್ಲಿ ಪ್ರಾಂತೀಯ ಕೌನ್ಸಿಲ್‌ಗಳು ಗವರ್ನರ್ ಜನರಲ್‌ನಿಂದ ಪೂರ್ವಾಂಗಿಕಾರವನ್ನು ಪಡೆಯಬೇಕಾಗಿತ್ತು. ಶಾಸನ ಮಾಡುವ ಉದ್ದೇಶಗಳಿಗಾಗಿ ಗವರ್ನರ್‌ನ ಎಕ್ಸಿಕ್ಯೂಟಿವ್ ಕೌನ್ಸಿಲನ್ನು ಅಡ್ವೋಕೇಟ್ ಜನರಲ್‌ನ ಮತ್ತು ನಾಲ್ಕಕ್ಕೆ ಕಡಿಮೆಯಿಲ್ಲದೆ ಎಂಟು ಮಂದಿಗೆ ಹೆಚ್ಚಿಲ್ಲದೆ ಗವರ್ನರ್ ನಾಮಕರಣ ಮಾಡಿದ ಸದಸ್ಯರ ಸೇರ್ಪಡೆಯಿಂದ ವಿಸ್ತರಿಸಲಾಯಿತು. ಇವರ ಪೈಕಿ ಕನಿಷ್ಠ ಪಕ್ಷ ಅರ್ಧದಷ್ಟಾದರೂ ಸದಸ್ಯರು ಅಧಿಕಾರೇತರ ಸದಸ್ಯರಾಗಿರಬೇಕಿತ್ತು. ಬಂಗಾಳ, ವಾಯುವ್ಯ ಪ್ರಾಂತಗಳು (ಈಗಿನ ಯುನೈಟೆಡ್ ಪ್ರಾವಿನ್ಸಸ್) ಮತ್ತು ಪಂಜಾಬ್‌ನಂಥ ಉಳಿದ ಪ್ರಾಂತಗಳಲ್ಲಿ ಮಾತ್ರವಲ್ಲದೆ, ಇತರ ಹೊಸ ಪ್ರಾಂತಗಳಾವುದಾದರೂ ಇದ್ದಲ್ಲಿ ಅಲ್ಲಿಯೂ ಇದೇ ರೀತಿಯಾಗಿ ಲೆಜಿಸ್ಲೇಟಿವ್ ಕೌನ್ಸಿಲ್‌ಗಳನ್ನು ವಿಸರ್ಜಿಸಲು ಗವರ್ನರ್-ಜನರಲ್-ಇನ್-ಕೌನ್ಸಿಲ್‌ಗೆ ಈ ಕಾಯ್ದೆಯು ಅಧಿಕಾರ ನೀಡಿತು. ಇದನ್ನನುಸರಿಸಿ ಕ್ರಮವಾಗಿ 1862, 1886 ಮತ್ತು 1898 ರಲ್ಲಿ ಮೂರು ಪ್ರಾಂತಗಳಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್‌ಗಳನ್ನು ಸ್ಥಾಪಿಸಲಾಯಿತು.

1861 ರ ಕಾಯ್ದೆ ಹಲವಾರು ರೀತಿಗಳಲ್ಲಿ ವಕ್ರ ಪ್ರವೃತ್ತಿಯದಾಗಿತ್ತು ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಯಾವುದೇ ರೀತಿಯ ಸ್ವತಂತ್ರ ಅಧಿಕಾರವಿಲ್ಲದಂತೆ ಮಾಡಿತು ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಕಾರ್ಯಾಂಗದ ಮೇಲೆ ಯಾವುದೇ ರೀತಿಯ ಹತೋಟಿ ಅಥವಾ ನಿಯಂತ್ರಣವನ್ನು ಅದು ಚಲಾಯಿಸುವುದು ನಿಂತಿತು ಮತ್ತು ಅದರ ಶಾಸಕಾಂಗ ಕಾರ್ಯಗಳು ಸಹ ಹಲವಾರು ನಿರ್ಬಂಧಗಳಿಗೆ ಒಳಪಟ್ಟಿದ್ದವು. ಈ ಎಲ್ಲ ನ್ಯೂನತೆಗಳಿದ್ದಾಗ್ಯೂ 1861 ರ ಇಂಡಿಯನ್ ಕೌನ್ಸಿಲ್ ಕಾಯ್ದೆ ಸದಾಕಾಲ ಸ್ಮರಣಯೋಗ್ಯವಾದುದಾಗಿದೆ. ಅದು ಭಾರತ ಸರ್ಕಾರದ ರಚನೆಯ ರೂಪುರೇಖೆಗಳನ್ನು ನೀಡಿತು. ಭಾರತ ಸರ್ಕಾರ ಇದನ್ನು ಕೊನೆಯವರೆಗೂ ಉಳಿಸಿಕೊಂಡು ಬಂದಿತು. ತರುವಾಯದ ಎಲ್ಲ ಬದಲಾವಣೆಗಳನ್ನೂ ಆ ರೂಪುಗಳೊಳಗೆ ನಡೆಸಲಾಯಿತು. ಈ ದೇಶದಲ್ಲಿ ತರುವಾಯದ ಆಡಳಿತ ಸುಧಾರಣೆಗಳಿಂದ ಭಿನ್ನವಾದ ದೊಡ್ಡ ಪ್ರಗತಿಯೊಂದರ ಆಗಮನ ಸೂಚಕವು ಇದಾಯಿತು. ಸರ್ಕಾರದ ಉನ್ನತ ಕೌನ್ಸಿಲ್‌ಗಳಿಗೆ ಭಾರತೀಯರ ಪ್ರವೇಶವೇ ಆ ಪ್ರಗತಿಯ ಹಂತವಾಗಿತ್ತು. ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಲಾಗದಿದ್ದರೂ ಲೆಜಿಸ್ಲೇಟಿವ್ ಕೌನ್ಸಿಲ್‌ನ ಅಧಿಕಾರೇತರ ಸದಸ್ಯರ ಬಗ್ಗೆ ಸೂಕ್ತ ವ್ಯಾಖ್ಯೆಯಿಲ್ಲದಿದ್ದುದರಿಂದ ಭಾರತೀಯ ಸದಸ್ಯರನ್ನು ಸೇರಿಸಿಕೊಳ್ಳಬಹುದಾಗಿತ್ತು. 1853 ರ ಕಾಯ್ದೆಯಿಂದ ಸರ್ಜಿತವಾದ ಕೌನ್ಸಿಲ್‌ನಲ್ಲಿ ಭಾರತೀಯರ ಸೇರ್ಪಡೆಗೆ ಡಾಲ್ ಹೌಸಿ ಒತ್ತಾಯ ಪಡಿಸಿದ್ದನಾದರೂ ಅವನು ಸಫಲನಾಗಿರಲಿಲ್ಲ. 1857-59 ರ ದಂಗೆ ಇಂಗ್ಲೆಂಡಿನಲ್ಲಿ ಇದರ ಬಗ್ಗೆ ಅಭಿಪ್ರಾಯ ಬದಲಾಗುವಂತೆ ಮಾಡಿತ್ತು. ಪಾಟಿಯಾಲದ ಮಹಾರಾಜ, ಬನಾರಸ್‌ನ ರಾಜ ಹಾಗೂ ಸರ್ ದಿನಕರ ರಾವ್ ಅವರನ್ನು ಹೊಸದಾಗಿ ಸಂಯೋಜಿತವಾದ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಕ್ಯಾನಿಂಗ್ 1862 ರಲ್ಲಿ ನಾಮಕರಣ ಮಾಡಿದ.

ತರುವಾಯದ ಮೂವತ್ತು ವರ್ಷಗಳ ಅವಧಿಯಲ್ಲಿನ (1861-1891) ವಿವಿಧ ಶಾಸನ ಕ್ರಮಗಳ ವಿವರಣೆ ಅನಾವಶ್ಯಕ. ಗಮನಾರ್ಹ ಬದಾಲವಣೆಗಳ ಪೈಕಿ ವೈಸರಾಯ್ ಹಾಗೂ ಅವನ ಕೌನ್ಸಿಲ್‌ನ ಶಾಸನಾಧಿಕಾರದಲ್ಲಿ ಗಣನೀಯ ಪ್ರಮಾಮದ ಹೆಚ್ಚಳದ ಅಂಶ ಉಲ್ಲೇಖಾರ್ಹ. 1870 ರ ಇಂಡಿಯನ್ ಕೌನ್ಸಿಲ್ ಕಾಯ್ದೆಯಿಂದ ಲೆಜೆಸ್ಲೇಟಿವ್ ಕೌನ್ಸಿಲ್‌ನ ಮುಂದೆ ಪರಾಮರ್ಶನೆಗೆ ಮಂಡಿಸದೆ ನಿಬಂಧನೆಗಳನ್ನು ಅಂಗೀಕರಿಸಲು ಗವರ್ನರ್ ಜನರಲ್-ಇನ್-ಕೌನ್ಸಿಲ್‌ಗೆ ಅಧಿಕಾರ ದೊರೆತ್ತಿತ್ತು. ವೈಸರಾಯ್ ಕೌನ್ಸಿಲ್‌ನ ಬಹುಪಾಲಿನ ಸದಸ್ಯರ ತೀರ್ಮಾನಗಳನ್ನು ತಳ್ಳಿ ಹಾಕಲು ಮತ್ತು ಯಾವುದೇ ಕಾರ್ಯ ಭಾರತದಲ್ಲಿನ ಬ್ರಿಟಿಷ್ ಪ್ರದೇಶಗಳು ಅಥವಾ ಅದರ ಭಾಗಗಳ ಸುರಕ್ಷಣೆ, ಶಾಂತತೆ ಅಥವಾ ಹಿತಾಸಕ್ತಿಗಳಿಗೆ ಧಕ್ಕೆಯನ್ನೊಡ್ಡುವಲ್ಲಿ ಅವರ ಬಹುಮತದ ಅಭಿಪ್ರಾಯವನ್ನು ಅಳವಡಿಸಿ ಕಾರ್ಯರೂಪಕ್ಕೆ ತರಲು ಅಥವಾ ತಾತ್ಕಾಲಿಕವಾಗಿ ತಡೆಹಿಡಿಯಲು ಅಥವಾ ತಳ್ಳಿ ಹಾಕಲು ಇಡೀ ಕಾಯ್ದೆ ವೈಸರಾಯ್‌ನ ಅಧಿಕಾರವನ್ನು ಮತ್ತೆ ಖಚಿತಪಡಿಸಿತು.

1874 ರ ಕಾಯ್ದೆ ವೈಸರಾಯ್ ಮಂಡಳಿಗೆ "ಲೋಕೋಪಯೋಗಿ ಕಾರ್ಯಗಳಿಗಾಗಿ ಸದಸ್ಯ" ಎಂಬ ಆರನೆ ಸದಸ್ಯನ ಸೇರ್ಪಡೆಗೆ ಅವಕಾಶ ಕಲ್ಪಿಸಿತು.

ಆದರೆ, ಇದೇ ಮೂರು ದಶಕಗಳ ಕಾಲಾವಧಿಯಲ್ಲಿ ಭಾರತದಲ್ಲಿ ಪ್ರಥಮ ಬೃಹತ್ ರಾಷ್ಟ್ರೀಯ ಚಳುವಳಿ ಹಾಗೂ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯಾಯಿತು. ಇದರ ಬಗ್ಗೆ ವಿವರಣಾತ್ಮಕ ಪರಾಮರ್ಶೆಯನ್ನು ಮುಂದೆ ನೀಡಲಾಗಿದೆ. ಭಾರತೀಯರಲ್ಲಿ ಹೊಸದಾಗಿ ಮಾಡಿದ ರಾಜಕೀಯ ಪ್ರಜ್ಞೆ, ಕಾಂಗ್ರೆಸ್ ರೂಪಿಸಿದ ಸಂವಿಧಾನಾತ್ಮಕ ಹಕ್ಕುಗಳ ಬೇಡಿಕೆಯಲ್ಲಿ ಸ್ವತಃ ತಾನಾಗಿಯೇ ಸ್ಪಷ್ಟವಾಗಿ ವ್ಯಕ್ತಗೊಂಡಿತು. ಕಾಂಗ್ರೆಸ್ ಸ್ಥಳೀಯವಾಗಿ ಮತ್ತು ಕೇಂದ್ರದಲ್ಲಿ ಅದರಲ್ಲಿಯೂ ವಿಶೇಷವಾಗಿ ಈ ಮುಂದಿನ ರೀತಿಯಲ್ಲಿ ಲೆಜೆಸ್ಲೇಟಿವ್ ಕೌನ್ಸಿಲ್‌ಗಳ ಸುಧಾರಣೆಯನ್ನು ತನ್ನ ಕಾರ್ಯಕ್ರಮದ ಪ್ರಥಮ ಭಾಗವಾಗಿ ಮುಂದಿಟ್ಟಿತು.

1. ಬಂಗಾಳ ಬೊಂಬಾಯಿ ಮತ್ತು ಮದ್ರಾಸ್‌ಗಳಲ್ಲದೆ ಇತರ ಪ್ರಾಂತಗಳಲ್ಲಿ ಕೌನ್ಸಿಲ್‌ಗಳ ಸ್ಥಾಪನೆ.
2. ಹೆಚ್ಚಿನ ಪ್ರಮಾಣದ ಚುನಾಯಿತ ಸದಸ್ಯರಿಂದ ಕೌನ್ಸಿಲ್‌ಗಳ ವಿಸ್ತರಣೆ
3. ಕೌನ್ಸಿಲ್‌ಗೆ ಹೆಚ್ಚಿನ ಅಧಿಕಾರಗಳ ವಿಶೇಷವಾಗಿ ಮುಂಗಡ ಪತ್ರದ ಬಗ್ಗೆ ಚರ್ಚೆ ನಡೆಸಲು ಹಾಗೂ ಪ್ರಶ್ನೆಗಳ ಮೂಲಕ ವರ್ತಮಾನ ಪಡೆಯುವ ಹಕ್ಕನ್ನು ನೀಡಿದೆ.

ಕಡೆಯ ಪಕ್ಷ ಸ್ವಲ್ಪ ಮಟ್ಟಿಗಾದರೂ ಈ ಬೇಡಿಕೆಗಳನ್ನು ಪೂರೈಸಲು, ಲಾರ್ಡ್ ಡಫರಿನ್ ತನ್ನ ದೇಶದ ಸರ್ಕಾರಕ್ಕೆ ಕೆಲವೊಂದು ಕ್ರಮಗಳ ಬಗ್ಗೆ ಸಲಹೆ ಮಾಡಿದ. ಇದರ ಪರಿಣಾಮವೇ 1892 ರ ಇಂಡಿಯನ್ ಕೌನ್ಸಿಲ್ ಕಾಯ್ದೆ. ಭಾರತದ ಸಂವಿಧಾನಾತ್ಮಕ ಪ್ರಗತಿಯಲ್ಲಿ ಇದು ಮಹತ್ವದ ಮತ್ತೊಂದು ಮೈಲಿಗಲ್ಲಾಯಿತು.

ಈ ಕಾಯ್ದೆಯಿಂದ ಸುಪ್ರೀಂ ಹಾಗೂ ಸ್ಥಳೀಯ ಕೌನ್ಸಿಲ್‌ಗಳೆರಡರಲ್ಲಿಯೂ ಹೆಚ್ಚಿನ ಸದಸ್ಯರ ಸಂಖ್ಯೆಯನ್ನು ಸ್ವಲ್ಪ ಮಟ್ಟಿಗೆ ಏರಿಸಲಾಯಿತು. ಸುಪ್ರೀಂ ಕೌನ್ಸಿಲ್‌ನಲ್ಲಿ ಸದಸ್ಯರ ಗರಿಷ್ಠ ಸಂಖ್ಯೆ ಹದಿನಾರು, ಬೊಂಬಾಯಿ, ಮದ್ರಾಸ್ ಹಾಗೂ ಬಂಗಾಳಗಳಲ್ಲಿ ಇಪ್ಪತ್ತು, ಮತ್ತು 1886 ರ ಒಂದು ಲೆಜೆಸ್ಲೇಟಿವ್ ಕೌನ್ಸಿಲನ್ನು ಸ್ಥಾಪಿಸಲಾಗಿದ್ದ ಔದ್ ಮತ್ತು ವಾಯುವ್ಯ ಪ್ರಾಂತಗಳಲ್ಲಿ ಸದಸ್ಯರ ಗರಿಷ್ಠ ಸಂಖ್ಯೆ ಹದಿನೈದು ಎಂಬುದಾಗಿ ನಿಗಧಿಗೊಳಿಸಲಾಯಿತು. ಈ ಹೆಚ್ಚಳ ಕಾಂಗ್ರೆಸ್ ನಿರೀಕ್ಷಿಸಿದುದಕ್ಕಿಂತ ಬಹುಮಟ್ಟಿಗೆ ಕಡಿಮೆಯಾಗಿದ್ದುದು ಮಾತ್ರವೇ ಅಲ್ಲದೆ ಭಾರತೀಯರ ರಾಜಕೀಯ ಆಶೋತ್ತರದ ಬಗ್ಗೆ ಸಹಾನುಭೂತಿಪರರಾಗಿದ್ದ ಅನೇಕ ಮಂದಿ ಇಂಗ್ಲೀಷ್ ರಾಜಕಾರಣಿಗಳ ನಿರೀಕ್ಷೆಗಿಂತಲೂ ಬಹುಪಾಲು ಕಡಿಮೆಯಾಗಿತ್ತು.

ಆದರೆ ಸದಸ್ಯರನ್ನು ನೇಮಕ ಮಾಡುವ ರೀತಿಯಲ್ಲಿನ ಬದಲಾವಣೆ ಮತ್ತಷ್ಟು ಮುಖ್ಯವಾಗಿತ್ತು. ಕಾಂಗ್ರೆಸ್ ಬೇಡುತ್ತಿದ್ದ ಚುನಾವಣಾ ತತ್ತ್ವವನ್ನು ಪ್ರತ್ಯಕ್ಷವಾಗಿ ಅಂಗೀಕರಿಸಲಿಲ್ಲ. ಆದರೆ ಹೆಚ್ಚಿನ ಸದಸ್ಯರ ನೇಮಕದ ವಿಧಾನವನ್ನು ಗವರ್ನರ್ ಜನರಲ್-ಇನ್-ಕೌನ್ಸಿಲ್ ನಿರ್ಧರಿಸಲು ಮಸೂದೆ ಅಧಿಕಾರ ನೀಡಿತ್ತು ಮತ್ತು ಕಾಮನ್ಸ್ ಸಭೆಯಲ್ಲಿ ಈ ಮಸೂದೆಯ ಮೇಲಣ ಚರ್ಚೆಯ ಕಾಲದಲ್ಲಿ ಸರ್ಕಾರಿ ಸದಸ್ಯರು ಈ ಪ್ರಕರಣದನ್ವಯ ಗವರ್ನರ್ ಜನರಲ್ ಹೆಚ್ಚಿನ ಸದಸ್ಯರ ಚುನಾವಣೆಗೆ ಅವಕಾಶ ಮಾಡಿಕೊಡಲು ಸಾಧ್ಯವಿದೆ ಎಂದು ವಿವರಿಸಿದರು. ವಾಸ್ತವವಾಗಿ, ಪುರಸಭೆಗಳು, ಜಿಲ್ಲಾ ಮಂಡಳಿಗಳು, ಛೇಂಬರ್ ಆಫ್ ಕಾಮರ್ಸ್, ವಿಶ್ವವಿದ್ಯಾನಿಲಯ

ಇತ್ಯಾದಿ ಸ್ಥಳೀಯ ಮಂಡಳಿಗಳಿಂದ ಎಂಟು ಮಂದಿಯ ಆಯ್ಕೆ ಹಾಗೂ ಸ್ಥಳೀಯ ಮಂಡಳಿಗಳ ಅಧಿಕಾರೇತರ ಸದಸ್ಯರ ಪೈಕಿ ಆಯ್ಕೆ ಮಾಡಲಾದ ಸುಪ್ರೀಂ ಕೌನ್ಸಿಲ್‌ನ ನಾಲ್ವರು ಸದಸ್ಯರ ಆಯ್ಕೆಯ ಈ ಅಧಿಕಾರವನ್ನು ಲಾಡ್ ಲ್ಯಾನ್ಸ್ ಡೌನ್ (1888-1894) ಉಪಯೋಗಪಡಿಸಿಕೊಂಡ.

ಆಯವ್ಯಯದ ಮೇಲೆ ಚರ್ಚಿಸುವ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ಪ್ರಶ್ನೆಗಳನ್ನು ಕೇಳುವ ಹಕ್ಕನ್ನು ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರಿಗೆ 1892 ರ ಕಾಯ್ದೆ ನೀಡಿತು.

## 76.2 ಉಪಸಂಹಾರ

ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಬೇಡಿಕೆಗಳಿಂದ 1892 ರ ಕಾಯ್ದೆ ಬಹುಮಟ್ಟಿಗೆ ದೂರವಾಗಿದ್ದರೂ, ಅಸ್ತಿತ್ವದಲ್ಲಿದ್ದ ಸ್ಥಿತಿಗತಿಗಳಿಂದ ಅದು ಬಹುಮಟ್ಟಿನ ಪ್ರಗತಿಯದಾಗಿತ್ತು. ಚುನಾವಣಾ ತತ್ತ್ವಕ್ಕೆ ಅಂಗೀಕಾರದಿಂದ ಮತ್ತು ಕಾರ್ಯಾಂಗದ ಮೇಲೆ ಶಾಸಕಾಂಗಕ್ಕೆ ಸ್ವಲ್ಪಮಟ್ಟಿನ ನಿಯಂತ್ರಣ ನೀಡುವುದರ ಮೂಲಕ ಈ ದಿಸೆಯಲ್ಲಿ ಮತ್ತಷ್ಟು ಸುಧಾರಣೆಗಳಿಗೆ ಇದು ಮಾರ್ಗವನ್ನು ಸುಗಮಗೊಳಿಸಿತು. ಇವು ಬಾರತೀಯರಿಗೆ ತಮ್ಮ ದೇಶದ ಆಡಳಿತದ ಮೇಲೆ ಬಹುಪಾಲಿನ ಹತೋಟಿಯನ್ನು ನೀಡಲು ಕಾರಣವಾಗಿದ್ದವು.

## 76.3 ಮಾದರಿಯ ಪ್ರಶ್ನೆಗಳು

(1) ಬ್ರಿಟಿಷ್ ಭಾರತದ ಆಡಳಿತ ಸಂಘಟನೆಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.

(2) ಸಂವಿಧಾನಾತ್ಮಕವಾಗಿ ಪರಮಾಧಿಕಾರ ಸ್ಥಾನವನ್ನು ಬ್ರಿಟಿಷ್ ಸರ್ಕಾರ ಹೇಗೆ ಪಡೆದುಕೊಂಡಿತು ಎಂಬುದನ್ನು ವಿವರಿಸಿ.

## 76.4 ಪರಾಮರ್ಶನ ಕೃತಿಗಳು


1. R.C. Majumdar : "The Advanced History of India"
2. R.P. Dutta : "India Today"
3. Sumith Sarkar : "Modern India"



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

## ಟಿಪ್ಪಣಿಗಳು

# ಘಟಕ - 77

## ಬ್ರಿಟಿಷ್ ಭಾರತದಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಸರ್ಕಾರಗಳು


77.0 ಪ್ರಸ್ತಾವನೆ

77.1 ಕೇಂದ್ರೀಯ ಸರ್ಕಾರ

77.2 ಸ್ಥಳೀಯ ಸರ್ಕಾರ

77.3 ಪ್ರಾಂತೀಯ ಸರ್ಕಾರ

77.4 ಉಪಸಂಹಾರ

77.5 ಮಾದರಿ ಪ್ರಶ್ನೆಗಳು

77.6 ಪರಾಮರ್ಶನ ಕೃತಿಗಳು

## 77.0 ಪ್ರಸ್ತಾವನೆ

ಭಾರತದ ಪ್ರತ್ಯಕ್ಷ ಆಡಳಿತವನ್ನು ಪರಮಾಧಿಕಾರ ವಹಿಸಿಕೊಂಡುದರಿಂದ ಭಾರತದ ಆಂತರಿಕ ಆಡಳಿತದ ಕ್ರಮ ಹಾಗೂ ವಿವರಣೆಗಳೆರಡರ ದೃಷ್ಟಿಗಳಿಂದಲೂ ಮಹತ್ತರ ಬದಲಾವಣೆಗಳಾದವು. ಕಂಪನಿಯ ಆಳ್ವಿಕೆಯ ಅವಧಿಯಲ್ಲಿ ಸಾಧ್ಯವಾಗದಿದ್ದ ಪರಿಪೂರ್ಣತೆಯೊಂದಿಗೆ ಆಡಳಿತ ವ್ಯವಸ್ಥೆಯನ್ನು ಕ್ರಮೇಣ ರೂಪಿಸಲಾಯಿತು ಹಾಗೂ ಇಂಗ್ಲೆಂಡಿನ ರಾಜಕೀಯ ಆದರ್ಶಗಳು ಮತ್ತು ಆಡಳಿತ ತತ್ತ್ವಗಳನ್ನು ಬಹುಮಟ್ಟಿಗೆ ಭಾರತಕ್ಕೂ ಅನ್ವಯಿಸಲಾಯಿತು. ಭಾರತೀಯ ಆಡಳಿತ ಹೆಚ್ಚು ದಕ್ಷವೂ ಹೆಚ್ಚು ಕಾಲೋಚಿತವೂ ಆಗಿ ಪರಿಣಮಿಸಿತು. ಕಂಪನಿ ಮತ್ತು ಬೋರ್ಡ್ ಆಫ್ ಕಂಟ್ರೋಲ್‌ಗಳ ನಡುವೆ ಇದ್ದ ಹಿಂದಿನ ವೈರ ಹಾಗೂ ಈರ್ಷ್ಯೆ ಕಣ್ಮರೆಯಾಗಿ ಪಾರ್ಲಿಮೆಂಟಿನ ಏಕೀಕೃತ ನಿಯಂತ್ರಣ ಸ್ಥಾಪನೆಗೊಂಡಿತು.

ಆದರೆ ಇದು ದೋಷಯುಕ್ತವಾಗಿಯೇ ಇದ್ದಿತು. ಹಿಂದಿನ ಆಡಳಿತ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಛಾರ್ಟರುಗಳ ನಿಯತಕಾಲಿಕ ನವೀಕರಣ ಭಾರತದಲ್ಲಿನ ವ್ಯವಹಾರಗಳನ್ನು ಸಂಶಯಗ್ರಸ್ತತೆಯಿಂದ ಜಾಗರೂಕವಾಗಿ ಸೂಕ್ಷ್ಮವಾಗಿ ಪರಿಶೀಲಿಸಲು ಪಾರ್ಲಿಮೆಂಟಿಗೆ ಅವಕಾಶವನ್ನೊದಗಿಸಿತ್ತು. ಆದರೆ ಸೆಕ್ರೆಟರಿ ಆಫ್ ಸ್ಟೇಟ್ ಭಾರತದ ಸಂಪೂರ್ಣ ಮೇಲ್ವಿಚಾರಕನಾಗಿ ಪರಿಣಮಿಸಿದಾಗ ಆಸಕ್ತಿ ಕೆರಳುವುದು ನಿಂತುಹೋಯಿತು. ತಾತ್ವಿಕವಾಗಿ, ಕಾಮನ್ಸ್ ಸಭೆಯು ಭಾರತದ ಆಡಳಿತಕ್ಕೆ ಹೊಣೆಯಾಗಿತ್ತು. ಆದರೆ ಈ ದೇಶದ ಮೇಲೆ ಪರಿಣಾಮ ಬೀರುವಂತಹ ವಿಷಯಗಳಲ್ಲಿ ಎಲ್ಲೋ ಕೆಲವೇ ಮಂದಿ ಆಸಕ್ತಿ ವಹಿಸುತ್ತಿದ್ದರು. ಕಂಪನಿಯ ಆಳ್ವಿಕೆಯ ದಿನಗಳಲ್ಲಿ, ಆಡಳಿತದ ಬಗ್ಗೆ ವರದಿ ಸಲ್ಲಿಸಲು ಪಾರ್ಲಿಮೆಂಟ್ ಒಂದು ಸೆಲೆಕ್ಟ್ ಸಮಿತಿಯನ್ನು ನೇಮಿಸುತ್ತಿತ್ತು. ಆ ಸಮಿತಿ ಇಡೀ ವಿಷಯದ ಬಗ್ಗೆ ಆಮೂಲಾಗ್ರವಾಗಿ ಪರಿಶೀಲನೆ ನಡೆಸಿ ಲೋಪದೋಷಗಳನ್ನು ಹೊರಗೆಡಹಿ ಇವುಗಳಿಗೆ ಪರಿಹಾರಗಳನ್ನು ಸೂಚಿಸುತ್ತಿತ್ತು. ಇವುಗಳನ್ನು ಹೊಸ ಶಾಸನಗಳಲ್ಲಿ ಆಗಾಗ್ಗೆ ಅಳವಡಿಸಲಾಗುತ್ತಿತ್ತು. ಆದರೆ ಈಗ ಸೆಕ್ರೆಟರಿ ಇಡೀ ಸಭೆಯ ಮುಂದೆ ಒಂದು ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದ. ಪ್ರತಿಯೊಬ್ಬ ಸದಸ್ಯನೂ ಅದರ ಬಗ್ಗೆ ಆಸಕ್ತಿ ವಹಿಸಬೇಕಾಗಿತ್ತು. ಆದರೆ ಅನೇಕ ವೇಳೆ ಆಗುವಂತೆ ಎಲ್ಲರ ಕರ್ತವ್ಯ ಯಾರ ಕರ್ತವ್ಯವೂ ಅಲ್ಲ ಎಂಬ ರೀತಿಯಲ್ಲಿ ಪರಿಣಮಿಸಿತು.

## 77.1 ಕೇಂದ್ರೀಯ ಸರ್ಕಾರ

ಸೆಕ್ರೆಟರಿ ಆಫ್ ಸ್ಟೇಟಿನ ಅಧಿಕಾರದ ಹೆಚ್ಚಳದ ಮೇಲೆ ಇದರ ಪರಿಣಾಮದ ಬಗ್ಗೆ ಹಿಂದೆಯೇ ವಿವರಿಸಲಾಗಿದೆ. ಆದರೆ ಭಾರತದ ಆಂತರಿಕ ಆಡಳಿತದ ಮೇಲೂ ಅದು ಬಹುಮಟ್ಟಿಗೆ ಪರಿಣಾಮ ಬೀರಿತು. ಭಾರತದ ಅಧಿಕಾರಿಗಳು ಈಗ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಮಾತ್ರ ಹೊಣೆಗಾರರಾಗಿದ್ದರು ಮತ್ತು ಸೆಕ್ರೆಟರಿ ಸಮಾಧಾನವಿರುವವರೆಗೆ ಅಧಿಕಾರಿಗಳಿಗೆ ಇತರ ಯಾವ ಅಧಿಕಾರ ವರ್ಗದ ಭೀತಿಯೂ ಇರಲಿಲ್ಲ. ಅಷ್ಟು ದೂರದಲ್ಲಿದ್ದ ಸೆಕ್ರೆಟರಿ ಆಫ್ ಸ್ಟೇಟ್ ಆಡಳಿತ ವಿವರಗಳ ಮೇಲೆ ಯಾವುದೇ ರೀತಿಯ ಪರಿಣಾಮಕಾರಿ ನಿಯಂತ್ರಣ ಬೀರುವ ಸಾಧ್ಯತೆ ಸುಲಭವಾದುದಾಗಿರಲಿಲ್ಲ. ಆದರೆ ಅದರ ಅಂತಿಮ ಹೊಣೆ ತನ್ನದಾಗಿದ್ದುದರಿಂದ ತನ್ನ ಅಧಿಕಾರಿಗಳ ಕೆಲಸ ಕಾರ್ಯಗಳನ್ನು ಅವನು ಸಮರ್ಥಿಸಬೇಕಿತ್ತು. ಉನ್ನತ ಭಾರತದ ಸಿವಿಲ್ ಸರ್ವೀಸ್‌ನ ಉನ್ನತ ಸದಸ್ಯರ ಮುಖಂಡತ್ವದಲ್ಲಿ ಭಾರತದಲ್ಲಿ ಸಕಲ ಬಲಿಷ್ಠ ಅಧಿಕಾರಶಾಹಿ ಬೆಳವಣಿಗೆಯೇ ಇದರ ಫಲವಾಗಿ ಪರಿಣಮಿಸಿತು. ಈ ಸೇವಾವರ್ಗ ಅಲ್ಪ ಕಾಲದಲ್ಲಿಯೇ ಬಲಿಷ್ಠ ಸಂಸ್ಥೆಯಾದಂತಾಯಿತು ಮತ್ತು ಈ ಸೇವಾ ವರ್ಗದ ಸದಸ್ಯರು - ಬ್ಲಂಟರ್‌ರವರ ಮಾತಿನಲ್ಲಿಯೇ ಹೇಳುವುದಾದರೆ - "ತಮ್ಮ ಸಹ ಸದಸ್ಯರಿಗೆ ಮಾತ್ರವಲ್ಲದೆ ಇತರೆ ಯಾವುದೇ ಅಧಿಕಾರಕ್ಕೆ ಸಗ್ಗದಂಥ, ಬೇಜಾವಾಬ್ದಾರಿಯ, ಉದ್ಯೋಗದಿಂದ ತೆಗೆದುಹಾಕಲಾಗದ ಭಾರತದ ವಾಸ್ತವ ಒಡೆಯರಾದರು". ಈ ಸೇವಾ ವರ್ಗದ ಸದಸ್ಯರು ಅತ್ಯಂತ ಸಮರ್ಥರಾಗಿದ್ದರು ಮತ್ತು ಒಟ್ಟಿನಲ್ಲಿ ಅವರು ಪ್ರಾಮಾಣಿಕರು ಆಗಿದ್ದರು ಎಂಬ ಅಂಶ ನಿಸ್ಸಂದೇಹವಾದದ್ದು. ಆದರೆ ತಾವಿದ್ದಂಥಾ ಸ್ಥಾನಮಾನ ಅವರಲ್ಲಿ ಒಂದು ತೆರನಾದ ಮೇಲ್ಮನೋಭಾವವನ್ನು ಉಂಟುಮಾಡಿತು ಮತ್ತು ಆಳ್ವಿಕೆಗೊಳಗಾದವರು-ಆಳುವವರ ನಡುವಣ ಒಂದು ಬೃಹತ್ ಕಂದರವೇ ಏರ್ಪಟ್ಟಿತು. ಎಲ್ಲ ಉತ್ತಮ ಆಡಳಿತಗಾರ ಹಿನ್ನಲೆಯಲ್ಲಿ ಅಡಗಿರುವಂತ ಅನುಕಂಪ ಹಾಗೂ ಪರಸ್ಪರ ಅರಿಯುವಿಕೆ - ಈ ಎರಡು ವರ್ಗಗಳ ನಡುವೆ ಕಡಿಮೆಗೊಂಡಿತು.

ದುರದೃಷ್ಟವಶಾತ್ ಉನ್ನತ ಬ್ರಿಟಿಷ್ ಅಧಿಕಾರಿಗಳ ಪ್ರತ್ಯೇಕತೆಯನ್ನು ತೀವ್ರಗೊಳಿಸಲು ಇತರ ಕಾರಣಗಳು ಇದ್ದವು. ಕಂಪನಿಯ ಆಳ್ವಿಕೆಯ ಕಾಲದಲ್ಲಿ ಇಂಗ್ಲೀಷ್ ಅಧಿಕಾರಿಗಳು ಭಾರತೀಯರೊಡನೆ ಸ್ನೇಹಭಾವದಿಂದ ಬೆರೆಯುತ್ತಿದ್ದರು. ವಾಸ್ತವವಾದ ಸದ್ಭಾವನೆ ಹಲವೊಮ್ಮೆ ಅವರ ನಡುವೆ ಮೈತ್ರಿ ಏರ್ಪಡುತ್ತಿತ್ತು. ಭಾರತೀಯರ ಬಗ್ಗೆ ಬ್ರಿಟೀಷರ ಮನದಲ್ಲಿ ದಂಗೆಯ ಭೀಕರ ಭೀತಿಗಳು ಒಂದು

ರೀತಿಯ ಜಿಗುಪ್ಸೆ ಭಾವನೆಯನ್ನು ಉಂಟು ಮಾಡಿದವು. ಈ ಭಾವನೆ ಕಾಲ ಕ್ರಮದಲ್ಲಿ ದುರ್ಬಲಗೊಂಡು ಕ್ರಮೇಣ ಕಣ್ಮರೆಯಾಗಬಹುದಿತ್ತು. ಆದರೆ ಹಬೆನೌಕಾಯಾನ, ಸೂಯೆಜ್ ಕಾಲುವೆ, ತಂತಿ ಹಾಗೂ ಭೂಮಾರ್ಗ ಇವೆಲ್ಲ ಬ್ರಿಟಿಷರಿಗೆ ತಮ್ಮ ತಾಯ್ನಾಡಿನೊಡನೆ ನಿಕಟ ಸಂಪರ್ಕ ಪಡೆಯಲು ಕಾರಣವಾದವು. ಅವರು ಈಗ ವಿದೇಶೀ ಪ್ರವೇಶದಲ್ಲಿದ್ದ ದೇಶ ಭ್ರಷ್ಟರಾಗಿರದೆ ತಮ್ಮ ತಾಯ್ನಾಡಿನೊಡನೆ ನೇರ ಹಾಗೂ ನಿರಂತರ ಸಂಪರ್ಕ ಪಡೆಯದವರಾಗಿದ್ದರು. ದೊಡ್ಡ ಪಟ್ಟಣಗಳಲ್ಲಿ ಕ್ರಮೇಣ ಇಂಗ್ಲೀಷ್ ಸಮಾಜ ಅಭಿವೃದ್ಧಿಗೊಂಡಿತು. ಭಾರತೀಯರೊಡನೆ ಮೈತ್ರಿ ಬೆಳೆಸದಿರಲು ಇವೆಲ್ಲವೂ ಕಾರಣವಾದವು ಮತ್ತು ಭಾರತೀಯರಿಗೆ ಸಂಬಂಧಿಸಿದಂತೆ, ಬ್ರಿಟಿಷ್ ಅಧಿಕಾರಿ ವರ್ಗ ಹೆಚ್ಚು ಹೆಚ್ಚು ಪ್ರತ್ಯೇಕತಾ ಜೀವನ ನಡೆಸಲಾರಂಭಿಸಿತು. ಇಂಗ್ಲೀಷ್ ಅಧಿಕಾರಿಯ ಕಾಲ ಅವನ ಕಛೇರಿ ಹಾಗೂ ಅವನ ಮನೆಗಳಿಗೆ ಮೀಸಲಾಗಿದ್ದು ಭಾರತೀಯರೊಡನೆ ಸಾಮಾಜಿಕ ಸಂಪರ್ಕ ಪಡೆಯುತ್ತಿದ್ದುದೇ ಅಪೂರ್ವವಾಗಿತ್ತು. ಅವರು ಭಾರತದಲ್ಲಿ ದೀರ್ಘ ಕಾಲ ನೆಲಸಿದ್ದರೂ ಎಲ್ಲ ದೃಷ್ಟಿಗಳಿಂದಲೂ ಅವರು ವಿದೇಶೀಯರಾಗಿಯೇ ಉಳಿದಿದ್ದು ಭಾರತೀಯರ ಭಾವನೆಗಳು, ಚಿತ್ತವೃತ್ತಿ ಹಾಗೂ ಆಸೆ ಆಕಾಂಕ್ಷೆಗಳ ಬಗ್ಗೆ ಅವರ ಜ್ಞಾನ ಅತ್ಯಲ್ಪವಾಗಿತ್ತು. "ಕಂಪೆನಿಯ ಆಳ್ವಿಕೆಯ ಕಾಲದ ಆಂಗ್ಲೋ ಇಂಡಿಯನ್ ಅಧಿಕಾರಿ ಭಾರತವನ್ನು ಪ್ರೀತಿಸುತ್ತಿದ್ದ ರೀತಿ ಇಂದು ರಾಣಿಯ ಯಾವ ಅಧಿಕಾರಿಯೂ ಪ್ರೀತಿಸುವುದನ್ನೂ ಕನಸಿನಲ್ಲಿಯೂ ಭಾವಿಸಲಾಗದ ವಿಷಯವಾಗಿದೆ; ಅದನ್ನು ಪ್ರೀತಿಸುತ್ತಾ ಆತ ಭಾರತಕ್ಕೆ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದ" ಎಂದು ಬ್ಲಂಟ್ ನುಡಿದಿರುವುದು ಔಚಿತ್ಯ ಪೂರ್ಣವಾಗಿದೆ.

ಸಾರ್ವಜನಿಕೆ ಹುದ್ದೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರನ್ನು ನೇಮಕ ಮಾಡುವುದರ ಮೂಲಕ ಮಾತ್ರ ಈ ಪರಿಸ್ಥಿತಿ ಸುಧಾರಿಸಬಹುದು ಎಂಬುದನ್ನು ಭಾರತೀಯರು ಮನಗಂಡರು. 1833 ರ ಛಾರ್ಟರ್ ಕಾಯ್ದೆ ರಾಜ್ಯದ ಉನ್ನತ ಅಧಿಕಾರಿಗಳಿಗೂ ಭಾರತೀಯರ ನೇಮಕವನ್ನು ನ್ಯಾಯ ಬದ್ಧಗೊಳಿಸಿತು. ಆದರೆ 1793 ರ ಕಾಯ್ದೆಯ ಸೌಲಭ್ಯಗಳು ಇನ್ನೂ ರದ್ದಾಗಿರಲಿಲ್ಲ. ದರ ಪ್ರಕಾರ "ವಾರ್ಷಿಕ 800 ಪೌಂಡ್‌ಗಳಿಗಿಂತ ಅಧಿಕ ವರಮಾನದ ಅಧಿಕಾರ ಸ್ಥಾನವನ್ನು ಕಂಪೆನಿಯ ಒಡಂಬಡಿಕೆಯ ಕಟ್ಟಿಗೊಳಪಟ್ಟ ಅಧಿಕಾರವರ್ಗ ಮಾತ್ರ ಪಡೆಯಬಹುದಿತ್ತು". ಹಾಗಾಗಿ ಈಸ್ಟ್ ಇಂಡಿಯಾ ಕಂಪನಿಯ ಒಡಂಬಡಿಕೆಯ ಕಟ್ಟಿಗೊಳಪಟ್ಟ ಅಧಿಕಾರಿ ಅಥವಾ 1858 ರ ತರುವಾಯದ ಸೆಕ್ರೆಟರಿ ಆಫ್ ಸ್ಟೇಟ್‌ನ ಕಟ್ಟಿಗೊಳಪಟ್ಟ ಅಧಿಕಾರಿಯಲ್ಲದೆ ಮತ್ತಾವ ಭಾರತೀಯನೂ ಉನ್ನತ ಸ್ಥಾನವನ್ನು ಅಲಂಕರಿಸುವಂತಿರಲಿಲ್ಲ. ಮೊದಲಿಗೆ ಈ ಅಧಿಕಾರಿಗಳನ್ನು ಭಾಗಶಃ ಡೈರೆಕ್ಟರುಗಳು ಮತ್ತು ಭಾಗಶಃ ಬೋರ್ಡ್ ಆಫ್ ಕಂಟ್ರೋಲ್ ನಾಮಕರಣ ಮಾಡುತ್ತಿತ್ತು. ನಾಮಕರಣಗೊಂಡ ತರುವಾಯ ಹೈಲೆ ಬರಿಯ ಈಸ್ಟ್ ಇಂಡಿಯಾ ಕಾಲೇಜಿನಲ್ಲಿ ಅವರು ಎರಡು ವರ್ಷಗಳ ತರಬೇತಿ ಪಡೆಯುತ್ತಿದ್ದರು. ಈ ನೇಮಕಗಳಿಗೆ ಬಹಿರಂಗ ಸ್ಪರ್ಧಾಪರೀಕ್ಷೆಗಳ ವ್ಯವಸ್ಥೆಯನ್ನು 1853 ರಲ್ಲಿ ಜಾರಿಗೆ ತರಲಾಯಿತು ಮತ್ತು 1858 ರಲ್ಲಿ ಮತ್ತೆ ಇದನ್ನು ಸ್ಥಿರಪಡಿಸಲಾಯಿತು. ಈ ಸ್ಪರ್ಧೆಯಲ್ಲಿ ಸಾಮ್ರಾಜ್ಞೆಯ ಯಾವ ಪ್ರಜೆಯೇ ಆಗಲಿ (ಭಾರತೀಯ ಅಥವಾ ಯುರೋಪಿಯನ್) ಸ್ಪರ್ಧಿಸಬಹುದಿತ್ತು. ಪ್ರವೇಶಕ್ಕೆ ಗರಿಷ್ಠ ವಯೋಮಿತಿ ಮೊದಲಿಗೆ ಇಪ್ಪತ್ತುಮೂರು ವರ್ಷಗಳಿತ್ತು. 1859 ರಲ್ಲಿ ಘರಿಷ್ಠ ವಯೋಮಿತಿಯನ್ನು ಇಪ್ಪತ್ತೆರಡು ವರ್ಷಗಳಿಗೆ ಇಳಿಸಲಾಯಿತು ಮತ್ತು ಆಯ್ಕೆಯಾದ ಅಭ್ಯರ್ಥಿಗಳು ಇಂಗ್ಲೆಂಡಿನಲ್ಲಿ ಒಂದು ವರ್ಷದ ಖಾಯಂ ಪೂರ್ವ ಅವಧಿಯಲ್ಲಿರಬೇಕಾಗಿತ್ತು. 1866 ರಲ್ಲಿ ಗರಿಷ್ಠ ವಯೋಮಿತಿಯನ್ನು ಇಪ್ಪತ್ತೊಂದಕ್ಕೆ ಇಳಿಸಲಾಯಿತು; ಮತ್ತು ಪ್ರೊಬೆಷನರುಗಳು ಅಂಗೀಕೃತ ವಿಶ್ವವಿದ್ಯಾನಿಲಯದಲ್ಲಿ ಎರಡು ವರ್ಷಗಳ ತರಬೇತಿಯು ವಿಶೇಷ ಶಿಕ್ಷಣ ಪಡೆಯಬೇಕಿತ್ತು.

ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಭಾರತೀಯರಿಗೆ ತುಂಬಾ ಕಷ್ಟಕರವಾದುದಾಗಿತ್ತು. ಇಂಗ್ಲೆಂಡಿಗೆ ಪ್ರಯಾಣ ದುಬಾರಿಯಾದುದೂ ಅಸಾಧಾರಣವಾದುದೂ ಆಗಿದ್ದುದು ಮಾತ್ರವೇ ಅಲ್ಲದೆ ಹಿಂದೂ ಜನಾಂಗದ ಸಂಪ್ರದಾಯಸ್ಥರೂ ಇದಕ್ಕೆ ಹೆಚ್ಚು ಅಸಮ್ಮತಿ ವ್ಯಕ್ತಪಡಿಸುತ್ತಿದ್ದರು. ಇಂಗ್ಲೀಷ್ ವಿಶ್ವವಿದ್ಯಾನಿಲಯವೊಂದು ಇಂಗ್ಲೀಷ್ ಮಾಧ್ಯಮದ ಮೂಲಕ ನಡೆಸುವ ಪರೀಕ್ಷೆಯಲ್ಲಿ ಇಂಗ್ಲೀಷನವರೊಡನೆ ಸ್ಪರ್ಧಿಸುವುದು ವಾಸ್ತವವಾಗಿ ದುಸ್ಸಾಧ್ಯಕಾರ್ಯವಾಗಿತ್ತು. ಕೆಲವೇ ಮಂದಿ ಭಾರತೀಯರು ಈ ಪರೀಕ್ಷೆಯಲ್ಲಿ ಸಫಲರಾದರು ಎಂಬುದರಲ್ಲಿ ಆಶ್ಚರ್ಯವೇನಿಲ್ಲ.

ಭಾರತದಲ್ಲಿ ರಾಜಕೀಯ ಚಳುವಳಿಯ ಮೇಲೆ ಇಂತಹ ವಸ್ತುಗತಿಯ ಪ್ರತಿಕ್ರಿಯೆಗಳನ್ನು ಮುಂದಿನ ಒಂದು ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಉನ್ನತ ಸಿವಿಲ್ ಸರ್ವೀಸ್‌ಗಳಲ್ಲಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿರುವ ಅಂಶವನ್ನು ಬ್ರಿಟಿಷ್ ಸರ್ಕಾರ ಸಹ ಮನಗಂಡಿತು. ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಉನ್ನತ ಅಧಿಕಾರ ಸ್ಥಾನಗಳಿಗೆ ಭಾರತೀಯರ ನೇಮಕಕ್ಕೆ

ಅಂಗೀಕಾರ ನೀಡುವ ಒಂದು ಕಾಯ್ದೆಯನ್ನು 1870 ರಲ್ಲಿ ಅಂಗೀಕರಿಸಲಾಯಿತು. ಆದರೆ, ಮುಂದೆ ವಿವರಿಸಲಾಗಿರುವ ಪರಿಸ್ಥಿತಿಗಳಲ್ಲಿ ಇದನ್ನು 1879 ರಲ್ಲಿ ಮಾತ್ರವೇ ಕಾರ್ಯಾಚರಣೆಗೆ ತರಲಾಯಿತು.

1879 ರಲ್ಲಿ ಅಂಗೀಕರಿಸಲಾದ ನಿಯಮದಲ್ಲಿ ಈ ರೀತಿಯಿತ್ತು. "ಸೆಕ್ರೆಟರಿ ಆಫ್ ಸ್ಟೇಟ್ ಯಾವುದೇ ವರ್ಷದಲ್ಲಿ ನೇಮಕ ಮಾಡುವ, ಒಡಂಬಡಿಕೆಯ ಕಟ್ಟಿಗೊಳಪಟ್ಟ, ಒಟ್ಟು ಸಿವಿಲ್ ನೌಕರರ ಪೈಕಿ ಅನುಪಾತದಲ್ಲಿ ಆರನೆ ಒಂದು ಭಾಗಕ್ಕೆ ಹೆಚ್ಚಿಲ್ಲದಂತೆ. ಗವರ್ನರ್ ಜನರಲ್-ಇನ್-ಕೌನ್ಸಿಲ್‌ನ ಅಂಗೀಕಾರಕ್ಕೊಳಪಟ್ಟು, ಸ್ಥಳೀಯ ಸರ್ಕಾರಗಳು ಭಾರತದಲ್ಲಿ ಆಯ್ಕೆ ಮಾಡಿದ ಸ್ಥಳೀಯರಾಗಿರಬೇಕು". ಈ ಅಧಿಕಾರಿಗಳನ್ನು "ಸ್ಟ್ಯಾಚುಟರಿ ಸಿವಿಲ್ ನೌಕರರು" ಎಂದು ಕರೆಯಲಾಗುತ್ತಿತ್ತು. ಉತ್ತಮ ಶಿಕ್ಷಣ ಹಾಗೂ ಸಾಮರ್ಥ್ಯ ಪಡೆದ ಸದ್ವಂಶಸ್ಥರು ಮತ್ತು ಉತ್ತಮ ಸಾಮಾಜಿಕ ಸ್ಥಾನಗಳಿಂದ ಯುವಕರ ಪೈಕಿ ಇವರನ್ನು ನೇಮಕ ಮಾಡಲಾಗುತ್ತಿತ್ತು. ನಾಮಕರಣ ವಿಧಾನದಲ್ಲಿ ಯಾವ ಯಾವ ಲೋಪದೋಷಗಳಿರುವುದೋ ಅವೇ ಲೋಪದೋಷಗಳು ಈ ಪದ್ಧತಿಯಲ್ಲಿಯೂ ಇದ್ದವು. ಭಾರತೀಯರೇ ಸ್ಪರ್ಧಾಪರೀಕ್ಷೆಗಳನ್ನು ಅಪೇಕ್ಷಿಸುತ್ತಿದ್ದರು. ಆದರೆ ಭಾರತೀಯರಿಗೆ ಉತ್ತಮ ಹಾಗೂ ಸಮವಾದ ಅವಕಾಶಗಳನ್ನೊದಗಿಸಲು ಇಂಗ್ಲೆಂಡ್ ಮತ್ತು ಭಾರತಗಳೆರಡರಲ್ಲಿಯೂ ಏಕಕಾಲದಲ್ಲಿ ಪರೀಕ್ಷೆಗಳನ್ನು ನಡೆಸಬೇಕೆಂದು ಅವರು ಶಿಫಾರಸು ಮಾಡಿದರು. ಇದೇ ಕಾರಣಕ್ಕಾಗಿಯೂ ಪ್ರವೇಶಕ್ಕಾಗಿ ಗರಿಷ್ಠ ವಯೋಮಿತಿಯನ್ನು ಇಪ್ಪತ್ತೊಂದು ವರ್ಷಗಳಿಗಿಂತ ಕಡಿಮೆ ಮಾಡಲು ಅವರು ವಿರೋಧಿಸಿದುದು. ಏಕೆಂದರೆ ವಿದೇಶಿ ಭಾಷೆಯೊಂದರಲ್ಲಿ ಭಾರತೀಯ ವಿದ್ಯಾರ್ಥಿಗಳನ್ನು ಪರೀಕ್ಷಿಸಬೇಕಾದಾಗ ವಿದ್ಯಾರ್ಥಿಗಳಿಗೆ ಪ್ರತಿಕೂಲ ಪರಿಣಾಮವಾಗುತ್ತಿತ್ತು. ಗರಿಷ್ಠ ವಯೋಮಿತಿಯನ್ನು 1877 ರಲ್ಲಿ ಹತ್ತೊಂಬತ್ತು ವರ್ಷಗಳಿಗೆ ಇಳಿಸಿದುದು ಭಾರತೀಯರನ್ನು ಈ ಪರೀಕ್ಷೆಗಳಿಂದ ಹೊರಗಿಡಬೇಕೆಂಬ ಉದ್ದೇಶಪೂರಿತ ಪ್ರಯತ್ನವೆಂದು ಪರಿಗಣಿಸಿದರು. ಇದೇ ಒಂದು ಚಳುವಳಿಗೆ ಕಾರಣವಾಯಿತು. ಕಾಂಗ್ರೆಸ್ ಚಳುವಳಿ ತೀವ್ರಗೊಳ್ಳಲು ಇದು ಕಾರಣವಾಯಿತು. ಏಕಕಾಲದಲ್ಲಿ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಹಾಗೂ ಅಧಿಕ ಸಂಖ್ಯೆಯಲ್ಲಿ ಭಾರತೀಯರ ನೇಮಕದ ಪ್ರಶ್ನೆಯನ್ನು ಕಾಂಗ್ರೆಸ್ ತೀವ್ರವಾಗಿ ಪರಿಗಣಿಸಿತು.

ಈ ಸಮಸ್ಯೆಯನ್ನು ಪರಿಶೀಲಿಸಲು ಲಾರ್ಡ್ ಢಫರಿನ್ "ಸಾರ್ವಜನಿಕ ಸೇವಾ ಆಯೋಗ" ವೊಂದನ್ನು 1886 ರಲ್ಲಿ ನೇಮಿಸಿದ. ಆಗ ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಸರ್ ಚಾರ್ಲ್ಸ್ ಅಚೀಸ್‌ನನ್ನು ಈ ರೀತಿ ಆಯೋಗದ ಅಧ್ಯಕ್ಷನನ್ನಾಗಿ ನೇಮಿಸಿದ. ಆ ಆಯೋಗ ಒಡಂಬಡಿಕೆಗೆ ಒಳಪಟ್ಟ ಸೇವಾ ವರ್ಗದವರಿಗೆ ಏಕಕಾಲದಲ್ಲಿ ಪರೀಕ್ಷೆ ನಡೆಸುವ ಅಭಿಪ್ರಾಯವನ್ನು ತಳ್ಳಿಹಾಕಿತ್ತು ಮತ್ತು ಸ್ಟ್ಯಾಚುಟರಿ ಸಿವಿಲ್ ಸರ್ವೀಸನ್ನು ರದ್ದುಗೊಳಿಸುವ ಬಗ್ಗೆ ಸಲಹೆ ನೀಡಿತು. ಇಲ್ಲಿಯವರೆಗೆ ಒಡಂಬಡಿಕೆಗೆ ಒಳಪಟ್ಟಿದ್ದ ಸೇವಾ ವರ್ಗದ ಹಲವಾರು ಹುದ್ದೆಗಳನ್ನು ಮೀಸಲಾಗಿರುಸುತ್ತಿದ್ದು, ಇದನ್ನು ಸ್ಥಳೀಯ ಸೇವಾ ವರ್ಗದವರೆಲ್ಲರಿಗೂ (Local Sarvice) ಅನ್ವಯವಾಗುವಂತೆ ತೆರೆದಿಡಬೇಕು. ಇದನ್ನು ಪ್ರಾಂತೀಯ (ಸಾರ್ವಜನಿಕ) ಸೇವಾವರ್ಗವೆಂದು ಕರೆಯಲಾಗುವುದು. ಪ್ರತಿ ಪ್ರಾಂತದಲ್ಲಿಯೂ ಕೆಳದರ್ಜೆಯವರಿಗೆ ಬಡ್ತಿ ನೀಡುವುದರ ಮೂಲಕ ಅಥವಾ ನೇರವಾಗಿ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿತು. ಒಡಂಬಡಿಕೆಗೆ ಒಳಪಟ್ಟ ಮತ್ತು ಒಡಂಬಡಿಕೆಗೆ ಒಳಪಡದ ಎಂಬ ಪದಗಳ ಬದಲು ಸಾಮ್ರಾಜ್ಯದ ಮತ್ತು ಪ್ರಾಂತೀಯ ಎಂಬ ಪದಗಳು ಒಂದು ಪ್ರಾಂತೀಯ ಸಭೆಯ ಅಧೀನದಲ್ಲಿ ಸಬಾರ್ಡಿನೇಟ್ ಸಿವಿಲ್ ಸರ್ವೀಸ್ ವರ್ಗವಿತ್ತು.

ಈ ಶಿಫಾರಸ್ಸುಗಳನ್ನು ಅಂಗೀಕರಿಸಲಾಯಿತು. ಒಡಂಬಡಿಕೆಗೆ ಒಳಪಟ್ಟ ಸಿವಿಲ್ 'ಸರ್ವೀಸನ್ನು ಇನ್ನು ಮುಂದೆ ಸಿವಿಲ್ ಸರ್ವೀಸ್ ಆಫ್ ಇಂಡಿಯಾ'ಎಂದು ಪ್ರಾಂತೀಯ ಸಿವಿಲ್ ಸರ್ವೀಸನ್ನು ಆ ನಿರ್ದಿಷ್ಟ ಪ್ರಾಂತಕ್ಕೆ ಸೇರಿಸಿದಂತೆಯೂ ಉದಾಹರಣೆಗೆ, ಬಂಗಾಳ ಸಿವಿಲ್ ಸರ್ವೀಸ್ ಕರೆಯುವ ವಾಡಿಕೆಯಾಯಿತು. ಸಿವಿಲ್ ಸರ್ವೀಸ್ ಇಂಡಿಯಾಕ್ಕೆ ಮೀಸಲಾದ ಆದರೆ ಹೊಸ ಪ್ರಾಂತೀಯ ಸೇವಾ ವರ್ಗಕ್ಕೆ ತೆರೆದ ಹುದ್ದೆಗಳ ಒಂದು ಪಟ್ಟಿಯನ್ನು ತಯಾರಿಸಲಾಯಿತು ಮತ್ತು ಅಂತಹ ಪಟ್ಟಿ ಮಾಡಿದ ಹುದ್ದೆಗೆ ಯಾವ ಭಾರತೀಯನನ್ನೇ ಆಗಲಿ ನೇಮಕ ಮಾಡಲು ಸ್ಥಳೀಯ ಸರ್ಕಾರಗಳಿಗೆ ಅಧಿಕಾರ ನೀಡಲಾಗಿತ್ತು. ಶಿಕ್ಷಣ, ಪೋಲೀಸ್, ಲೋಕೋಪಯೋಗಿ ಹಾಗೂ ವೈದ್ಯಕೀಯ ವಿಭಾಗಗಳು ಮುಂತಾದ ಇತರ ವಿಭಾಗಗಳಲ್ಲಿ ಸಹ ಇಂಪೀರಿಯಲ್, ಪ್ರಾವಿನ್ಸಿಯಲ್ ಹಾಗೂ ಸಬಾರ್ಡಿನೇಟ್ ಸೇವೆಗಳೆಂಬ ಅದೇ ರೀತಿಯ ವಿಭಾಗಗಳು ಇದ್ದವು. ಮೊದಲನೆಯದರಲ್ಲಿ ಬಹುಭಾಗ ಇಂಗ್ಲೀಷರೇ ಇದ್ದರೂ ಉಳಿದ ಎರಡು ವಿಭಾಗಗಳಲ್ಲಿ ವಿಶೇಷವಾಗಿ ಭಾರತೀಯರೇ ಇರುತ್ತಿದ್ದರು.

ಈ ವ್ಯವಸ್ಥೆ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಬ್ರಿಟಿಷರ ಆಳ್ವಿಕೆಯ ಅಂತ್ಯದವರೆಗೂ ಅಸ್ತಿತ್ವದಲ್ಲಿತ್ತು. ಅದು ಸೇವಾ ಮಟ್ಟವನ್ನು ಉತ್ತಮಗೊಳಿಸಿತು. ಆದರೆ ರಾಜ್ಯದಲ್ಲಿನ ಉನ್ನತ ಹುದ್ದೆಗಳಿಗೆ ಅಧೀನ ಸಂಖ್ಯೆಯಲ್ಲಿ ಭಾರತೀಯರ ನೇಮಕದ ನ್ಯಾಯಬದ್ಧ ಮಹತ್ವಾಕಾಂಕ್ಷೆಯನ್ನು ತೃಪ್ತಿಗೊಳಿಸಲಾಗಲಿಲ್ಲ.

ಇಂಡಿಯನ್ ಸಿವಿಲ್ ಸರ್ವಿಸ್‌ಗೆ ಭಾರತ ಹಾಗೂ ಇಂಗ್ಲೆಂಡ್‌ಗಳೆರಡರಲ್ಲಿಯೂ ಏಕ ಕಾಲದಲ್ಲಿ ಪರೀಕ್ಷೆ ನಡೆಸುವುದರ ಪರವಾಗಿ ಕಾಮನ್ಸ್ ಸಭೆ 1893 ರಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಸೆಕ್ರೆಟರಿ ಆಫ್ ಸ್ಟೇಟ್ ಅಭಿಪ್ರಾಯಕ್ಕಾಗಿ ಈ ನಿರ್ಣಯವನ್ನು ಭಾರತ ಸರ್ಕಾರಕ್ಕೆ ಕಳುಹಿಸಿದ. ಪ್ರಾಂತೀಯ ಸರ್ಕಾರಗಳೊಡನೆ ಸಮಾಲೋಚನೆ ನಡೆಸಿದ ತರುವಾಯ ಲಾರ್ಡ್ ಲ್ಯಾನ್ಸ್ ಡೌನ್‌ನ ಸರ್ಕಾರ ಈ ನಿರ್ಣಯವನ್ನು ಖಂಡಿತವಾಗಿಯೂ ವಿರೋಧಿಸಿತು. "ಆಗ ನೇಮಕಗೊಂಡಿದ್ದ ಯುರೋಪಿಯನ್ ಅಧಿಕಾರ ವರ್ಗದವರ ಸಂಖ್ಯೆಯ ಇಳಿಸುವಿಕೆ ಬ್ರಿಟಿಷರ ಆಳ್ವಿಕೆಯ ಸುಭದ್ರತೆಗೆ ಸರಿಯಾಗುವುದಿಲ್ಲ. ಪರೀಕ್ಷೆಗಳಲ್ಲಿ ಅನಿರ್ಬಂಧಿತ ಸ್ಪರ್ಧೆಯು ಸಿವಿಲ್ ಸರ್ವೀಸ್‌ನಲ್ಲಿ ಬ್ರಿಟಿಷ್ ಸಂಖ್ಯೆಯನ್ನು ಅತಿಯಾಗಿ ಕಡಿಮೆಗೊಳಿಸುವುದು ಮಾತ್ರವೇ ಅಲ್ಲ; ಆದರೆ ಪರಂಪರಾನುಗತವಾಗಿ ಆಳ್ವಿಕೆಗೆ ಹೊಂದಿಕೊಂಡಿರುವ ಮತ್ತು ವಿಶೇಷ ಗುಣಶಕ್ತಿ ಹೊಂದಿರುವ ಆದರೆ ಶೈಕ್ಷಣಿಕವಾಗಿ ಅಷ್ಟಾಗಿ ಮುಂದುವರಿಯದ ಮಹಮದೀಯರು, ಸಿಖ್ಖರು ಹಾಗೂ ಇತರ ಜನಾಂಗಗಳನ್ನು ಸಹ ಬಹುಮಟ್ಟಿಗೆ ಸೇವಾ ವರ್ಗದಿಂದ ಹೊರಹಾಕುವುದು ಎಂಬುದು ಅವರ ವಾದವಾಗಿತ್ತು". ಈ ಸಲಹೆಯ ಬಗ್ಗೆ ಯಾವ ಕಾರ್ಯವನ್ನು ಕೈಗೊಳ್ಳಲಾಗಲಿಲ್ಲ ಮತ್ತು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುವ ಮುನ್ನ ಕಾಲು ಶತಮಾನದ ಕಾಲಚಕ್ರ ಉರುಳಿತು.

## 77.2 ಸ್ಥಳೀಯ ಸರ್ಕಾರ

ಪ್ರಪಂಚದ ಇತರ ಯಾವುದೇ ಭಾಗಕ್ಕಿಂತ ಭಾರತದಲ್ಲಿ ಬಹು ಹಿಂದಿನಿಂದಲೂ ಸ್ಥಳೀಯ ಸರ್ಕಾರದ ಬಗ್ಗೆ ಭಾವನೆಗಳು ಹೆಚ್ಚಾಗಿಯೇ ಇದ್ದವು. ಗ್ರಾಮ ಹಾಗೂ ಪಟ್ಟಣಗಳು ಸೂಕ್ಷ್ಮರೂಪದ ಸಣ್ಣ ರಾಜ್ಯಗಳಾಗಿದ್ದವು. ಇಲ್ಲಿನ ನೈರ್ಮಲ್ಯ, ಸಂಪರ್ಕ, ನ್ಯಾಯ ಹಾಗೂ ಪೋಲೀಸರ ಸ್ಥಳೀಯ ಅವಶ್ಯಕತೆ-ಅಗತ್ಯತೆಗಳನ್ನು ಮುಖ್ಯ ಕಾರ್ಯಾಧಿಕಾರಿಯ ಜೊತೆಯಲ್ಲಿನ ಜನತೆಯ ಸಭೆಗಳೇ ಪೂರೈಸುತ್ತಿದ್ದವು.

ಮೊಗಲ್ ಸಾಮ್ರಾಜ್ಯದ ನಾಶದ ಆರಂಭದಲ್ಲುಂಟಾದ ಸಂಕ್ಷೋಭೆಯ ಕಾಲದಲ್ಲಿ ಈ ಸ್ಥಳೀಯ ಆಡಳಿತ ಸಂಸ್ಥೆಗಳು ಪಟ್ಟಣಗಳಿಂದ ಬಹುಮಟ್ಟಿಗೆ ಸಂಪೂರ್ಣವಾಗಿ ಅದೃಶ್ಯವಾದವು ಮತ್ತು ಗ್ರಾಮಗಳಲ್ಲಿ ಬಹುಮಟ್ಟಿಗೆ ಕ್ಷೀಣಗೊಂಡವು. ಗ್ರಾಮಸಭೆಗಳು ಎಲ್ಲೆಲ್ಲಿ ಕಾರ್ಯರೂಪದಲ್ಲಿದ್ದವೋ ಅಲ್ಲೆಲ್ಲಾ ಅದನ್ನು ಉಳಿಸಿಕೊಂಡು ಬರಲು ಬ್ರಿಟಿಷ್ ಸರ್ಕಾರ ಪ್ರಯತ್ನಿಸಿತು ಮತ್ತು ಅವಶ್ಯವಿದ್ದೆಡೆಗಳಲ್ಲಿ ಅವುಗಳ ಪುನರುದ್ಧಾರ ಮಾಡಿತು. ವಿಶಾಲವಾದ ಗ್ರಾಮ ಪ್ರದೇಶಗಳು ಆಗೂ ಪಟ್ಟಣಗಳು ಇವೆರಡಕ್ಕೂ ಸ್ಥಳೀಯ ಸರ್ಕಾರದ ಒಂದು ಖಚಿತ ವ್ಯವಸ್ಥೆ ರೂಪಿಸುವ ಸಮಸ್ಯೆಯನ್ನು ಅವು ಎದುರಿಸುತ್ತಿದ್ದವು.

ಗ್ರಾಮೀಣ ಪ್ರದೇಶಗಳಲ್ಲಿನ ಸ್ಥಳೀಯ ವ್ಯವಹಾರಗಳ ಆಡಳಿತದಲ್ಲಿ ಯಾವುದೇ ನಿರ್ದಿಷ್ಟ ವಿಧಾನವನ್ನು ಸರ್ಕಾರ ಅಳವಡಿಸಿಕೊಳ್ಳಲಿಲ್ಲ. ಅಸ್ತಿತ್ವದಲ್ಲಿದ್ದ ಸಂಸ್ಥೆಗಳು ಅಥವಾ ಅಗತ್ಯವಾದಲ್ಲಿ ಇತರ ಸಂಸ್ಥೆಗಳನ್ನು ಸುಧಾರಿಸುವುದರ ಮೂಲಕ ಅದು ತನ್ನ ಕಾರ್ಯ ಮುಂದುವರಿಸಿತು. ಕಾಲುವೆಗಳ ಮೇಲುಸ್ತುವಾರಿ, ರಸ್ತೆಗಳು, ಸೇತುವೆ ಹಾಗೂ ನೀರ್ಗಾಲುವೆಗಳ ನಿರ್ಮಾಣ ಹಾಗೂ ರಿಪೇರಿಗಾಗಿ ತೆರಿಗೆ ವಸೂಲಿ ಮಾಡಲು ಸರ್ಕಾರಕ್ಕೆ ಅಧಿಕಾರ ನೀಡುವ ನಿಬಂಧನೆಯನ್ನು ಬಂಗಾಳದಲ್ಲಿ 1816 ಮತ್ತು 1819 ರಲ್ಲಿ ಅಂಗೀಕರಿಸಲಾಯಿತು. ಈ ರೀತಿ ಸಂಗ್ರಹಿಸಿದ ನಿಧಿಯನ್ನು ವ್ಯಯಮಾಡುವುದರಲ್ಲಿ ಸ್ಥಳೀಯ ಸಮಿತಿಗಳು ಸರ್ಕಾರಗಳ ಸಲಹೆ ನೀಡುತ್ತಿದ್ದವು. ಮ್ಯಾಜಿಸ್ಟ್ರೇಟರು ಕಾರ್ಯದರ್ಶಿಗಳಾಗಿದ್ದ ಸಮಿತಿಗಳನ್ನು ನೇಮಕ ಮಾಡುತ್ತಿತ್ತು.

ಬಂಗಾಳದ ಹೊರಗೆ, ಭೂಕಂದಾಯದ ಮೇಲೆ ಅಲ್ಪ ಶೇಕಡಾಂಶ ಅಥವಾ ತೆರಿಗೆ ವಿಧಿಸುವುದರ ಮೂಲಕ ಅವಶ್ಯವಾದ ಹಣವನ್ನು ಸಂಗ್ರಹಿಸಲಾಯಿತು. ಬೊಂಬಾಯಿಯಲ್ಲಿ 1869 ರಲ್ಲಿ ಶಾಸನದ ಮೂಲಕ ಈ ವಿಷಯವನ್ನು ಒಂದು ನಿರ್ದಿಷ್ಟ ಆಧಾರದ ಮೇಲೆ ರೂಪಿಸಲಾಯಿತು. ಕರಗಳನ್ನು ನ್ಯಾಯಬದ್ಧಗೊಳಿಸುವುದರ ಮೂಲಕ ಲೋಕೋಪಯೋಗಿ ಕಾರ್ಯಗಳ ಮೇಲೆ ವೆಚ್ಚಕ್ಕೆ ಅವಕಾಶ ಮಾಡಿಕೊಟ್ಟಿತು ಮತ್ತು ಇಡೀ ಜಿಲ್ಲೆಗೆ ಮಾತ್ರವೇ ಅಲ್ಲದೆ ಅದರ ಉಪವಿಭಾಗಗಳಿಗೂ ಅನ್ವಯವಾಗುವಂತೆ, ನಿಧಿ ಪರಿಪಾಲನೆಗಳಿಗೆ ಸಮಿತಿಗಳನ್ನು ನೇಮಿಸಿತು.

ಭಾರತ ಸರ್ಕಾರದ 1870 ರ ನಿರ್ಣಯದಿಂದ ಸ್ಥಳೀಯ ಸರ್ಕಾರಗಳ ಅಭಿವೃದ್ಧಿಗೆ ಒಂದು ಮಹತ್ತರ ಉತ್ತೇಜನ ದೊರೆಯಿತು. ಒಂದೇ ವರ್ಷದ ಅವಧಿಯಲ್ಲಿ ಬೊಂಬಾಯಿ ಸರ್ಕಾರದ ಮಾದರಿಯಲ್ಲಿಯೇ ವಿವಿಧ ಪ್ರಾಂತಗಳಲ್ಲಿ ಕಾಯ್ದೆಗಾಗಿ ಮಾನ್ಯಮಾಡಲಾಯಿತು. ಕಾರ್ಯ ರೂಪದಲ್ಲಿದ್ದ ತೆರಿಗೆಗಳನ್ನು ಕ್ರಯಬದ್ಧಗೊಳಿಸಲಾಯಿತು, ಮತ್ತು ಅವನ್ನು ಹೆಚ್ಚಿಸಲಾಯಿತು. ನಿಧಿಗಳ ಪರಿಪಾಲನೆಗಾಗಿ

ಬೊಂಬಾಯಿನಂತೆ ಸಣ್ಣ ಕ್ಷೇತ್ರಗಳಲ್ಲದೆ ಇಡೀ ಜಿಲ್ಲೆಗಾಗಿ ಸಮಿತಿಗಳನ್ನು ನೇಮಿಸಲಾಯಿತು. ಈ ಎಲ್ಲಾ ಸಮಿತಿಗಳನ್ನು ಸಣ್ಣ ಕ್ಷೇತ್ರಗಳಲ್ಲದೆ ಇಡೀ ಜಿಲ್ಲೆಗಾಗಿ ಸಮಿತಿಗಳನ್ನು ನೇಮಿಸಲಾಯಿತು. ಈ ಎಲ್ಲಾ ಸಮಿತಿಗಳನ್ನು ಸರ್ಕಾರ ನಾಮಕರಣ ಮಾಡಿತು. ಅವು ಸರ್ಕಾರದ ನಿಯಂತ್ರಣಕ್ಕೆ ಒಳಗಾಗಿದ್ದವು. ಸಮಿತಿಯಲ್ಲಿ ಅಧಿಕಾರದ ಹಾಗೂ ಅಧಿಕಾರೇತರ ಸದಸ್ಯರೂ ಇದ್ದು ಸಮಿತಿಗೆ ಒಬ್ಬ ಅಧಿಕೃತ ಅಧ್ಯಕ್ಷರು ಇರುತ್ತಿದ್ದರು.

ಮೊತ್ತ ಮೊದಲ ಬಾರಿಗೆ ಬಂಗಾಳದಲ್ಲಿ ಹೊಸ ಕಾಯ್ದೆಯ ಅನ್ವಯ ಕರ ವಿಧಿಸಲಾಯಿತು. ಅದು ಖಾಯಂ ಜಮೀನ್ದಾರಿ ವ್ಯವಸ್ಥೆಯನ್ನು ಉಲ್ಲಂಘಿಸಿತೆಂದು ಆಗ ದೊಡ್ಡ ಗಲಭೆಯೆದ್ದಿತು. ಸರ್ಕಾರ ಇದಕ್ಕೆ ಸ್ವಲ್ಪ ಮಟ್ಟಿಗೆ ಒಪ್ಪಿಕೊಂಡು, ರಸ್ತೆಗಳಿಗೆ ಅವಶ್ಯವಾದ ಹಣಕ್ಕಾಗಿ ಮಾತ್ರವೇ ತೆರಿಗೆ ವಿಧಿಸಲು ನಿರ್ಧರಿಸಿತು. ಬಂಗಾಳದಲ್ಲಿ ರಸ್ತೆ-ಕರ ಎಂದು ಕರೆಯಲಾಗುತ್ತಿದ್ದ ಇದನ್ನು ಇತರ ಪ್ರಾಂತಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ವ್ಯಯಿಸುತ್ತಿದ್ದಂತೆ ಬಂಗಾಳದಲ್ಲಿ ವಿನಿಯೋಗಿಸಲಾಗಲಿಲ್ಲ.

1871 ರಲ್ಲಿ ಜಾರಿಗೆ ತರಲಾದ ಈ ವ್ಯವಸ್ಥೆ ಅಸ್ತಿತ್ವದಲ್ಲಿದ್ದ ವ್ಯವಸ್ಥೆಗಿಂತ ಸಾಕಷ್ಟು ಸುಧಾರಿತ ವ್ಯವಸ್ಥೆಯಾಗಿತ್ತು ಎಂಬುದಂತೂ ನಿಸ್ಸಂದೇಹವಾಗಿತ್ತು. ಆಯಾ ಪ್ರದೇಶಗಳಲ್ಲಿ ಸಂಪರ್ಕ, ನೈರ್ಮಲ್ಯ ಹಾಗೂ ಶಿಕ್ಷಣವನ್ನು ಸುಧಾರಿಸಲು ಹೆಚ್ಚು ಕ್ರಮಗಳನ್ನು ಕೈಗೊಳ್ಳಲಾಯಿತು. ಆದರೆ ಹಲವಾರು ಲೋಪದೋಷಗಳೂ ಈ ವ್ಯವಸ್ಥೆಯಲ್ಲಿ ಇರದಿರಲಿಲ್ಲ. ಸಮಿತಿಗಳು ಸಂಪೂರ್ಣವಾಗಿ ಅಧಿಕಾರಿಗಳ ಸಮೂಹದಿಂದ ಕೂಡಿದ್ದು ಜನಸಾಮಾನ್ಯರ ಆಸೆ-ಆಕಾಂಕ್ಷೆಗಳು ಹಾಗೂ ಭಾವನೆಗಳಿಗೆ ಅವಕಾಶವೇ ಇರಲಿಲ್ಲ. ಅಲ್ಲದೆ ಆವರ್ಗ ವಹಿಸಿಕೊಳ್ಳಬೇಕಾದ ಪ್ರದೇಶದ ವ್ಯಾಪ್ತಿ ಬಹು ವಿಸ್ತಾರವಾಗಿತ್ತು. ಖಾಸಗಿ ಸದಸ್ಯರಿಗೆ ಇದರ ಬಗ್ಗೆ ತಿಳುವಳಿಕೆ ಸಾಲದಾಗಿದ್ದುದರಿಂದ ವಿಶಾಲ ಪ್ರದೇಶದ ಭಾಗವಾದ ಸ್ಥಳೀಯ ವ್ಯವಹಾರಗಳಲ್ಲಿ ಅವರು ಅಲ್ಪ ಸಕ್ತರಾಗಿರುತ್ತಿದ್ದರು.

ಈ ನ್ಯೂನತೆಗಳನ್ನು ಹೋಗಲಾಡಿಸಲು ಮತ್ತು ಇಂಗ್ಲೀಷ್ ಕಾನೂನಿನ ಅನ್ವಯದ ಮಾದರಿಯಲ್ಲಿಯೇ ಸ್ವಲ್ಪ ಮಟ್ಟಿಗೆ ಸ್ಥಳೀಯ ಸರ್ಕಾರದ ವಾಸ್ತವ ಗುಣಲಕ್ಷಣಗಳನ್ನು ಜಾರಿಗೆ ತರಲು ಲಾರ್ಡ್ ರಿಪ್ಪನ್ ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದ. ರಿಪ್ಪನ್‌ನ ಧ್ಯೇಯಗಳನ್ನು ಸರ್ಕಾರದ ನಿರ್ಣಯದ ರೂಪದಲ್ಲಿ 1882 ರಲ್ಲಿ ಮೇನಲ್ಲಿ ತರಲಾಯಿತು. ಈ ಹೊಸ ಯೋಜನೆಯ ಎರಡು ವಿಶಿಷ್ಟ ಲಕ್ಷಣಗಳೆಂದರೆ:

(1) ಸ್ಥಳೀಯ ಮಂಡಳಿ ಅಥವಾ ಸಮಿತಿ ಸೇವೆ ಸಲ್ಲಿಸಬೇಕಾದ ಅತಿದೊಡ್ಡ ಪ್ರದೇಶವೆಂದರೆ ಉಪ-ವಿಭಾಗವಾಗಿರಬೇಕೇ ವಿನಾ ಜಿಲ್ಲೆಯಲ್ಲ. ಇದರ ಅಧೀನದಲ್ಲಿ ಪ್ರಾಥಮಿಕ ಮಂಡಳಿಗಳಿರಬೇಕು. ಇದು ಸಣ್ಣ ಕ್ಷೇತ್ರಗಳಿಗೆ ಸೇವೆಸಲ್ಲಿಸುವಂತಿರಬೇಕು. ಇದರಿಂದ ಮಂಡಳಿಯು ಪ್ರತಿಯೊಬ್ಬ ಸದಸ್ಯನಿಗೂ ಸ್ಥಳೀಯ ಸಮಸ್ಯೆಗಳ ಬಗ್ಗೆ ಜ್ಞಾನ ಉಂಟಾಗಿ ಅದರ ಬಗೆಗಿನ ವ್ಯವಹಾರಗಳಲ್ಲಿ ಆಸಕ್ತಿ ವಹಿಸುವಂತಾಗುವುದು.

(2) ಸ್ಥಳೀಯ ಮಂಡಳಿಗಳು ಬಹುಮಟ್ಟಿಗೆ ಚುನಾಯಿತ ಅಧಿಕಾರೇತರ ಸದಸ್ಯರಿಂದ ಕೂಡಿದ್ದು, ಅಧಿಕಾರೇತರ ಛೇರ್‌ಮನ್ ಇವುಗಳ ಅಧ್ಯಯನವಾಗಿರಬೇಕು.

ಸ್ಥಳೀಯ ಸಂಸ್ಥೆಗಳ ನಿಜವಾದ ಆರಂಭವೇ ಇಲ್ಲಿತ್ತು. ಆದರೆ ಆ ನಿರ್ಣಯದ ಹಿನ್ನಲೆಯಲ್ಲಿದ್ದ ತತ್ತ್ವಗಳನ್ನು ದುರದೃಷ್ಟವಶಾತ್ ಹಲವಾರು ಪ್ರಾಂತಗಳಲ್ಲಿ ಕಾರ್ಯರೂಪಕ್ಕೆ ತರಲೇ ಇಲ್ಲ. ವಿವಿಧ ಪ್ರಾಂತಗಳಲ್ಲಿ ಅನುಸರಿಸುತ್ತಿದ್ದ ಶಾಸನಗಳು ವಿವಿಧ ರೀತಿಯವಾಗಿದ್ದವು. ಮಧ್ಯ ಪ್ರಾಂತ್ಯಗಳಲ್ಲಿ ಛೇರ್‌ಮನ್ ಅದಿಕಾರೇತರ ವರ್ಗದವನಾಗಿದ್ದ ಮತ್ತು ಚುನಾವಣಾ ತತ್ತ್ವವನ್ನು ಸ್ವಲ್ಪ ಮಟ್ಟಿಗೆ ಇಲ್ಲಿ ಅಳವಡಿಸಿಕೊಳ್ಳಲಾಯಿತು. ಇನ್ನಿತರ ಪ್ರಾಂತಗಳಲ್ಲಿ ಹಳೆಯ ಪದ್ಧತಿಯನ್ನು ಮುಂದುವರಿಸಲಾಯಿತು ಹಾಗೂ ಅಲ್ಪ ಸಂಖ್ಯೆಯಲ್ಲಿ ಮಾತ್ರ ಸದಸ್ಯರನ್ನು ಚುನಾಯಿಸಲಾಗುತ್ತಿತ್ತು. ಎಲ್ಲ ಕಡೆಗಳಲ್ಲಿಯೂ ಜಿಲ್ಲೆಯು ಸ್ಥಳೀಯ ಮಂಡಳಿಗಳ ಪ್ರದೇಶವಾಗಿತ್ತು. ಲಾರ್ಡ್ ರಿಪ್ಪನ್‌ನ ತತ್ತ್ವಗಳನ್ನು ಸಂಪೂರ್ಣವಾಗಿ ಕಾರ್ಯಾಚರಣೆಗೆ ತರಲು ಬಂಗಾಳದಲ್ಲಿಯೇ ಪ್ರಯತ್ನ ನಡೆಯಿತಾದರೂ ಈ ಉದ್ದೇಶಕ್ಕಾಗಿ ಮಂಡಿಸಲಾದ ಮಸೂದೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ನಿರಾಕರಿಸಿದ. ಅಂತಿಮವಾಗಿ 1885 ರಲ್ಲಿ ಅಂಗೀಕೃತವಾದ ಕಾಯ್ದೆಯ ಪ್ರಕಾರ ಜಿಲ್ಲಾ ಮ್ಯಾಜಿಸ್ಟ್ರೇಟರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಂಡಳಿಗಳು ಕಾರ್ಯಾಚರಣೆಯನ್ನು ಮುಂದುವರೆಸಿದವು.

1882 ರ ಮೇ ನಿರ್ಣಯದ ತತ್ತ್ವಗಳನ್ನು ಆಚರಣೆಗೆ ತೆರದಿರಲು ಕಾರಣವಾಗಿದ್ದುದು ಎಲ್ಲೆಲ್ಲಿಯೂ ದಕ್ಷತೆಯ ಅಗತ್ಯವಿತ್ತು. ಈ ದಿಸೆಯಲ್ಲಿ ಸ್ವಲ್ಪ ಮಟ್ಟಿನ ಯಶಸ್ಸು ದೊರೆಯಿತು. ಆದರೆ ಈ ಹೊಸ ತತ್ತ್ವಗಳ ಮೌಲ್ಯ ಸಂಪೂರ್ಣವಾಗಿಯೇ ಭಿನ್ನ ದಿಸೆಯಲ್ಲಿಡಲಾಗಿತ್ತು. ಅದರ ಈ ತತ್ತ್ವಗಳ ಮೂಲ ನಿಯೋಜಕ ಲಾರ್ಡ್ ರಿಪ್ಪನ್ ಮುಂದಿನಂತೆ ಅದನ್ನು ಸ್ಪಷ್ಟಪಡಿಸಿದ್ದಾನೆ.

"ಈ ಕ್ರಮಗಳನ್ನು ಕಾರ್ಯರೂಪಕ್ಕೆ ತಂದಿರುವುದು ಹಾಗೂ ಇದಕ್ಕೆ ಬೆಂಬಲ ನೀಡಿರುವುದು ಆಡಳಿತದಲ್ಲಿ ಸುಧಾರಣೆಯಾಗಬೇಕೆಂಬ ಮೂಲಭೂತ ದೃಷ್ಟಿಯಿಂದಲ್ಲ, ರಾಜಕೀಯ ಹಾಗೂ ಜನತಾ ಶಿಕ್ಷಣದ ಕ್ರಮವಾಗಿ ಇದು ಪ್ರಧಾನವಾಗಿ ಅಪೇಕ್ಷಣೀಯವಾಗಿದೆ".

ಲಾರ್ಡ್ ರಿಪ್ಪನ್‌ನ ಉದಾರ ಕಲ್ಪನೆಗಳನ್ನು ದುರದೃಷ್ಟವಶಾತ್ ಸ್ಥಳೀಯ ಸರ್ಕಾರಗಳಾಗಲೀ ಅಥವಾ ಇಂಗ್ಲೆಂಡ್‌ನಲ್ಲಿನ ಅದಿಕಾರಿ ವರ್ಗದವರಗಾಲೀ ಅಂಗೀಕರಿಸಲಿಲ್ಲ. ಈ ರೀತಿಯಲ್ಲಿ ಭಾರತೀಯರ ಮನದಲ್ಲಿ ಮೂಡಿದ ಉನ್ನತ ಭಾವನೆಗಳು, ಆಸೆ-ಆಕಾಂಕ್ಷೆಗಳು ನುಚ್ಚುನೂರಾದವು. ಆದರೆ ಕಾಂಗ್ರೆಸ್ ಈ ಪ್ರಶ್ನೆಯನ್ನು ಎತ್ತಿಕೊಂಡು ವರ್ಷ ವರ್ಷವು ಸರ್ಕಾರವನ್ನು ಇದಕ್ಕಾಗಿ ಒತ್ತಾಯ ಪಡಿಸುತ್ತಿತ್ತು.

*ಪುರಸಭೆಗಳು*

ಲಾರ್ಡ್ ರಿಪ್ಪನ್‌ನ ಕಾಲದವರೆವಿಗೆ ಗ್ರಾಮೀಣ ಪ್ರದೇಶಗಳ ಆಡಳಿತದಂತೆ ಪಟ್ಟಣಗಳ ಸ್ಥಳೀಯ ಆಡಳಿತವನ್ನು ಯಾವುದೇ ರೀತಿಯ ಏಕರೂಪದ ಅಥವಾ ನಿರ್ದಿಷ್ಟ ತತ್ತ್ವದ ಆಧಾರದ ಮೇಲೆ ನಡೆಸುತ್ತಿರಲಿಲ್ಲ. ದೊಡ್ಡ ಪಟ್ಟಣಗಳಲ್ಲಿ ಸರ್ಕಾರ ನಾಮಕರಣ ಮಾಡಿದ ಒಂದು ಪುರಸಭಾ ಸಮಿತಿಯಿರುತ್ತಿತ್ತು. ಜಿಲ್ಲಾ ನ್ಯಾಯಾಧೀಶ ಇದರ ಅಧ್ಯಕ್ಷನಾಗಿರುತ್ತಿದ್ದ ಸ್ಥಳೀಯ ಅಗತ್ಯಗಳ ಪೂರೈಕೆಗಾಗಿ ತೆರಿಗೆ ಹಾಕುವ ಅದರ ಅಧಿಕಾರ ಕೆಲವು ಸಂದರ್ಭಗಳಲ್ಲಿ ಶಾಸಕಾಂಗದ ಕಾಯ್ದೆಗಳನ್ನು ಆಧರಿಸಿದುವಾಗಿದ್ದರೆ ಇತರ ಕಡೆಗಳಲ್ಲಿ ಸ್ಥಳೀಯ ಪದ್ಧತಿಗಳನ್ನು ಆಧರಿಸಿದ್ದವು. ಕೆಲವು ಕ್ಷೇತ್ರಗಳಲ್ಲಿ ಸರಕಾರದ ಹಸ್ತಕ್ಷೇಪದ ಮಿತಿ ಕಾನೂನಿನಿಂದ ನಿರ್ಧಾರಿತವಾಗಿದ್ದರೂ ಅನೇಕ ಸಂದರ್ಭಗಳಲ್ಲಿ ಆಡಳಿತದ ಮೇಲಣ ಸಂಪೂರ್ಣ ನಿಯಂತ್ರಣ ಸರಕಾರಕ್ಕೆ ಇರುತ್ತಿತ್ತು.

ಲಾರ್ಡ್ ರಿಪ್ಪನ್‌ನ 1882 ರ ಮೇ ನಿರ್ಣಯ ಗ್ರಾಮೀಣ ಮಂಡಳಿಗಳಂತೆಯೇ ಪುರಸಭಾ ಆಡಳಿತದಲ್ಲಿಯೂ ಸ್ವ ಸರ್ಕಾರದ ತತ್ತ್ವಗಳನ್ನು ಆಚರಣೆಗೆ ತರುವ ಉದ್ದೇಶದಿಂದ ಕೂಡಿದುದಾಗಿತ್ತು. ಅಂತಿಮ ಮೇಲ್ವಿಚಾರಣೆ, ನಿಯಂತ್ರಣ ಹಾಗೂ ನಿರ್ವಹಣೆ ಸರ್ಕಾರದ ಕೈಯಲ್ಲಿರಬೇಕಾದರೂ ಪುರಸಭಾ ಆಡಳಿತ ಜನತೆಯಿಂದ ಚುನಾಯಿತರಾದ ಪ್ರತಿನಿಧಿಗಳಿಗೆ ವಹಿಸಬೇಕು ಎಂದು ಅವನು ಯೋಚಿಸಿದ್ದ. ಅಧಿಕಾರೇತರ ಅಧ್ಯಕ್ಷನ ಮುಖಂಡತ್ವದಲ್ಲಿ ಜನತೆ ತಮ್ಮವರೇ ಆದ ಪ್ರತಿನಿಧಿಗಳ ಮೂಲಕ ತಮ್ಮನ್ನು ಆಳಿಕೊಳ್ಳಲು ತರಬೆತಿ ನೀಡುವಂತರಾಗಬೇಕು. ಪೋಲೀಸು ವೆಚ್ಚವನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಮತ್ತು ಪುರಸಭೆಗಳು, ಶಿಕ್ಷಣ, ನೈರ್ಮಲ್ಯ, ದೀಪ, ರಸ್ತೆ, ಕುಡಿಯುವ ನೀರಿನ ಸೌಲಭ್ಯ ಹಾಗೂ ಸಾರ್ವಜನಿಕ ಉಪಯಕ್ತತೆಯ ಇನ್ನಿತರ ಅಂಶಗಳ ಬಗ್ಗೆ ಹೆಚ್ಚು ಲಕ್ಷ್ಯವಹಿಸಲು ಎಂಬುದಾಗಿಯೂ ಅವನು ಸಲಹೆ ಮಾಡಿದ. ಲಾರ್ಡ್ ರಿಪ್ಪನ್‌ನ ಆದರ್ಶಗಳು ಬಹುಮಟ್ಟಿಗೆ ಸಾಧಿತವಾದುವು. ವಿವಿಧ ಪ್ರಾಂತಗಳಲ್ಲಿ ಪುರಸಭಾ ಕಮೀಷನರುಗಳ ಬಹುಪಾಲಿನ ಅರ್ಧದಿಂದ ಮುಕ್ಕಾಲಿನವರೆಗೆ ವ್ಯತ್ಯಸ್ಥವಾಗುವ ಕಡ್ಡಾಯ ಆಯ್ಕೆಗೆ ಅವಕಾಶ ನೀಡುವ ಕಾಯ್ದೆಗಳನ್ನು ಅಂಗೀಕರಿಸಲಾಯಿತು. ಅಧ್ಯಕ್ಷನ ಚುನಾವಣೆಗೂ ಈ ಕಾಯ್ದೆಗಳ ಅವಕಾಶ ಕಲ್ಪಿಸಿದವು. ಆದರೆ ಇದು ಕೇವಲ ಅನುಜ್ಞಾತಕ ಅಂಶವಾಗಿದ್ದಿತು ಮತ್ತು ಹಲವಾರು ಭಾಗಗಳಲ್ಲಿ ಇವರಿಗೆ ವಾಸ್ತವವಾಗಿ ಅಧಿಕಾರವನ್ನು ನೀಡಲೇ ಇಲ್ಲ. ಒಂದು ಪಕ್ಷ ಅಂಥ ಅಧಿಕಾರ ನೀಡಲಾಗಿದ್ದರೂ ಅಲ್ಲಿ ಅನೇಕ ವೇಳೆ ಜಿಲ್ಲಾಧಿಕಾರಿಯನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಗುತ್ತಿತ್ತು. ಆದರೆ ಕಾಲಕ್ರಮದಲ್ಲಿ ವಾಸ್ತವವಾಗಿ ಅಧಿಕಾರೇತರ ಅಧ್ಯಕ್ಷನೇ ಆಳ್ವಿಕೆಗಾರನಾಗುವ ಸ್ಥಿತಿ ಒದಗಿ ಬಂದಿತು.

ಆಧುನಿಕ ಭಾರತದಲ್ಲಿ ಸ್ಥಳೀಯ ಸಂಸ್ಥೆಗಳ ವಾಸ್ತವವಾದ ಆರಂಭ ಈ ರೀತಿಯಲ್ಲಿ ನಡೆಸಿದವನು ಲಾರ್ಡ್ ರಿಪ್ಪನ್‌ನಾಗಿದ್ದಾನೆ. ಅವನ ಕಲ್ಪನೆಗಳನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲಾಗಲಿಲ್ಲ. ಆದರೆ ಸ್ಥಳೀಯ ಸಂಸ್ಥೆಗಳ ವಾಸ್ತವ ಅಭಿವೃದ್ಧಿಯ ಫಲ ನೀಡಿದ ವೃಕ್ಷದ ಬೀಜ ನೆಟ್ಟವನೇ ಆಗಿದ್ದಾನೆ.

## 77.3 ಪ್ರಾಂತೀಯ ಸರ್ಕಾರ

ಕಲ್ಕತ್ತಾ, ಮದ್ರಾಸ್ ಹಾಗೂ ಬೊಂಬಾಯಿ ಈ ಮೂರು ಪ್ರೆಸಿಡೆನ್ಸಿ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಯ ಬಗ್ಗೆ ವಿಶೇಷ ವಿವರ ಅಗತ್ಯವಾಗಿದೆ. ಭಾರತದಲ್ಲಿ ಬ್ರಿಟಿಷ್ ಅಧಿಕಾರದ ಮೊದಲ ಕೇಂದ್ರಗಳಾದ ಇವುಗಳ ಸ್ಥಳೀಯ ಸರ್ಕಾರದ ಇತಿಹಾಸ ಅದನ್ನು ಹಿಂದಿನಿಂದಲೂ ಇದೆ ಮತ್ತು ಬ್ರಿಟಿಷ್ ಭಾರತದ ಇತರ ನಗರಗಳಿಗಿಂತ ಭಿನ್ನವಾದ ವಿಕಾಸದ ಲಕ್ಷಣವನ್ನು ಅವು ಪ್ರದರ್ಶಿಸುತ್ತವೆ.

ಹದಿನೆಂಟನೆಯ ಶತಮಾನದ ಮುಕ್ತಾಯದ ವೇಳೆಗೆ, ಪಾರ್ಲಿಮೆಂಟರಿ ಕಾನೂನೊಂದು ಈ ನಗರಗಳಲ್ಲಿ ಶಾಂತಿ ಪಾಲರನ್ನು (Justice of Peace) ನೇಮಕ ಮಾಡಲು ಗವರ್ನರ್ ಜನರಲ್‌ನಿಗೆ ಅಧಿಕಾರ ನೀಡಿತು. ಅವರು ಪೋಲೀಸ್ ಹಾಗೂ ನೈರ್ಮಲ್ಯವನ್ನು ನೋಡಿಕೊಳ್ಳುತ್ತಿದ್ದರು. ಅಗತ್ಯ ವೆಚ್ಚಗಳನ್ನು ಭರಿಸಲು ಮನೆಗಳ ಮಾಲೀಕರು ಹಾಗೂ ವಾಸಿಸುವವರ ಮೇಲೆ ತೆರಿಗೆಗಳನ್ನು ವಿಧಿಸಲು ಅವರಿಗೆ ಅಧಿಕಾರ ನೀಡಲಾಗಿತ್ತು.

ಈ ವ್ಯವಸ್ಥೆ ಅತೃಪ್ತಿಕರವಾದುದೂ ನ್ಯೂನತೆಯಿಂದ ಕೂಡಿದುದೂ ಆಗಿತ್ತು. 1856 ರಲ್ಲಿ ನಗರಗಳ ಪಾಲನೆ ಹಾಗೂ ಸುಧಾರಣೆಗೆ ಮತ್ತು ತೆರಿಗೆಗಳ ನಿಗಧೀಕರಣ ಹಾಗೂ ಉತ್ತಮ ಸಂಗ್ರಹಣೆಗಾಗಿ ಎರಡು ಕಾಯ್ದೆಗಳನ್ನು ಅಂಗೀಕರಿಸಲಾಯಿತು. ಪ್ರತಿಯೊಂದು ನಗರದಲ್ಲಿಯೂ ಮೂವರು ಕಮೀಷನರುಗಳನ್ನು ನೇಮಕ ಮಾಡಲಾಯಿತು ಮತ್ತು ಕಲ್ಕತ್ತಾದ ಅನಿಲ-ದೀಪ ಹಾಗೂ ಮಲಸುರಂಗಗಳ ನಿರ್ಮಾಣಕ್ಕಾಗಿ ಕಾಯ್ದೆಯಲ್ಲಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಯಿತು.

ಇಲ್ಲಿಂದ ಮುಂದೆ ಮೂರು ನಗರಗಳಲ್ಲಿನ ಅಭಿವೃದ್ಧಿ ನೂರು ವಿವಿಧ ಮಾರ್ಗಗಳನ್ನು ಅನುಸರಿಸಿತು. ಆದ್ದರಿಂದ ಅದನ್ನು ನಾವು ಪ್ರತ್ಯೇಕವಾಗಿಯೇ ಪರಿಗಣಿಸೋಣ.

### (ಅ) ಕಲ್ಕತ್ತ

ಹೊಸ ವ್ಯವಸ್ಥೆ ಪರಿಣಮಿಸಿದ್ದುದರಿಂದ ಸಾರ್ವಜನಿಕ ನಿಯಂತ್ರಣದ ಮೇಲ್ವಿಚಾರಣೆಯನ್ನು ಶಾಂತಿ ಪಾಲರಿಗೇ ವಹಿಸಲಾಯಿತು. ಆದರೆ ಕಾರ್ಯಾಧಿಕಾರ ಸರ್ಕಾರದಿಂದ ನೇಮಕವಾದ ಅಧ್ಯಕ್ಷನಲ್ಲಿತ್ತು. ಈ ಅಧ್ಯಕ್ಷನನ್ನೇ ಪೋಲೀಸ್ ಕಮೀಷನರನ್ನಾಗಿಯೂ ಮಾಡಲಾಗಿತ್ತು. ಇಂತ ಬಲಿಷ್ಠ ಕಾರ್ಯಾಂಗದ ಅಧಿಕಾರಯ ನೇತೃತ್ವದಲ್ಲಿ ಮಹತ್ತರ ಸುಧಾರಣೆಗಳನ್ನು ಮಾಡಲಾಯಿತು. ಚರಂಡಿ ಹಾಗೂ ನೀರು ಸರಬರಾಜಿನ ಸೂಕ್ತ ವ್ಯವಸ್ಥೆಗೆ ಸರ್ ಸ್ಟೀವರ್ಟ್ ಹಾಗೂ ಬುನಾದಿ ಹಾಕಿದ.

ಆದರೆ ಈ ವ್ಯವಸ್ಥೆ ಅಷ್ಟೇನೂ ಉತ್ತಮವಾಗಿ ಕಾರ್ಯ ನಿರ್ವಹಿಸಲಿಲ್ಲ. ಕಾರ್ಯಾಗ ಹಾಗೂ ಬಹುಸಂಖ್ಯೆಯ ಶಾಂತಿಪಾಲಕ ನಡುವಣ ಸಂಬಂಧದ ಬಗ್ಗೆ ಸ್ಪಷ್ಟವಾದ ವ್ಯಾಖ್ಯಾಯಿರಲಿಲ್ಲ ಮತ್ತು ಇವೆರಡು ವರ್ಗಗಳ ನಡುವೆ ನಿರಂತರ ಘರ್ಷಣೇ ಇದ್ದೇ ಇತ್ತು. 1876 ರ ಒಂದು ಕಾಯ್ದೆಯ ಮೂಲಕ ಕಲ್ಕತ್ತಾದ ಕಾರ್ಪೋರೇಷನ್ ಪುನರ್ರಚನೆಗೊಂಡಿತು. ಅದರಲ್ಲಿ 72 ಮಂದಿ ಸದಸ್ಯರಿದ್ದರು. ಇವರ ಪೈಕಿ ಮೂರನೆ ಎರಡು ಭಾಗದ ಸದಸ್ಯರನ್ನು ತೆರಿಗೆದಾರರು ಚುನಾಯಿಸಬೇಕಿತ್ತು. ಚುನಾಯಿತ ಸದಸ್ಯರ ಸಂಖ್ಯೆಯನ್ನು 1882 ರಲ್ಲಿ ಐವತ್ತಕ್ಕೆ ಹೆಚ್ಚಿಸಲಾಯಿತು ಮತ್ತು ಪುರಸಭೆಯ ವ್ಯಾಪ್ತಿಯನ್ನು ನಗರದ ಹೊರವಲಯಗಳನ್ನು ಸೇರಿಸುವುದರ ಮೂಲಕ ವಿಸ್ತರಿಸಲಾಯಿತು.

ಕಲ್ಕತ್ತಾ ನಗರದ ಆಡಳಿತದಲ್ಲಿ ಸ್ಥಳೀಯ ಸರ್ಕಾರದ ತತ್ತ್ವಗಳ ಪುರೋಗಾಮಿ ಅಭಿವೃದ್ಧಿಯನ್ನು ಲಾರ್ಡ್ ಕರ್ಜನ್ ಹಠತ್ತಾಗಿ ತಡೆಹಿಡಿದನು. 1899 ರಲ್ಲಿ ಅಂಗೀಕರಿಸಲಾದ ಒಂದು ಕಾಯ್ದೆಯಿಂದ ತೆರಿಗೆದಾರರಿಂದ ನೇರವಾಗಿ ಚುನಾಯಿತರಾಗುತ್ತಿದ್ದ ಸದಸ್ಯರ ಸಂಖ್ಯೆಯನ್ನು ಒಟ್ಟಿನ ಸಂಖ್ಯೆಯ ಅರ್ಧಕ್ಕಿಳಿಸಲಾಯಿತು ಮತ್ತು ಸರ್ಕಾರದಿಂದ ನಾಮಕರಣಗೊಂಡ ಅಧ್ಯಕ್ಷನಿಗೆ ಭಾರೀ ಪ್ರಮಾಣದಲ್ಲಿ ಸ್ವತಂತ್ರ ಅಧಿಕಾರಗಳನ್ನು ನೀಡಲಾಯಿತು. ನಿಗಧೀಕರಣದ ದರವನ್ನು ಮತ್ತು ಸಾಮಾನ್ಯ ನೀತಿ ನಿಯಮಗಳನ್ನು ಮಾತ್ರ ಕಾರ್ಪೋರೇಷನ್ ನಿರ್ಧರಿಸಬಹುದಿತ್ತು. ಆಡಳಿತ ವಿಷಯದಲ್ಲಿ ಅಧ್ಯಕ್ಷನ ಮೇಲಿದ್ದ ಏಕೈಕ ನಿಯಂತ್ರಣ ಹನ್ನೆರಡು ಜನರ ಒಂದು ಸಾಮಾನ್ಯ ಸಮಿತಿಯಾಗಿತ್ತು. ಇವರ ಪೈಕಿ ನಾಲ್ಕರನ್ನು ಚುನಾಯಿತ ಕಮೀಷನರುಗಳು ಆಯ್ಕೆ ಮಾಡುತ್ತಿದ್ದರು, ನಾಲ್ಕರನ್ನು ಇತರ ಕಮೀಷನರುಗಳು ಹಾಗೂ ನಾಲ್ಕರನ್ನು ಸರ್ಕಾರ ಆಯ್ಕೆ ಮಾಡುತ್ತಿತ್ತು.

ಕಾರ್ಪೊರೇಷನ್‌ನಲ್ಲಿ ಮಾತು ಹೆಚ್ಚು ಕೆಲಸ ಕಡಿಮೆ ಎಂಬದೇ ಜನತೆಯ ಅಧಿಕಾರವನ್ನು ಮೊಟಕುಗೊಳಿಸಲು ಆಧಾರವಾಗಿತ್ತು ಮತ್ತು ಅಗತ್ಯವಾದ ಪ್ರೇರಕ ಶಕ್ತಿಯನ್ನು ಕಾರ್ಪೊರೇಷನ್ ಅಥವಾ ಅದರ ವಿಶೇಷ ಸಮಿತಿಗಳ ನಿಯಂತ್ರಣದ ನಿರ್ಬಂಧಕ್ಕೊಳಗಾಗದ ಬಲಿಷ್ಟವಾದ ಒಂದು ಸ್ವತಂತ್ರ ಕಾರ್ಯಾಂಗ ಮಾತ್ರ ಪಡೆಯಬಹುದು ಎಂಬುದೂ ಆಧಾರವಾಗಿತ್ತು.

ಇದರ ಬಗ್ಗೆ ಸಾರ್ವಜನಿಕರು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು ಎಂಬುದನ್ನು ಹೇಳುವ ಅಗತ್ಯವೇನೂ ಇಲ್ಲ. ಬಂಗಾಳದ ವಿಧಾನ ಪರಿಷತ್ತಿನಲ್ಲಿ (Legislative Council) ಈ ವಿಷಯವನ್ನು ಚರ್ಚಿಸಿದಾಗ ಸುರೇಂದ್ರನಾಥ ಬ್ಯಾನರ್ಜಿ ಅತ್ಯಂತ ವಾಗ್ಮಯಿಂದ ಅದನ್ನು ಟೀಕಿಸಿದರು. ಮಸೂದೆಯನ್ನು ಕೊನೆಯ ಸಲ ವಿರೋಧಿಸುತ್ತಾ ಚರ್ಚೆಯ ಕೊನೆಯ ದಿನವಾದ ಸೆಪ್ಟೆಂಬರ್ 23 ರಂದು, ಆ ದಿನವನ್ನು "ಬಂಗಾಳದ ಭವಿಷ್ಯ ಜನಾಂಗ ಕಲ್ಕತ್ತಾ ನಗರದಲ್ಲಿ ಸ್ಥಳೀಯ ಸರ್ಕಾರಗಳ ನಿರ್ಮೂಲನಾ ದಿನ ಎಂದು ನೆನಪಿನಲ್ಲಿಡುವುದು" ಎಂದು ಘೋಷಿಸಿದರು.

ಈ ಕ್ರಮಕ್ಕೆ ವಿರೋಧ ವ್ಯಕ್ತಪಡಿಸುವ ಸಲುವಾಗಿ, ಸುರೇಂದ್ರನಾಥರೂ ಸೇರಿದಂತೆ ಕಾರ್ಪೊರೇಷನ್ನಿಗೆ 28 ಸದಸ್ಯರು ರಾಜೀನಾಮೆ ಸಲ್ಲಿಸಿದರು. ಆಶ್ಚರ್ಯಕರವಾದ ವಿಧಿಯೇ ಎಂಬಂತೆ ಇಪ್ಪತ್ನಾಲ್ಕು ವರ್ಷಗಳ ತರುವಾಯ ಮಂತ್ರಿಯಾಗಿ ಸುರೇಂದ್ರನಾಥರೇ ಈ ದೊಡ್ಡ ತಪ್ಪನ್ನು ತೊಡೆದು ಹಾಕಬೇಕಾಯಿತು.

***(ಆ) ಬೊಂಬಾಯಿ***

ಕಲ್ಕತ್ತಾದಂತೆಯೇ ಬೊಂಬಾಯಿನಲ್ಲಿಯೂ 1865 ರಲ್ಲಿ ಹಳೆಯ ಪದ್ಧತಿ ಮತ್ತೆ ಪುನರುಜ್ಜೀವನ ಪಡೆಯಿತು. ನಗರಾಡಳಿತ ಉದ್ದೇಶಕ್ಕಾಗಿ 500 ಜನ ಶಾಂತಿಪಾಲರಿಂದ ಕೂಡಿದ ಒಂದು ಅಂಗವಿತ್ತು. ಕಮೀಷನರ್ ಎಂದು ಕರೆಯಲಾಗುತ್ತಿದ್ದು ಹೆಚ್ಚಿನ ಸಂಬಳ ನಡೆಯುತ್ತಿದ್ದ ಅಧ್ಯಕ್ಷ ಹಾಗೂ ಸ್ವತಂತ್ರ ಅಧಿಕಾರವುಳ್ಳ ಲೆಕ್ಕ ನಿಯಂತ್ರಣಾಧಿಕಾರಿಯೂ ಇರುತ್ತಿದ್ದರು. ಈ ವ್ಯವಸ್ಥೆ ಉತ್ತಮವಾಗಿ ಕಾರ್ಯ ನಿರ್ವಹಿಸಲಿಲ್ಲ. ಪರಿಶೀಲನೆ ಅಥವಾ ಮಾರ್ಗದರ್ಶನ ಮಾಡಲು ಕಾರ್ಪೊರೇಷನ್ ತುಂಬಾ ದೊಡ್ಡದಾಗಿದ್ದುದರಿಂದ ಲೆಕ್ಕ ನಿಯಂತ್ರಣಾಧಿಕಾರಿ ಯಾವುದೇ ರೀತಿಯ ಪರಿಣಾಮಕಾರಿ ನಿಯಂತ್ರಣ ಬೀರಲಿಲ್ಲ.

1872 ರಲ್ಲಿ ಈ ವ್ಯವಸ್ಥೆ ಬದಲಾವಣೆಯಾಯಿತು. ಕಾರ್ಪೊರೇಷನ್ನಿನ ಸದಸ್ಯರ ಸಂಖ್ಯೆಯನ್ನು 64 ಕ್ಕೆ ಇಳಿಸಲಾಯಿತು. ಇವರ ಪೈಕಿ ಅರ್ಧದಷ್ಟು ಸದಸ್ಯರನ್ನು ತೆರಿಗೆದಾರರೂ, ನಾಲ್ಕನೆ ಒಂದು ಭಾಗವನ್ನು ರೆಸಿಡೆಂಟ್ ನ್ಯಾಯಾಧೀಶರು ಹಾಗೂ ಉಳಿದ ನಾಲ್ಕನೆ ಒಂದು ಭಾಗ ಸದಸ್ಯರನ್ನು ಸರ್ಕಾರವೂ ನಾಮಕರಣ ಮಾಡುತ್ತಿತ್ತು. ಮೊದಲಿನಂತೆಯೇ ಕಾರ್ಯಾಂಗದ ಅಧಿಕಾರವನ್ನು ಕಮೀಷನ್ನರಿಗೆ ವಹಿಸಲಾಯಿತು. ಆದರೆ ಲೆಕ್ಕಪತ್ರಗಳ ನಿಯಂತ್ರಣಾಧಿಕಾರಿಯ ಹುದ್ದೆಯನ್ನು ರದ್ದುಗೊಳಿಸಲಾಯಿತು. ಅದಕ್ಕೆ ಬದಲಾಗಿ ಲೆಕ್ಕ ಪತ್ರಗಳ ಸಾಪ್ತಾಹಿಕ ತನಿಖೆಯನ್ನು ಕಾರ್ಪೊರೇಷನ್ನಿಗೆ ಸ್ಥಾಯಿ ಸಮಿತಿಯೂ ಮತ್ತು ಲೆಕ್ಕಪತ್ರಗಳ ತನಿಖೆಯನ್ನು ವೇತನ ಪಡೆಯುವ ಉದ್ಯೋಗಸ್ಥ ಲೆಕ್ಕ ತನಿಖಾಧಿಕಾರಿಗಳೂ ಮಾಡಲು ಅವಕಾಶ ಮಾಡಿಕೊಡಲಾಯಿತು.

ಈ ವ್ಯವಸ್ಥೆ ಸುಮಾರಾಗಿ ಕಾರ್ಯ ನಿರ್ವಹಿಸಿತು ಮತ್ತು ಅಲ್ಪಸ್ವಲ್ಪ ಬದಲಾವಣೆಗಳೊಡನೆ ಹತ್ತೊಂಭತ್ತನೆ ಶತಮಾನದ ಕೊನೆಯವರೆಗೆ ಮುಂದುವರಿಯಿತು.

***(ಇ) ಮದ್ರಾಸ್***

ಮೂವರು ಕಮೀಷನರುಗಳು ಸರ್ಕಾರ ನಡೆಸುವ ಕ್ರಮ ಮದ್ರಾಸ್‌ನಲ್ಲಿ 1867 ರವರೆವಿಗೆ ಮುಂದುವರಿಯಿತು. ಆ ವರ್ಷ ಅಂಗೀಕರಿಸಲಾದ ಒಂದು ಕಾಯ್ದೆಯಿಂದ ನಗರವನ್ನು ಎಂಟು ವಾರ್ಡ್‌ಗಳಾಗಿ ವಿಭಾಗಿಸಿ ಸರ್ಕಾರ ಪ್ರತಿ ವಾರ್ಡಿಗೂ ನಾಲ್ವರು ಕಮೀಷನ್ನರುಗಳನ್ನು ನೇಮಕ ಮಾಡಿತು.

1878 ರಲ್ಲಿ ಕಾರ್ಪೊರೇಷನ್ ಸದಸ್ಯರ ಪೈಕಿ ಅರ್ಧದಷ್ಟನ್ನು ತೆರಿಗೆದಾರರು ಚುನಾಯಿಸುತ್ತಿದ್ದರು. ಆದರೆ ಅದರ ಅಧ್ಯಕ್ಷ ಹಾಗೂ ಇಬ್ಬರು ಉಪಾಧ್ಯಕ್ಷರನ್ನು ಸರ್ಕಾರ ನೇಮಕ ಮಾಡುತ್ತಿದ್ದು ಅವರು ವೇತನ ಪಡೆಯುವ ಅಧಿಕಾರಿಗಳಾಗಿದ್ದರು. 1884 ರಲ್ಲಿ ಚುನಾವಣಾ ತತ್ತ್ವವನ್ನು ಮತ್ತಷ್ಟು ವಿಸ್ತರಿಸಲಾಯಿತು ಮತ್ತು ಕಾರ್ಪೊರೇಷನ್ನಿನ ಮೂವತ್ತೆರಡು ಸದಸ್ಯರ ಪೈಕಿ ಇಪ್ಪತ್ನಾಲ್ಕು ಮಂದಿಯನ್ನು ತೆರಿಗೆದಾರರು ಚುನಾಯಿಸುತ್ತಿದ್ದರು.

ಲಾರ್ಡ್ ಕರ್ಜನ್ ವೈಸರಾಯಿ ಆಗಿದ್ದ ಅವಧಿಯಲ್ಲಿ ಇದಕ್ಕೆ ಪ್ರತಿಕ್ರಿಯೆ ಕಂಡು ಬಂದಿತು ಮತ್ತು ಮದ್ರಾಸ್ ಕಾರ್ಪೋರೇಷನನ್ನು 1899 ರ ಕಲ್ಕತ್ತಾ ಮುನಿಸಿಪಲ್ ಕಾಯ್ದೆಯ ಆಧಾರದ ಮೇಲೆಯೇ ಪುನರ್ರಚಿಸಲಾಯಿತು.

## 77.4 ಉಪಸಂಹಾರ

ಈ ರೀತಿಯಲ್ಲಿ ಹಲವಾರು ಪ್ರಯತ್ನಗಳ ತರುವಾಯ ಒಂದೇ ರೀತಿಯ ವಿಶಿಷ್ಟ ಗುಣಲಕ್ಷಣಗಳಿಂದ ಕೂಡಿದ್ದ ಮೂರು ಪ್ರೆಸಿಡೆನ್ಸಿ ನಗರಗಳಿಗೆ ಒಂದು ಸರ್ಕಾರದ ವ್ಯವಸ್ಥೆಯನ್ನು ರೂಪಿಸಲಾಯಿತು. ಅನುಗುಣವಾದ ಚುನಾಯಿತ ಸದಸ್ಯರಿಂದ ಕೂಡಿದ ಒಂದು ಬೃಹತ್ ಕಾರ್ಪೋರೇಷನ್, ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಸಾಕಷ್ಟು ಸೌಲಭ್ಯಗಳ ಮತ್ತು ನೈರ್ಮಲ್ಯ, ನೀರು ಸರಬರಾಜು ಇತ್ಯಾದಿ ಅಗತ್ಯ ಕರ್ತವ್ಯ ನಿರ್ವಹಣೆಗೆ ಶಾಸನ ಬದ್ಧ ಸೌಲಭ್ಯಗಳಿಂದ ಕೂಡಿದ, ಸರ್ಕಾರದಿಂದ ನೇಮಕವಾದ ಸತ್ತ್ವಶಾಲಿ ಸ್ವತಂತ್ರ ಕಾರ್ಯಾಂಗದ ಅಧಿಕಾರ ಇವೇ ಆ ವಿಶಿಷ್ಟ ಲಕ್ಷಣಗಳಾಗಿದ್ದವು. ಸಂಪೂರ್ಣ ನಿರ್ಲಕ್ಷ್ಯ ಅಥವಾ ದುರಾಡಳಿತದ ಪ್ರಕರಣಗಳಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸುವ ಸ್ವಾತಂತ್ರ್ಯ ಪಡೆದಿದ್ದಿತು.

## 77.5 ಮಾದರಿ ಪ್ರಶ್ನೆಗಳು

1. ಯುಟಿಲಿಟೇರಿಯನ್ಸ್ ಚಿಂತಕರು ಬ್ರಿಟಿಷ್ ಆಡಳಿತವನ್ನು ಸಮರ್ಥಿಸಿಕೊಳ್ಳಲು ಕಾನೂನು ರಕ್ಷಣೆ ತರ್ಕದ ಮಂಡನೆಯನ್ನು ಪರಿಶೀಲಿಸಿ?
2. ಬ್ರಿಟಿಷ್ ಭಾರತದ ಕೇಂದ್ರೀಕೃತ ಆಡಳಿತದ ಸ್ವರೂಪ ಮತ್ತು ವ್ಯಾಪ್ತಿಯನ್ನು ಚರ್ಚಿಸಿ.

## 77.6 ಪರಾಮರ್ಶನ ಗ್ರಂಥಗಳು


1. Edward Thornton : "History of the British Empire in India, 6 Vol (1841)
2. Peter Auber : "Rize and Progress of the British Power in India (1837)



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

## ಟಿಪ್ಪಣಿಗಳು

# ಘಟಕ - 78

## ಹಣಕಾಸು, ಸಾರ್ವಜನಿಕ ಸೇವೆ ಮತ್ತು ಸೇನಾ ಆಡಳಿತ 1858-1909

78.0 ಪ್ರಸ್ತಾವನೆ

78.1 ಹಣಕಾಸು

78.2 ಆರ್ಥಿಕ ನೀತಿಗಳು

78.3 ಸಾರ್ವಜನಿಕ ಸೇವೆ

78.4 ಸೇನಾ ಆಡಳಿತ

78.5 ಉಪಸಂಹಾರ

78.6 ಮಾದರಿ ಪ್ರಶ್ನೆಗಳು

78.7 ಪರಾಮರ್ಶನ ಕೃತಿಗಳು

## 78.0 ಪ್ರಸ್ತಾವನೆ

1858 ರ ಕಾಯ್ದೆಯಿಂದಾಗಿ ಭಾರತದ ಹಣಕಾಸಿನ ವ್ಯವಸ್ಥೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಜಾರಿಗೆ ತರಲಾಯಿತು. ಕೌನ್ಸಿಲ್‌ನಲ್ಲಿನ ಸೆಕ್ರೆಟರಿ ಆಫ್ ಸ್ಟೇಟ್ ಹಣಕಾಸಿನ ಆಡಳಿತದ ಮೇಲೆ ಪರಮೋಚ್ಛ ನಿಯಂತ್ರಣ ಪಡೆದಿದ್ದನು. ಭಾರತ ಸರ್ಕಾರಕ್ಕಿದ್ದ ಕೆಲವೊಂದು ಸ್ವನಿರ್ಣಯಿತ ಅಧಿಕಾರಿಗಳಿಗೊಳಪಟ್ಟು ಇಂಡಿಯಾ ಕೌನ್ಸಿಲ್‌ನ ಅಂಗೀಕಾರವಿಲ್ಲದೆ ಭಾರತದ ಆದಾಯಗಳ ಯಾವ ವೆಚ್ಚವನ್ನು ಕೈಗೊಳ್ಳುವಂತಿರಲಿಲ್ಲ. ಆ ಷರತ್ತಿಗೊಳಪಟ್ಟು ಭಾರತ ಸರ್ಕಾರ ಭಾರತದಲ್ಲಿ ಹಣಕಾಸಿನ ಆಡಳಿತದ ವಿಷಯದಲ್ಲಿ ಪರಮಾಧಿಕಾರವನ್ನು ಬಳಸಿತು. ಗವರ್ನರ್ ಜನರಲ್-ಇನ್-ಕೌನ್ಸಿಲ್‌ನ ಮಂಜುರಾತಿಯಿಲ್ಲದೆ ವೆಚ್ಚ ಮಾಡಲು ಪ್ರಾಂತೀಯ ಸರ್ಕಾರಗಳಿಗೆ ಅಧಿಕಾರವಿರಲಿಲ್ಲ. ಆಯವ್ಯಯದ ವ್ಯವಸ್ಥೆಯನ್ನು 1860 ರಲ್ಲಿ ಜಾರಿಗೆ ತರಲಾಯಿತು. ಇದರಲ್ಲಿ ವಿವಿಧ ಭಾಗಗಳಿಗೆ ಮಾಡಲಾದ ಆದಾಯದ ವಿನಿಯೋಗವನ್ನು ಸ್ಥಳೀಯ ಅಧಿಕಾರ ವರ್ಗದವರು ಸಂಪೂರ್ಣವಾಗಿ ಅನುಸರಿಸಬೇಕಿತ್ತು.

ಇಷ್ಟು ದೊಡ್ಡ ನ್ಯೂನತೆಗಳು 1871 ಹಾಗೂ 1877 ರ ನಡುವೆ ಸ್ವಲ್ಪ ಮಟ್ಟಿನ ವಿಕೇಂದ್ರೀಕರಣಕ್ಕೆ ಕಾರಣವಾಯಿತು. ಹೊಸ ಯೋಜನೆಯನ್ವಯ ಅಂಚೆ ಕಛೇರಿ ಮತ್ತು ರೈಲ್ವೆ ಮುಂತಾದ ಕೇಂದ್ರೀಕೃತ ವಿಷಯಗಳನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಹಿಸಿಕೊಂಡಿತು. ಉಪ್ಪು, ಅಫೀಮು ಮತ್ತು ಸೇವಾ ಶುಲ್ಕ ಮುಂತಾದ ಕಂದಾಯ ಮೂಲಗಳ ಜೊತೆಗೆ ಈ ಇಲಾಖೆಗಳ ಆದಾಯವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರ ಉಳಿಸಿಕೊಂಡಿತು. ಭೂಗಂದಾಯ, ಅಬ್ಕಾರಿ, ಸ್ಟ್ಯಾಂಪ್ಸ್, ಅರಣ್ಯ ಹಾಗೂ ನೋಂದಣಿ ಮುಂತಾದ ಇತರ ಮೂಲಗಳ ಆದಾಯ ಪ್ರಾಂತೀಯ ಹಾಗೂ ಕೇಂದ್ರ ಸರ್ಕಾರಗಳ ನಡುವೆ ವಿಭಾಗವಾಗಬೇಕಿತ್ತು. ಪ್ರತಿಯೊಂದರ ಭಾಗ ಆಯಾ ಪ್ರಾಂತದ ಅಗತ್ಯತೆಗಳಿಗನುಗುಣವಾಗಿ ನಿರ್ಧರಿತವಾಗುತ್ತಿತ್ತು. ಇವೆರಡರ ನಡುವಣ ಭಾಗಗಳ ಈ ಹಂಚಿಕೆ ಆಗಿಂದಾಗ್ಗೆ ಪರಿಶೀಲನೆ ಮತ್ತು ಪುನರ್ ಹೊಂದಾಣಿಕೆಗಳಿಗೆ ಒಳಪಟ್ಟಿತ್ತು. ಈ ವ್ಯವಸ್ಥೆಯನ್ವಯ ಪ್ರಾಂತೀಯ ಸರ್ಕಾರಗಳು ತಮ್ಮ ವೆಚ್ಚವನ್ನು ತಮಗೆ ನಿಗಧಿ ಪಡಿಸಿರುವ ಆದಾಯಗಳಿಂದ ನಿರ್ವಹಿಸಿಕೊಳ್ಳಬೇಕಾಗಿತ್ತು. ಈ ರೀತಿಯಲ್ಲಿ ಅವು ಸಂಗ್ರಹಿಸಿದ ಆದಾಯವನ್ನು ವೆಚ್ಚ ಮಾಡುವುದರಲ್ಲಿ ಹೆಚ್ಚು ಸ್ವಾತಂತ್ರ್ಯ ಹಾಗೂ ಅವಕಾಶಗಳನ್ನು ಪಡೆದಿದ್ದುದು ಮಾತ್ರವೇ ಅಲ್ಲದೆ ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳುವುದರಲ್ಲೂ ಹಾಗೂ ತಮ್ಮ ವೆಚ್ಚಗಳನ್ನು ಮಿತಗೊಳಿಸಿಕೊಳ್ಳುವುದರಲ್ಲೂ ಆಸಕ್ತಿ ಹೊಂದಿದ್ದವು.

## 78.1 ಹಣಕಾಸು

ಮೇಲೆ ವಿವರಿಸಲಾದ ಆದಾಯದ ವಿವಿಧ ಬಾಬುಗಳ ಪೈಕಿ ಬ್ರಿಟಿಷ್ ಭಾರತದ ವಿವಿದ ಭಾಗಗಳಲ್ಲಿ ಭೂಕಂದಾಯ ಹಾಗೂ ಉಪ್ಪು ಮತ್ತು ಅಫೀಮಿನ ಸರ್ಕಾರದ ಏಕಸ್ವಾಮ್ಯದಿಂದ ಬರುತ್ತಿದ್ದ ಆದಾಯಗಳ ಬಗ್ಗೆ ಈಗಾಗಲೇ ವಿವರಿಸಲಾಗಿದೆ. ಸ್ಟ್ಯಾಂಪ್ ರೆವಿನ್ಯೂ ವಾಸ್ತವವಾಗಿ ನ್ಯಾಯಾಂಗ ವಿಚಾರಣೆಗಳು ಹಾಗೂ ವಾಣಿಜ್ಯ ವ್ಯವಹಾರಗಳ ಮೇಲೆ ವಿಧಿಸಲಾಗುತ್ತಿದ್ದ ಪ್ರತ್ಯಕ್ಷ ತೆರಿಗೆಯಾಗಿತ್ತು. ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡುವುದರ ಅಥವಾ ವ್ಯಾಪಾರಕ್ಕೆ ಪಾಲುದಾರರಾಗುವವರ ಕಾಗದ ಪತ್ರಗಳು ನ್ಯಾಯಬದ್ಧವಾಗಬೇಕಾದಲ್ಲಿ ಅವುಗಳಲ್ಲಿ ನಿಗಧಿ ಮಾಡಿದ ಮೌಲ್ಯದ ಸ್ಟ್ಯಾಂಪುಗಳನ್ನು ಲಗತ್ತಿಸಬೇಕು.

ಸುಂಕದ ಬಾಬ್ತಿನ ಆದಾಯವನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲಾದ ಮತ್ತು ಭಾರತದಿಂದ ರಫ್ತು ಮಾಡಲಾದ ವಿವಿಧ ವಸ್ತುಗಳ ಕ್ರಮಾನುಸಾರ ತೆರಿಗೆ ವಿಧಿಸುವುದರ ಮೂಲಕ ಪಡೆಯಲಾಗುತ್ತಿತ್ತು. ಈ ಸುಂಕದ ದರ ಆಗಿಂದಾಗ್ಗೆ ವ್ಯತ್ಯಾಸವಾಗುತ್ತಿತ್ತು. ಹತ್ತಿ ಸರಕುಗಳ ಮೇಲಿನ ಆಮದು ಸುಂಕ ಅತ್ಯಂತ ಮುಖ್ಯವಾದುದಾಗಿತ್ತು. ಆಮದಿನಿಂದ ಬರುತ್ತಿದ್ದ ಒಟ್ಟು ಆದಾಯದ ಮೂರನೆ ಎರಡು ಭಾಗ ಆದಾಯ ಇದೊಂದೇ ಬಾಬಿನಿಂದ ಲಭ್ಯವಾಗಿತ್ತು. ಆದರೆ ಭಾರತದಲ್ಲಿ ಹತ್ತಿ ಗಿರಣಿಗಳನ್ನು ಸ್ಥಾಪಿಸುತ್ತಿದ್ದಂತೆಯೇ ಇಂಗ್ಲೆಂಡಿನಲ್ಲಿ ತಯಾರಾದ ಹತ್ತಿ ಸರಕುಗಳ ಆಮದಿನ ಮೇಲೆ ಈ ಸುಂಕ ತೀವ್ರ ಪರಿಣಾಮ ಬೀರಿತು. ಇಂಗ್ಲಿಷ್ ಉತ್ಪಾದಕರ ಇಂಗ್ಲೆಂಡಿನ ಸರ್ಕಾರದ ಮೇಲೆ ಒತ್ತಡ ಬೀರಲಾರಂಭಿಸಿದರು. ಇಂಗ್ಲೆಂಡಿನಲ್ಲಿ ಆಗ ಆಚರಣೆಯಲ್ಲಿದ್ದ ಮುಕ್ತ ವ್ಯಾಪಾರ ನೀತಿಯನ್ನು ಭಾರತ ಸರ್ಕಾರ ಅನುಸರಿಸಬೇಕಾಯಿತು. ತತ್ಪರಿಣಾಮವಾಗಿ ಆಂತರಿಕ ತೆರಿಗೆಗಳನ್ನು ವಿಧಿಸಲಾಗುತ್ತಿದ್ದ ಮದ್ಯ ಹಾಗೂ ಉಪ್ಪು ಮುಂತಾದ ಸರಕುಗಳನ್ನು ಬಿಟ್ಟು ಉಳಿದ ಎಲ್ಲ ವಸ್ತುಗಳ ಮೇಲಣ ಆಮದು ಸುಂಕಗಳನ್ನು 1882 ರಲ್ಲಿ ರದ್ದು ಮಾಡಲಾಯಿತು.

ಸುಂಕವನ್ನು ರದ್ದು ಪಡಿಸಿದುದರಿಂದ ಆದ ನಷ್ಟವನ್ನು ಇತರ ಮೂಲಗಳಿಂದ ಸರಿದೂಗಿಸುವ ಕಾರ್ಯ ಅತ್ಯಂತ ಕಷ್ಟಕರವಾಗಿ ಪರಿಣಮಿಸಿತು. ಭಾರತದಲ್ಲಿ ಕರೆನ್ಸಿಯ ಮಟ್ಟವಾಗಿದ್ದ ಬೆಳ್ಳಿಯ ಬೆಲೆಯಲ್ಲಿನ ತೀವ್ರ ಕುಸಿತ, ವಾಯುವ್ಯದಲ್ಲಿ ರಷ್ಯಾದವರ ಭೀತಿಕಾರಕ

ಪ್ರವೃತ್ತಿ ಮತ್ತು ಬರ್ಮಾದಲ್ಲಿನ ಯುದ್ಧಗಳಿಂದಾದ ಸೇನಾ ವೆಚ್ಚ ಹಾಗೂ ಕ್ಷಾಮ ವಿಮಾನಿಧಿ ಸೌಲಭ್ಯಗಳು - ಇವೆಲ್ಲವೂ ಭಾರತದ ಹಣಕಾಸಿನ ಸ್ಥಿತಿಗತಿಗಳ ಮೇಲೆ ತೀವ್ರ ಭಾರವನ್ನು ಹೇರಿದವು. ಆಯವ್ಯಯ ಸರಿದೂಗಿಸುವ ಪ್ರಯತ್ನದಲ್ಲಿ ಭಾರತ ಸರ್ಕಾರ 1894 ರಲ್ಲಿ ಶೇಕಡಾ 5 ರ ದರದಲ್ಲಿ ಕ್ರಮಾನುಸಾರ ಆಮದು ಸುಂಕ ವಿಧಿಸಲೇಬೇಕಾಯಿತು. ಹತ್ತಿ ಸರಕುಗಳ ಇಂಗ್ಲಿಷ್ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸುವ ದೃಷ್ಟಿಯಿಂದ ಭಾರತೀಯ ಹತ್ತಿ ಗಿರಣಿಗಳಲ್ಲಿ ತಯಾರಾದ ಹತ್ತಿ ಸರಕುಗಳ ಮೇಲೆ ಸಮಾನ ಸುಂಕ ವಿಧಿಸಲಾಯಿತು.

ಹತ್ತಿ ಸರಕುಗಳ ಮೇಲೆ ಆಮದು ಸುಂಕ ರದ್ದು ಪಡಿಸಿದುದು ಮತ್ತು ಆಮದು ಸುಂಕವನ್ನು ಪುನರ್ ವಿಧಿಸಿದಾಗ ಭಾರತದಲ್ಲಿ ತಯರಾದ ಹತ್ತಿ ಸರಕುಗಳ ಮೇಲೆ ಸುಂಕ ವಿಧಿಸಿದುದು. ಈ ಕ್ರಮದ ವಿರುದ್ಧ ವೈಸರಾಯ್‌ನ ಕೌನ್ಸಿಲ್ ಸಹ ವಿರೋಧಿಸುವ ಮಟ್ಟಿಗೆ ಭಾರತದ ಹಿತಾಸಕ್ತಿಗಳಿಗೆ ಅದು ಅನ್ಯಾಯಕಾರಿಯಾದುದಾಗಿತ್ತು. ಈ ಎರಡೂ ಸಂದರ್ಭಗಳಲ್ಲಿ ಬ್ರಿಟಿಷ್ ಕ್ಯಾಬಿನೆಟ್ ಮನಸ್ಸಿಲ್ಲದ ಭಾರತ ಸರ್ಕಾರದ ಮೇಲೆ ತನ್ನ ಅಭಿಪ್ರಾಯಗಳನ್ನು ಬಲವಾಗಿ ಹೇರಿತು. ತೆರಿಗೆಯನ್ನು ಪುನರ್ ವಿಧಿಸುವ ಸಂದರ್ಭದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಹೆನ್ರಿ ಫೌಲರ್ ತನ್ನ ಸಾಮಾನ್ಯ ನೀತಿಯನ್ನು ಈ ರೀತಿ ವಿವರಿಸಿದ.

"ಬ್ರಿಟಿಷ್ ಕ್ಯಾಬಿನೆಟ್‌ನ ನಿರ್ದೇಶನದಲ್ಲಿ ಒಂದು ಹೊಸ ನೀತಿಯನ್ನು ಆಚರಣೆಗೆ ತಂದಾಗ ಅದು ಭಾರತ ಸರ್ಕಾರದ ಪ್ರತಿಯೊಬ್ಬ ಸದಸ್ಯನೂ ಆ ನೀತಿ ಹೇಗಿರಬೇಕೆಂದು ಯಾವ ರೀತಿ ಕಾರ್ಯಾಚರಣೆಗೆ ತರಬಹುದೆಂಬುದನ್ನು ಗಮನಿಸುವುದು ಪ್ರತಿಯೊಬ್ಬ ಸದಸ್ಯನ ಕರ್ತವ್ಯವಾಗುತ್ತದೆ".

ಈವರೆಗೆ ವಿವರಿಸಲಾದ ಆದಾಯದ ಬಾಬುಗಳ ಜೊತೆಗೆ ಆದಾಯ ತೆರಿಗೆ ಉತ್ತಮವಾದ ಆದಾಯ ಮೂಲವಾಗಿ ಪರಿಣಮಿಸಿತು. ದಂಗೆಯಿಂದ ತಲೆದೋರಿದ ಆರ್ಥಿಕ ಒತ್ತಡಗಳನ್ನು ಸರಿದೂಗಿಸುವ ಸಲುವಾಗಿ ಇದನ್ನು 1860 ರಲ್ಲಿ ತಾತ್ಕಾಲಿಕವಾಗಿ ಮದ್ದು ಆಚರಣೆಗೆ ತರಲಾಯಿತು. ಮೊದಲಿಗೆ 500 ರೂಗಳು ಅಥವಾ ಅದಕ್ಕಿಂತ ವರಮಾನದ ಮೇಲೆ ಶೇಕಡಾ 4 ರಂತೆಯೂ 200 - 500 ರೂಗಳ ನಡುವಣ ಎಲ್ಲ ಆದಾಯಗಳಿಗೂ ಶೇ. 2 ರಂತೆಯೂ ಸಾಮಾನ್ಯ ತೆರಿಗೆಯನ್ನು ವಿಧಿಸಲಾಯಿತು. 1865 ರಲ್ಲಿ ಇದನ್ನು ರದ್ದುಗೊಳಿಸಲಾಯಿತು. ಅಂತಿಮವಾಗಿ ಆರ್ಥಿಕ ತೊಂದರೆಗಳಿಂದ ಕೃಷಿಯೊಂದನ್ನುಳಿದು ಇತರ ಎಲ್ಲ ಮೂಲಗಳಿಂದ ಗಳಿಸುವ ಆದಾಯದ ಮೇಲೆ ಸರ್ಕಾರ 1886 ರಲ್ಲಿ ತೆರಿಗೆ ವಿಧಿಸಲೇಬೇಕಾಯಿತು. ಕಾಲದಿಂದ ಕಾಲಕ್ಕೆ ತೆರಿಗೆ ದರಗಳು ವ್ಯತ್ಯಾಸಗೊಳ್ಳುತ್ತಿದ್ದರೂ ತೆರಿಗೆ ವಿಧಿಸುವುದು ಮುಂದುವರಿದೇ ಇದೆ.

ಕರೆನ್ಸಿಯ ಪ್ರಶ್ನೆಯ ಬಗ್ಗೆ ಕೆಲವೊಂದು ಅಂಶಗಳನ್ನು ಇಲ್ಲಿ ಸೂಚಿಸಬಹುದು. ಮೊಗಲರ ಆಳ್ವಿಕೆಯ ಮೊದಲ ಭಾಗದಲ್ಲಿ ದಕ್ಷಿಣ ಭಾರತದಲ್ಲಿ ಚಿನ್ನವೇ ಪ್ರಧಾನ ಕರೆನ್ಸಿಯಾಗಿತ್ತಾದರೂ ಚಿನ್ನದ ಮೊಹರಗಳು ಹಾಗೂ ಬೆಳ್ಳಿ ರೂಪಾಯಿಗಳೆರಡೂ ಉತ್ತರ ಭಾರತದಲ್ಲಿ ಚಲಾವಣೆಯಲ್ಲಿದ್ದವು. ಮೊಗಲ್ ಸಾಮ್ರಾಜ್ಯದ ವಿಘಟನೆಯ ತರುವಾಯ ಉದ್ಭವಿಸಿದ ಹಲವಾರು ಸ್ವತಂತ್ರ ರಾಜ್ಯಗಳ ಏಳಿಗೆ ನಾಣ್ಯಗಳ ಬಹುರೂಪ ಚಲಾವಣೆಗೆ ಕಾರಣವಾಯಿತು. ನಾಣ್ಯಗಳನ್ನು ಹೊರಡಿಸುವುದು ಸಾರ್ವಭೌಮತ್ವದ ವಿಶೇಷ ಲಾಂಛನವೆಂದು ಪರಿಗಣಿಸುತ್ತಿದ್ದುದೇ ಇದಕ್ಕೆ ಕಾರಣವಾಗಿತ್ತು. ಚಿನ್ನ ಹಾಗೂ ಬೆಳ್ಳಿ ಎರಡೂ ಸೇರಿ 994 ವಿವಿಧ ರೀತಿಯ ನಾಣ್ಯಗಳು ಭಾರತದಲ್ಲಿ ಚಲಾವಣೆಯಲ್ಲಿದ್ದವು ಎಂದು ಅಂದಾಜು ಮಾಡಲಾಗಿದೆ.

ಇದರಿಂದಾಗಿ ವಾಣಿಜ್ಯ ಹಾಗೂ ವ್ಯವಹಾರಗಳಿಗೆ ಆದ ಅನಾನುಕೂಲಗಳು ಸ್ಪಷ್ಟವಾಗಿಯೇ ಇವೆ ಮತ್ತು ನಿರ್ದಿಷ್ಟ ಶಾಸನ ಪ್ರಮಾಣ, ತೂಕ ಮತ್ತು ಚೊಕ್ಕತೆಗಳಿಂದ ಕೂಡಿದ ಚಿನ್ನ ಹಾಗೂ ಬೆಳ್ಳಿ ನಾಣ್ಯಗಳಲ್ಲಿ ಹೊರಡಿಸುವುದರ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಲು ಈಸ್ಟ್ ಇಂಡಿಯಾ ಕಂಪೆನಿ ಪ್ರಯತ್ನಿಸಿತು. ಆದರೆ ಈ ಎರಡು ಲೋಹಗಳ ಮೌಲ್ಯದಲ್ಲಿನ ವ್ಯತ್ಯಾಸಗಳಿಂದ, ಈ ಎರಡು ಭಿನ್ನ ರೀತಿಯ ನಾಣ್ಯಗಳ ನಡುವೆ ಶಾನಸ ಪ್ರಮಾಣವನ್ನು ಉಳಿಸಿಕೊಂಡು ಬರುವುದು ಅತಿ ಹೆಚ್ಚು ಕಷ್ಟವಾಗಿತ್ತು. ಕ್ರಮೇಣ ತೀರ ಕಡಿಮೆ ಬೆಲೆಕಟ್ಟಿದುದರಿಂದ ಚಿನ್ನದ ಮೊಹರು ಚಲಾವಣೆಯಿಂದ ದೂರವಾಗುತ್ತಾ ಬಂತು. 1818 ರಲ್ಲಿ 180 ಗ್ರೈನ್‌ಗಳ (12 ರಷ್ಟು ಚೊಕ್ಕ) ಚಿನ್ನದ ರೂಪಾಯಿಯನ್ನು ಮದ್ರಾಸ್‌ನ ಚಿನ್ನದ ಪಗೋಡಕ್ಕೆ ಬದಲು ತರಲಾಯಿತು ಮತ್ತು 1835 ರಲ್ಲಿ ಪ್ರಸಕ್ತರೂಪ ಹಾಗೂ ಆಕಾರದ, ಆದರೆ 1818 ರಷ್ಟೇ ತೂಕ ಹಾಗೂ ಚೊಕ್ಕತೆಯುಳ್ಳ ರೂಪಾಯಿಯನ್ನು ಭಾರತದ ಬ್ರಿಟಿಷ್ ಪ್ರಾಂತಗಳಲ್ಲೆಲ್ಲಾ ಶಾಸನ ಸಮ್ಮತವಾದ ಹಣವೆಂದು ಅಂಗೀಕರಿಸಲಾಯಿತು. ಸರ್ಕಾರದ ಟಂಕ ಸಾಲೆಗಳು ಸಾರ್ವಜನಿಕರಿಗಾಗಿ ಈ ರೂಪಾಯಿಯನ್ನು ಸಾಕಷ್ಟು ಟಂಕಿಸಿದವು. ಬಿಲಿಯನ್‌ನ ಮೌಲ್ಯ ಅದರ ವಿಧಿಬದ್ಧ ಮೌಲ್ಯಕ್ಕೆ ಸಮವಾಗಿತ್ತು.

1841 ರಲ್ಲಿ ಚಿನ್ನದ ನಾಣ್ಯಗಳನ್ನು ಮತ್ತೆ ಚಲಾವಣೆಗೆ ತರುವ ಪ್ರಯತ್ನ ನಡೆಯಿತು ಮತ್ತು ಒಂದು ಮೊಹರಿಗೆ ಹದಿನೈದು ರೂಪಾಯಿಗಳ ದರದಲ್ಲಿ ಚಿನ್ನದ ಮೊಹರುಗಳನ್ನು ಸಾರ್ವಜನಿಕ ನೀತಿಗಾಗಿ ಅಂಗೀಕರಿಸಲಾಯಿತು. ಆದರೆ 1848-49 ರಲ್ಲಿ ಆಸ್ಟ್ರೇಲಿಯಾ ಹಾಗೂ ಕ್ಯಾಲಿಫೋರ್ನಿಯಾಗಳಲ್ಲಿ ಈ ಲೋಹಾನ್ವೇಷಣೆಯಿಂದ ಚಿನ್ನದ ಬೆಲೆ ಕುಸಿಯಿತು. ಲಾರ್ಡ್‌ಡಾಲ್ ಹೌಸಿ ಈ ಪ್ರಯೋಗವನ್ನು 1841 ರಲ್ಲಿ ಖಚಿತವಾಗಿ ರದ್ದುಗೊಳಿಸಿದ. ಈ ರೀತಿ ಚಿನ್ನ ಮತ್ತು ವಿನಿಮಯ ಮಾಧ್ಯಮವನ್ನಾಗಿ ಜಾರಿಗೆ ತರುವುದನ್ನು ಕೈಬಿಡಲಾಯಿತು. ಇದರಿಂದ ಹಣದ ಅಭಾವವುಂಟಾಗಿ ವ್ಯಾಪಾರಕ್ಕೆ ತೀವ್ರ ತೊಂದರೆಯಾಯಿತು. ಬೆಳ್ಳಿಯ ಬದಲು ಚಿನ್ನದ ಕರೆನ್ಸಿಯನ್ನು ಜಾರಿಗೆ ತರಲು ಹಲವಾರು ಸಲಹೆಗಳು ಸೂಚಿತವಾದರೂ, ಯಾವುದು ಕಾರ್ಯ ರೂಪಕ್ಕೆ ಬರಲಿಲ್ಲ.

1874 ರಿಂದ ಈ ಸಮಸ್ಯೆ ಮತ್ತಷ್ಟು ತೀವ್ರಗೊಂಡಿತು. ಹೆಚ್ಚಿನ ಯೂರೋಪಿಯನ್ ರಾಷ್ಟ್ರಗಳು ಸ್ವರ್ಣ-ಮಾನವನ್ನು ಅಳವಡಿಸಿಕೊಂಡುದು ಮತ್ತು ಬೆಳ್ಳಿಯ ತಯಾರಿಕೆಯಲ್ಲಿನ ಹೆಚ್ಚಳ - ಇವು ಚಿನ್ನಕ್ಕೆ ಸಂಬಂಧಿಸಿದಂತೆ ಬೆಳ್ಳಿಯ ಮೌಲ್ಯ ಕುಸಿಯುವಂತೆ ಮಾಡಿದವು. ಹಾಗಾಗಿ 1871 ರಲ್ಲಿ ಇಂಗ್ಲೀಷ್ ಹಣದ ಎರಡು ಷಿಲ್ಲಿಂಗ್‌ಗಳಿಗೆ ಸಮನಾಗಿದ್ದ ಒಂದು ರೂಪಾಯಿಯ ಮೌಲ್ಯ 1892 ರಲ್ಲಿ 1 ಷಿ. ೨. ಪೆನ್ನಿಗಳಿಗೆ ಇಳಿಯಿತು. ಸ್ವರ್ಣ ಕರೆನ್ಸಿ ಹೊಂದಿದ್ದ ಉದ್ದೇಶಗಳೊಂದಿಗೆ ಭಾರತದ ವಿಶೇಷ ವಾಣಿಜ್ಯದ ದೃಷ್ಟಿಯಿಂದ ಪರಿಸ್ಥಿತಿ ನಿರಾಶದಾಯಕವಾಗಿತ್ತು. ಭಾರತದಲ್ಲಿ ಚಿನ್ನದ ಹಣವನ್ನು ಆಚರಣೆಗೆ ತರಲು ಭಾರತ ಸರ್ಕಾರ 1878 ರಲ್ಲಿ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಶಿಫಾರಸ್ಸು ಮಾಡಿತಾದರೂ ಸೆಕ್ರೆಟರಿ ಆಫ್ ಸ್ಟೇಟ್ ಈ ಶಿಫಾರಸ್ಸನ್ನು ತಳ್ಳಿ ಹಾಕಿದನು. ಹರ್ಷಲ್ ಸಮಿತಿಯ ಶಿಫಾರಸಿನಂತೆ ಕರೆನ್ಸಿಯಲ್ಲಿ ಈ ಕೆಳಗೆ ಕಂಡ ಪ್ರಮುಖ ಬದಲಾವಣೆಗಳನ್ನು ಸರ್ಕಾರ 1893 ರಲ್ಲಿ ಜಾರಿಗೆ ತಂದಿತು.

1. ಸಾರ್ವಜನಿಕರಿಗಾಗಿ ಚಿನ್ನ ಹಾಗೂ ಬೆಳ್ಳಿಯ ನಾಣ್ಯಗಳನ್ನು ಧಾರಾಳವಾಗಿ ಟೀಕಿಸುತ್ತಿದ್ದ ಭಾರತದ ಟಂಕ ಸಾಲೆಗಳನ್ನು ಮುಚ್ಚಲಾಯಿತು.

2. ಟಂಕ ಸಾಲೆಗಳಲ್ಲಿ ಚಿನ್ನವನ್ನು, ರೂಪಾಯಿಗೆ ವಿನಿಮಯವಾಗಿ ರೂಪಾಯಿಯೊಂದಕ್ಕೆ 1ಷಿ. 4 ಪೆನ್ನಿಗಳ ಪ್ರಮಾಣದಲ್ಲಿ ಸ್ವೀಕರಿಸಲಾಯಿತು.

3. ಸಾರ್ವಜನಿಕ ಸಾಲ ತೀರಿಕೆಗಾಗಿ ಸವರನ್ ಒಂದಕ್ಕೆ 15 ರೂಗಳ ದರದಲ್ಲಿ ಸವರನ್‌ಗಳನ್ನು ಸ್ವೀಕರಿಸಲಾಯಿತು.

4. ಚಿನ್ನದ ನಾಣ್ಯಗಳು ಅಥವಾ ಬುಲಿಯನ್‌ಗಳಿಗೆ ಅದೇ ದರದಲ್ಲಿ ವಿನಿಮಯಕ್ಕಾಗಿ ಕರೆನ್ಸಿ ನೋಟುಗಳ ನೀಡಿಕೆ.

ಈ ಕ್ರಮಗಳಿಂದಾಗಿ ಚಿನ್ನವನ್ನು ಶಾಸನ ಸಮ್ಮತವಾದ ಹಣವನ್ನಾಗಿ ಮಾಡದಿದ್ದರೂ ಅದು ಮೌಲ್ಯಮಾಪನವಾಯಿತು ಮತ್ತು ರೂಪಾಯಿ ವಿನಿಮಯ ಮೌಲ್ಯ ಬೆಳ್ಳಿಯ ವಾಸ್ತವ ಮೌಲ್ಯದೊಡನೆ ಸರಿಹೊಂದುವುದು ತಪ್ಪಿತು.

ಹೊಸ ಕ್ರಮಗಳನ್ನು ಸ್ವರ್ಣ ಕರೆನ್ಸಿಯ ಅಂತಿಮ ಅಳವಡಿಕೆಯತ್ತ ಪ್ರಪ್ರಥಮ ಹೆಜ್ಜೆಯೆಂದು ಪರಿಗಣಿಸಲಾಯಿತು. 1898 ರಲ್ಲಿ ಸರ್ ಹೆನ್ರಿ ಫೌಲ್‌ನ ನೇತೃತ್ವದಲ್ಲಿ ಮತ್ತೊಂದು ಸಮಿತಿ ನೇಮಕಗೊಂಡಿತು. 1899 ರಲ್ಲಿ ಅಂಗೀಕರಿಸಲಾದ ಅದರ ಶಿಫಾರಸುಗಳ ಪ್ರಕಾರ, ರೂಪಾಯಿಯೊಂದಕ್ಕೆ 1 ಷಿ, 4 ಪೆನ್ನಿ ದರದಲ್ಲಿ ಸವರನ್ ಹಾಗೂ ರೂಪಾಯಿಗಳೆರಡನ್ನೂ ಅನಿರ್ಬಂಧಿತ ನ್ಯಾಯಬದ್ಧ ಹಣವೆಂದು ಮಾಡಲಾಯಿತು ಮತ್ತು ಚಿನ್ನದ ನಾಣ್ಯಗಳ ಧಾರಾಳ ಟಂಕಿಸುವಿಕೆಗೆ ಮಾತ್ರ ಟಂಕ ಸಾಲೆಗಳನ್ನು ತೆರೆಯಲಾಯಿತು. ಸರ್ಕಾರಕ್ಕಾಗಿ ರೂಪಾಯಿಗಳ ನಾಣ್ಯಗೊಳಿಸುವಿಕೆಯಿಂದ ಒದಗಿ ಬರುವ ಲಾಭದಿಂದ 1900 ರಲ್ಲಿ ಒಂದು ಸುವರ್ಣ ಮಾನ ಸಂಗ್ರಹವನ್ನು ರಚಿಸಲಾಯಿತು.

ಆದರೆ ಇದು ಸಹ ಭಾರತದ ಕರೆನ್ಸಿಯ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಇಪ್ಪತ್ತನೆ ಶತಮಾನದಲ್ಲ ಇತರ ಬದಲಾವಣೆಗಳನ್ನು ಮಾಡಲಾಯಿತು ಮತ್ತು ಅದು ಇಂದಿಗೂ ಭಾರತದ ಅರ್ಥಶಾಸ್ತ್ರದಲ್ಲಿ ಅತ್ಯಂತ ವಿವಾದಾಸ್ಪದ ಪ್ರಶ್ನೆಗಳಲ್ಲಿ ಒಂದಾಗಿಯೇ ಉಳಿದಿದೆ.

## 78.2 ಆರ್ಥಿಕ ನೀತಿಗಳು

ಕಂಪನಿಯಿಂದ ಚಕ್ರವರ್ತಿಗೆ ಭಾರತ ಸರ್ಕಾರದ ವರ್ಗಾವಣೆ ಭಾರತ ಹಾಗೂ ಇಂಗ್ಲೆಂಡ್ ಸರ್ಕಾರಗಳ ನಡುವೆ ನಿಕಟ ಬಾಂಧವ್ಯತೆ ಸಂಬಂಧಿಸಿತ್ತು ಎಂಬ ಅಂಶವನ್ನು ನಾಮ ಈಗಾಗಲೇ ಗಮನಿಸಿದ್ದೇವೆ. ಕಾಲಕ್ರಮದಲ್ಲಿ, ತಾತ್ವಿಕವಾಗಿ ಹಾಗೂ ಕಾರ್ಯತಃ ಅದು

ಭಾರತೀಯ ನಿರ್ಧಾರವನ್ನು ಬ್ರಿಟಿಷ್ ಸರ್ಕಾರದ ಅಧೀನ ಅಂಗವೆಂಬಂತೆಯೇ ಗಮನಿಸಲಾರಂಭಿಸಿತು. ಸೆಕ್ರೆಟರಿ ಆಫ್ ಸ್ಟೇಟ್ ಸರ್ ಹೆನ್ರಿ ಫೌಲರ್ ಸ್ಪಷ್ಟವಾಗಿಯೇ ಈ ಅಭಿಪ್ರಾಯ ವ್ಯಕ್ತಪಡಿಸಿದ. "ಬ್ರಿಟಿಷ್ ಕ್ಯಾಬಿನೆಟ್‌ನ ನಿರ್ಣಯವನ್ನು ಭಾರತ ತನ್ನ ಹಿತಾಸಕ್ತಿಗಾಗಿ ಅಪಾಯಕಾರಿ ಎಂದು ಪರಿಗಣಿಸಿದಲ್ಲಿಯು ಅದನ್ನು ಸದಾ ಅದು ಅನುಸರಿಸಿಲೇ ಬೇಕು. "ವಿದೇಶ ನೀತಿಗೆ ಸಂಬಂಧಿಸಿದಂತೆ ಮತ್ತೊಬ್ಬ ಸೆಕ್ರೆಟರಿ ಆಫ್ ಸ್ಟೇಟ್ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದ. ನೀತಿ ನಿರೂಪಣೆ ಮತ್ತು ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ಬ್ರಿಟಿಷ್ ಕ್ಯಾಬಿನೆಟ್ ಬಹುಮಟ್ಟಿಗೆ ಬ್ರಿಟನ್ನಿನ ಹಿತಾಸಕ್ತಿಗಳಿಂದ ಮಾರ್ಗದರ್ಶನ ಪಡೆಯಬೇಕಿತ್ತು ಮತ್ತು ಸಾಮ್ರಾಜ್ಯದ ಹಿತಾಸಕ್ತಿಯ ದೃಷ್ಟಿಯಿಂದ ಭಾರತದ ಹಿತಾಸಕ್ತಿಗಳನ್ನು ಅನೇಕ ಸಲ ಬಲಿಗೊಡುತ್ತಿದ್ದುದೂ ಉಂಟು. ವ್ಯಾಪಾರ,ಉತ್ಪಾದನೆ, ಕರೆನ್ಸಿ ಮತ್ತು ವಿದೇಶಿ ನೀತಿ ಮುಂತಾದ ವಿಷಯಗಳಲ್ಲಿ ಸ್ವಲ್ಪಮಟ್ಟಿಗೆ ಮತ್ತು ಆಡಳಿತದ ಇತರ ಭಾಗಗಳಲ್ಲೂ ವಿಶೇಷವಾಗಿ ಈ ಅಂಶವನ್ನು ನಾವು ಕಾಣಬಹುದಾಗಿದೆ.

ಆದರೆ ನಿಸ್ಸಂದೇಹದ ದೋಷಣೆಗೆ ಪ್ರತಿಯಾಗಿ, ಇದೇ ಕಾರಣಗಳಿಂದ ಭಾರತಕ್ಕೆ ಆದ ಅನುಕೂಲಗಳನ್ನು ಸಹ ನಾವು ಗಮನಿಸಬೇಕು. ಬ್ರಿಟಿಷ್ ಸರ್ಕಾರದೊಡನೆ ನಿಕಟವಾದ ಹಾಗೂ ಸಮೀಪ ಸಂಬಂಧ ಭಾರತ ಸರ್ಕಾರದಲ್ಲಿ ಶ್ರೇಷ್ಠ ಆಡಳಿತ ಧ್ಯೇಯಗಳನ್ನು ಹಾಗೂ ನವೋತ್ಸಾಹವನ್ನು ತುಂಬುವುದರ ಮೂಲಕ ಭಾರತ ಸರ್ಕಾರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ಈ ನವೋತ್ಸಾಹ ಲಕ್ಷಣ ಹಾಗೂ ಶ್ರೇಷ್ಠ ಆಡಳಿತ ಧ್ಯೇಯಗಳು ಹತ್ತೊಂಭತ್ತನೆ ಶತಮಾನದಲ್ಲಿ ಏಷ್ಯಾಕ್ಕಿಂತ ಯುರೋಪಿನಲ್ಲಿ ವಿಶಿಷ್ಟವಾಗಿದ್ದವು. ಬ್ರಿಟಿಷ್ ಸರ್ಕಾರ ಉತ್ತಮವಾಗಿ ಭಾರತದಲ್ಲಿಯೂ ಅದೇ ಆಡಳಿತ ದಕ್ಷತೆಯ ಶ್ರೇಷ್ಠ ಮಟ್ಟವನ್ನು ತರಲು ಪ್ರಯತ್ನಿಸಿತು ಮತ್ತು ಪಾಶ್ಚಾತ್ಯರ ಜ್ಞಾನಪ್ರದ, ಉದಾರದೃಷ್ಟಿಯ ಮಾನವೀಯ ಉತ್ಸಾಹ ಭಾರತದಲ್ಲಿ ತನ್ನ ಪ್ರಭಾವವನ್ನು ಬೀರದಿರಲಿಲ್ಲ. ಭಾರತದಲ್ಲಿ ವಸ್ತು ಸಂಪನ್ಮೂಲಗಳನ್ನು ಅಧೀನಗೊಳಿಸಲು ಪಾಶ್ಚಾತ್ಯ ದೇಶಗಳ ವೈಜ್ಞಾನಿಕ ಅವಿಷ್ಕಾರಗಳನ್ನು ಶೀಘ್ರವಾಗಿ ಬಳಸಿಕೊಳ್ಳಲಾಯಿತು. ಒಟ್ಟಿನಲ್ಲಿ ಭಾರತದಲ್ಲಿನ ಅನಾದಿ ಕಾಲದ ಜಡ ಮಧ್ಯಯುಗದ ಸರ್ಕಾರದ ರೀತಿಯನ್ನು ಯುರೋಪಿಯನ್ ಆಧುನಿಕ ಪ್ರಗತಿಗಾಮಿ ಚೈತನ್ಯ ಪುನರ್ಯೋಜಿಸುವುದರಲ್ಲಿನ ಮಾಧ್ಯಮವಾಗಿ ಇಂಗ್ಲೆಂಡ್ ಕಾರ್ಯ ನಿರ್ವಹಿಸಿತು. ಭಾರತ ಸರ್ಕಾರವನ್ನು ಚಕ್ರವರ್ತಿ ವಹಿಸಿಕೊಳ್ಳುವ ಮುನ್ನವೇ ಈ ಪ್ರಕ್ರಿಯೆ ಆರಂಭವಾಗಿತ್ತು ಎಂಬುದು ನಿಸ್ಸಂದೇಹವಾದುದು. ಆದರೆ ಹತ್ತೊಂಭತ್ತನೆ ಶತಮಾನದ ದ್ವಿತೀಯಾರ್ಧದವರೆವಿಗೆ ಗಮನಾರ್ಹ ಪರಿಣಾಮಗಳಾಗಲೀ, ಬದಲಾವಣೆಗಳಾಗಲೀ ಕಂಡು ಬರಲಿಲ್ಲ. ಸರ್ಕಾರ ಕೈಗೊಂಡ ಕೆಲವು ಮಾದರಿ ಕ್ರಮಗಳನ್ನು ಪರಿಶೀಲಿಸುವುದರ ಮೂಲಕ ಈ ನವೋತ್ಸಾಹದ ಪ್ರಭಾವವನ್ನು ಗಮನಿಸಬಹುದಾಗಿದೆ.

ಮಾನವೀಯ ದೃಷ್ಟಿಯಿಂದ ನಿರ್ದೇಶಿತವಾಗಿದ ಕ್ರಮಗಳನ್ನು ನಾವು ಮೊದಲು ಗಮನಿಸೋಣ.

*(ಅ) ಮಾದಕ ಔಷಧಗಳ ಮೇಲೆ ನಿರ್ಬಂಧ*

ಭಾರತ ಹಾಗೂ ಇಂಗ್ಲೆಂಡ್‌ಗಳೆರಡರಲ್ಲಿಯೂ ಮಿತಪಾನದ ಆದರ್ಶದ ಬಗೆಗೆ ಸತತ ಪ್ರಚಾರ ನಡೆಯುತ್ತಿತ್ತು ಮತ್ತು ಭಾರತದಲ್ಲಿ ಅಫೀಮು, ಗಾಂಜಾ ಹಾಗೂ ಆಲ್ಕೋಹಾಲಿನ ಬಳಕೆಯ ಸಂಪೂರ್ಣ ನಿಷೇಧಕ್ಕಾಗಿ ಇಂಗ್ಲೀಷ್ ಸಾರ್ವಜನಿಕರ ಒಂದು ಭಾಗ ಒತ್ತಾಯಪಡಿಸುತ್ತಿತ್ತು. ಚೀನ ಹಾಗೂ ಮಲಕ್ಕ ಜಲಸಂಧಿಗಳಲ್ಲಿ ಅಫೀಮು ವ್ಯಾಪಾರದ ಏಕಸ್ವಾಮ್ಯದಿಂದ ಮತ್ತು ಭಾರತದಲ್ಲಿ ಅಫೀಮು, ಗಾಂಜಾ ಹಾಗೂ ಆಲ್ಕೋಹಾಲ್ ಮೇಲೆ ಅಬಾರಿಯಿಂದ ಭಾರತ ಸರ್ಕಾರ ಹೇರಳ ಲಾಭ ಗಳಿಸುತ್ತಿತ್ತು. ಆದರೂ ಸಾರ್ವಜನಾಭಿಪ್ರಾಯಕ್ಕೆ ಅದು ಸ್ವಲ್ಪ ಮಟ್ಟಿಗೆ ಮಣಿಯಲೇ ಬೇಕಾಯಿತು. ಈ ವಿಷಯ ಪರಿಶೀಲನೆಗಾಗಿ 1894 ರಲ್ಲಿ ಒಂದು ರಾಯಲ್ ಆಯೋಗ ನೇಮಕಗೊಂಡಿತು. ಅಫೀಮು ವ್ಯಾಪಾರ ಕ್ರಮೇಣ ಕಡಿಮೆಯಾಗಿ, ಅಂತಿಮವಾಗಿ ನಿಲ್ಲುವ ಬಗ್ಗೆ 1907 ರಲ್ಲಿ ಚೀನಾದೊಡನೆ ಒಂದು ಒಪ್ಪಂದ ಮಾಡಿಕೊಳ್ಳಲಾಯಿತು. ಈ ಮೂರು ಮೂದಕ ಔಷಧಗಳ ಸ್ಥಳೀಯ ಉಪಯೋಗಕ್ಕೆ ಸಂಬಂಧಿಸಿದಂತೆ ಇವುಗಳನ್ನು ಸಂಪೂರ್ಣವಾಗಿ ವಿರೋಧಿಸುವ ಕ್ರಮವನ್ನು ಸರ್ಕಾರ ಒಪ್ಪಲಿಲ್ಲ. ಆದರೆ ಈ ವಸ್ತುಗಳ ಚಿಲ್ಲರೆ ವ್ಯಾಪಾರಕ್ಕೆ ಪರವಾನಗಿ ತರುವ ಮೂಲಕ ಮತ್ತು ಇವುಗಳ ಮೇಲೆ ದುಬಾರಿ ಸುಂಕ ವಿಧಿಸುವ ಮೂಲಕ ಇವುಗಳ ಬಳಕೆಯನ್ನು ನಿಯಂತ್ರಿಸುವ, ನಿರ್ಬಂಧಿಸುವ ನಿಶ್ಚಯ ನೀತಿಯನ್ನು ಅನುಸರಿಸಿತು. "ಮಧ್ಯ ಸೇವಿಸದೇ ಇರುವವನ ಚಪಲ ಕಡಿಮೆ ಮಾಡಿ, ಮಧ್ಯಪಾನ ಮಾಡುವವರಲ್ಲಿ ಅತಿಪಾನವನ್ನು ತಡೆಗಟ್ಟುವುದು: ಈ ನೀತಿಯನ್ನು ಪ್ರತಿಬಂಧಿಸಲು ತೆರಿಗೆಯ ಮೇಲೆ ಯಾವ ರೀತಿಯದೇ ಆದ ವಿನಾಯಿತಿಯನ್ನು ತೋರದಿರುವುದೇ ತನ್ನ ನಿರ್ಧಾರಿತ ನೀತಿ ಆಗಿದೆ" ಎಂದು ಬಹಿರಂಗವಾಗಿ ಅದು ತನ್ನ ನೀತಿಯ ಬಗ್ಗೆ ಘೋಷಿಸಿತು.

## (ಆ) ಕಾರ್ಖಾನೆ ಶಾಸನ

ಕಾರ್ಖಾನೆ ಕಾರ್ಮಿಕರ ಕೆಲಸದ ಅವಧಿಯನ್ನು ಕಡಿಮೆ ಮಾಡಿ ಅವರಿಗೆ ಇತರ ಜೀವನ ಸೌಕರ್ಯಗಳನ್ನು ಒದಗಿಸುವುದರ ಬಗ್ಗೆ ಇಂಗ್ಲೆಂಡಿನಲ್ಲಿ ನಿರಂತರ ಹೋರಾಟ ನಡೆಯುತ್ತಿದ್ದ ಅಂಶ ಇಂಗ್ಲೀಷ್ ಇತಿಹಾಸದ ವಿದ್ಯಾರ್ಥಿಗಳೆಲ್ಲರಿಗೂ ಚಿರಪರಿಚಿತವಾಗಿದೆ. ಗಿರಣಿ ಮಾಲೀಕರ ಗಣನೀಯ ಪ್ರಮಾಣದ ಅರ್ಥ ನಷ್ಟದಿಂದಲಾದರೂ ತಮ್ಮ ಕಾರ್ಮಿಕ ವರ್ಗದ ಏಳ್ಗೆಗಾಗಿ ಬ್ರಿಟಿಷ್ ಸರ್ಕಾರ ಅನೇಕ ಶಾಸನಗಳ ಮೂಲಕ ಒತ್ತಾಯಪಡಿಸಿತು. ಅದೇ ಉತ್ಸಾಹದಲ್ಲಿ ಭಾರತದಲ್ಲಿನ ಕಾರ್ಖಾನೆಗಳ ಶ್ರಮಜೀವಿಗಳ ಏಳ್ಗೆಗಾಗಿ ಭಾರತ ಸರ್ಕಾರವೂ ಹಲವಾರು ಕಾಯ್ದೆಗಳನ್ನು ಅಂಗೀಕರಿಸಿತು. 1881 ಮತ್ತು 1891 ರಲ್ಲಿ ಅಂಗೀಕರಿಸಲಾದ ಕಾಯ್ದೆಗಳಿಂದ ಸ್ತ್ರೀಯರು ಹಾಗೂ ಮಕ್ಕಳ ಕೆಲಸದ ವೇಳೆಯನ್ನು ಮಿತಿಗೊಳಿಸಲಾಯಿತು. ಕೆಲಸಗಾರರಿಗೆ ಉತ್ತಮ ಕುಡಿಯುವ ನೀರಿನ ಸರಬರಾಜಿಗೆ ಮತ್ತು ಕಾರ್ಖಾನೆಗಳಲ್ಲಿ ಸಾಕಷ್ಟು ಗಾಳಿ, ಬೆಳಕು ಹಾಗೂ ನೈರ್ಮಲ್ಯಕ್ಕಾಗಿ ನಿಯಮಗಳನ್ನು ಮಾಡಲು ಸ್ಥಳೀಯ ಸರ್ಕಾರಗಳಿಗೆ ಅಧಿಕಾರ ನೀಡಲಾಯಿತು.

## (ಇ) ಕ್ಷಾಮ ಪರಿಹಾರ

ನಾವು ಪರಿಶೀಲಿಸುತ್ತಿರುವ ಈ ಅವಧಿಯಲ್ಲಿನ ಭಾರತೀಯ ಆಡಳಿತದ ಅತ್ಯಂತ ಮಹತ್ವಪೂರ್ಣ ಸಾಧನೆ ಕ್ಷಾಮಪರಿಹಾರದ ಬಗ್ಗೆ ಒಂದು ಸುವ್ಯವಸ್ಥೆ ಕ್ರಮ ರೂಪಿಸಿದುದಾಗಿದೆ. ಭಾರತದಂಥ ಕೃಷಿ ಪ್ರಧಾನ ರಾಷ್ಟ್ರದಲ್ಲಿ ಕ್ಷಾಮ ಅನಾದಿ ಕಾಲದಿಂದ ಜನತೆಗೆ ತುಂಬಾ ಉಪದ್ರವಕಾರಿಯಾದುದಾಗಿರಬೇಕು. ಭಾರತಕ್ಕೆ ಕ್ಷಾಮದ ತೊಂದರೆಯೇ ಇಲ್ಲ ಎಂಬ ಮೆಗಾಸ್ಥಾನೀಸನ ಹೇಳಿಕೆಯನ್ನು ಸತ್ಯವೆಂದು ಪರಿಗಣಿಸುವಂತಿಲ್ಲ. ಆದರೆ ಕ್ಷಾಮದ ಪ್ರಭಾವ ವ್ಯಾಪಕ ಪ್ರದೇಶಗಳಿಗೆ ವಿಸ್ತರಿತವಾಗದೆ ಕೇವಲ ಸಣ್ಣಪುಟ್ಟ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿತ್ತು ಎಂಬ ಅಂಶ ಗ್ರೀಕ್ ಲೇಖಕನನ್ನು ತಪ್ಪು ದಾರಿಗೆ ಸೆಳೆದಿರಬೇಕು. ಜನಸಂಖ್ಯೆಯಲ್ಲಿನ ಹೆಚ್ಚಳದೊಡನೆ ಮತ್ತು ಕೈಗಾರಿಕಾ ಚಟುವಟಿಕೆಗಳಲ್ಲಿನ ಕ್ಷೀಣತೆಯಿಂದ ನಿಯತಕಾಲಿಕ ಕ್ಷಾಮಗಳು ಹೆಚ್ಚು ಭೀಕರವಾಗಿ ಪರಿಣಮಿಸಿದವು. ಬ್ರಿಟಿಷ್ ಯುಗದ ಆರಂಭದವರೆವಿಗೆ ಇಂಥ ಕ್ಷಾಮಗಳಿಂದ ಆಗಿರಬಹುದಾದ ವಿಧ್ವಾಂಸಕತನದ ಬಗ್ಗೆ ಯಾವ ನಿರ್ದಿಷ್ಟ ಮಾಹಿತಿಯೂ ನಮಗೆ ದೊರೆಯುವುದಿಲ್ಲ. ಬಂಗಾಳದಲ್ಲಿ 1770 ರಲ್ಲಿ ಭೀಕರ ಕ್ಷಾಮ ತಲೆದೋರಿತು ಮತ್ತು ಸುಮಾರು ಮೂರನೆ ಒಂದು ಭಾಗ ಜನತೆ ಈ ಕ್ಷಾಮಕ್ಕೆ ಬಲಿಯಾಯಿತು. ಹತ್ತೊಂಭತ್ತನೆ ಶತಮಾನದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಕ್ಷಾಮಗಳ ತಲೆದೋರಿದವು. 1866-67 ರಲ್ಲಿ ಒಂದು ಭೀಕರ ಕ್ಷಾಮ ತಲೆದೋರಿತು. ಒರಿಸ್ಸಾದಲ್ಲಿ ಈ ಕ್ಷಾಮಕ್ಕೆ ಬಹುಮಂದಿ ತುತ್ತಾದರೂ ಮತ್ತು ಕಲ್ಕತ್ತಾದಿಂದ ಮದ್ರಾಸಿನವರೆವಿಗೆ ಪಶ್ಚಿಮ ಕರಾವಳಿಯ ಉದ್ದಕ್ಕೂ ಈ ಕ್ಷಾಮ ವ್ಯಾಪಿಸಿತು. ಮುಂದಿನ ಹತ್ತು ವರ್ಷಗಳಲ್ಲಿ 1868-69 ರಲ್ಲಿ ಸಂಯುಕ್ತ ಪ್ರಾಂತಗಳಲ್ಲಿ ಮತ್ತು ಪಂಜಾಬ್ ಹಾಗೂ ರಜಪುಟಾನಾ ಮತ್ತು 1873 ರಲ್ಲಿ ಉತ್ತರ ಬಿಹಾರ್‌ನಲ್ಲಿ ಸ್ಥಳೀಯ ಕ್ಷಾಮಗಳು ತಲೆದೋರಿದವು.

1876 ರಲ್ಲಿ ಮತ್ತೊಂದು ಭೀಕರ ಕ್ಷಾಮ ತಲೆದೋರಿತು. ಈ ಕ್ಷಾಮ ಸುಮಾರು ಎರಡು ವರ್ಷಗಳವರೆವಿಗೆ ತನ್ನ ಉಪದ್ರವ ಬೀರಿತು. ಮದ್ರಾಸ್, ಮೈಸೂರು, ಹೈದರಾಬಾದ್, ಬೊಂಬಾಯಿ ಮತ್ತು ಸಂಯುಕ್ತ ಪ್ರಾಂತಗಳ ವ್ಯಾಪಕ ಪ್ರದೇಶದಲ್ಲಿ ಕ್ಷಾಮ ವ್ಯಾಪಿಸಿತ್ತು. ಈ ಎಲ್ಲ ಸಂದರ್ಭಗಳಲ್ಲಿಯೂ ಜನತೆಗೆ ಪರಿಹಾರ ನೀಡಲು ಸರ್ಕಾರ ವಿವಿಧ ಕ್ರಮಗಳನ್ನು ಕೈಗೊಂಡಿತ್ತು. ಆದರೆ ಇವು ಯಾವುವು ಪರಿಣಾಮಕಾರಿಯಾದುದಾಗಿರಲಿಲ್ಲ. ನಿರ್ದಿಷ್ಟ ತತ್ತ್ವಗಳು ಮತ್ತು ಉತ್ತಮವಾಗಿ ಯೋಜಿಸಲಾದ ಕಾರ್ಯ ವಿಧಾನಗಳಿಲ್ಲದಿದ್ದುದರಿಂದ ಬೇರೆ ಬೇರೆ ಪ್ರದೇಶಗಳಲ್ಲಿ ನೀಡಲಾದ ಪರಿಹಾರ ಏಕರೂಪದ್ದಾಗಿರಲ್ಲಿಲ್ಲ ಅಥವಾ ಆದ ವೆಚ್ಚಕ್ಕೆ ಅನುಗುಣವಾಗಿಯೂ ಇರಲಿಲ್ಲ. ಉದಾಹರಣೆಗೆ ಮದ್ರಾಸ್‌ನಲ್ಲಾದ ವೆಚ್ಚದ ಅರ್ಧದಲ್ಲಿ ಬೊಂಬಾಯಿಯಲ್ಲಿ ಹೆಚ್ಚು ಜನರನ್ನು ಸಂರಕ್ಷಿಸಲಾಯಿತು. ಕ್ಷಾಮ ಪರಿಹಾರಕ್ಕೆ ಸಾರ್ವತ್ರಿಕ ತತ್ತ್ವಗಳನ್ನು ರೂಪಿಸುವುದು ಅಗತ್ಯ ಎಂದು ಗವರ್ನರ್ ಜನರಲ್ ಲಾರ್ಡ್ ಲಿಟ್ಟನ್ ಯೋಜಿಸಿದುದು ಸೂಕ್ತವಾಗಿತ್ತು ಮತ್ತು ಈ ಕಾರ್ಯಕ್ಕಾಗಿ ಜನರಲ್ ಸರ್ ರಿಚರ್ಡ್ ರಾಷ್ಟ್ರೀಯ ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಿದನು. ಈ ಆಯೋಗ 1880 ರಲ್ಲಿ ತನ್ನ ವರದಿ ಸಲ್ಲಿಸಿತು ಮತ್ತು ಇದರ ಶಿಫಾರಸ್ಸುಗಳ ಸರ್ಕಾರ 1883 ರಲ್ಲಿ ಘೋಷಿಸಿದ ಕ್ಷಾಮ ಸೂತ್ರಗಳು ಹಾಗೂ ತರುವಾಯದ ವರ್ಷಗಳಲ್ಲಿ ಸಿದ್ಧಪಡಿಸಲಾದ ವಿವಿಧ ಕಾಮಸೂತ್ರಗಳಿಗೂ ಆಧಾರವಾಗಿ ಪರಿಣಮಿಸಿದವು. ಕ್ಷಾಮ ಕಾಲದಲ್ಲಿ ಅಗತ್ಯವಿರುವವರಿಗೆ ಪರಿಹಾರ ನೀಡುವುದು ರಾಜ್ಯದ ಕರ್ತವ್ಯ ಎಂಬ ಮೂಲಭೂತ ತತ್ತ್ವದೊಡನೆ ಆಯೋಗ ತನ್ನ ಕಾರ್ಯವನ್ನಾರಂಭಿಸಿತು. ದೃಢಕಾಯರಿಗೆ ಕೆಲಸವನ್ನೊದಗಿಸಬೇಕು ಮತ್ತು ವೃದ್ಧರು ಹಾಗೂ ದುರ್ಬಲರಿಗೆ ಹಣ ಅಥವಾ ಆಹಾರ ವಿತರಣೆಯ ಮೂಲಕ ಪರಿಹಾರವನ್ನೊದಗಿಸಬೇಕು. ಮೊದಲನೆ ಯುದ್ಧಕ್ಕಾಗಿ ಕ್ಷಾಮ ತಲೆದೋರಿದ ತಕ್ಷಣ ಪರಿಹಾರ

ಕಾರ್ಯವನ್ನು ಆರಂಭಿಸುವಂತೆ ಪರಿಹಾರ ಕಾರ್ಯವನ್ನು ಪೂರ್ವಭಾವಿಯಾಗಿಯೇ ಯೋಜಿಸಿರಬೇಕಾಗಿತ್ತು. ಈ ಪರಿಹಾರ ಕಾರ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ಉದ್ಯೋಗವಕಾಶವನ್ನು ಒದಗಿಸುವಂತೆ ವ್ಯಾಪಕವಾದುದಾಗಿಯೂ ಶಾಶ್ವತವಾದ ಉಪಯೋಗಕರವಾದುದಾಗಿಯೂ ಇರಬೇಕಿದ್ದವು. ಹೊರಗಡೆ ಭಾರಿ ಪ್ರಮಾಣದ ಕೆಲಸಗಳಿಗೆ ಕಳುಹಿಸಲಾಗದಂತಹ ವ್ಯಕ್ತಿಗಳಿಗೆ ಉದ್ಯೋಗವಕಾಶ ಕಲ್ಪಿಸಲು ಹಳ್ಳಿಗಳಲ್ಲಿ ಕೆರೆಗಳನ್ನು ಕಟ್ಟುವುದು ಅಥವಾ ಏರಿ ಕಟ್ಟುವುದು ಮುಂತಾದ ಕೆಲಸಗಳನ್ನು ಆರಂಭಿಸಬಹುದು. ಹಸುವಿನಿಂದ ಜನರ ದೈಹಿಕ ಸಾಮರ್ಥ್ಯ ಕ್ಷೀಣಿಸುವ ಮೊದಲೇ ಅವರಿಗೆ ಉದ್ಯೋಗವಕಾಶ ಕಲ್ಪಿಸಬೇಕೆಂಬುದರ ಬಗ್ಗೆ ವಿಶೇಷವಾಗಿ ಗಮನ ನೀಡಲಾಗಿತ್ತು.

ಭೂಕಂದಾಯ ಹಾಗೂ ಇತರ ಕಂದಾಯಗಳಿಂದ ವಿನಾಯಿತಿ ನೀಡಿ ಹಾಗೂ ರದ್ದು ಪಡಿಸಿ ಬೀಜಗಳನ್ನು ಹಾಗೂ ಎತ್ತುಗಳನ್ನು ಕೊಳ್ಳಲು ಸಾಲ ನೀಡುವುದರ ಮೂಲಕ ಮತ್ತಷ್ಟು ಪರಿಹಾರ ಕ್ರಮ ಕೈಗೊಳ್ಳುವುದಾಗಿತ್ತು.

ಪರಿಹಾರವನ್ನೊದಗಿಸುವಲ್ಲಿ ದುರ್ವ್ಯಯ ಮತ್ತು ದುಂದು ವೆಚ್ಚವನ್ನು ತಡೆಗಟ್ಟಲು ವೆಚ್ಚದ ಅಧಿಕ ಭಾಗವನ್ನು ಸ್ಥಳೀಯ ಆಡಳಿತ ವರ್ಗ ವಹಿಸಿಕೊಳ್ಳಬೇಕು ಮತ್ತು ಕೇಂದ್ರ ಸರ್ಕಾರ ಪ್ರಾಂತದ ಸಂಪನ್ಮೂಲ ಸಾಮರ್ಥ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ತರುವಾಯ ಪ್ರಾಂತೀಯ ನಿಗಧಿಗಳನ್ನು ಮಾತ್ರ ಪೂರೈಸಬೇಕೆಂಬ ಅಭಿಪ್ರಾಯವನ್ನು ಆಯೋಗ ವ್ಯಕ್ತಪಡಿಸಿತು. ಸಂಬಂಧಪಟ್ಟ ಜನತೆಯ ಮನದಲ್ಲಿ ಜವಾಬ್ದಾರಿ ಭಾವನೆ ಮೂಡಿಸುವುದಕ್ಕಾಗಿ ಬಹುಪಾಲು ನೀಡಬೇಕಾಗಿದ್ದ ತೆರಿಗೆದಾರರ ಪ್ರತಿನಿಧಿಗಳ ಮೂಲಕ ಪರಿಹಾರ ಒದಗಿಸಬೆಕೆಂಬ ಶಿಫಾರಸ್ಸನ್ನು ಆಯೋಗ ಮುಂದಿಟ್ಟಿತು.

ಕ್ಷಾಮದಿಂದುಟಾಗುವ ಮುಂಗಡದ ವೆಚ್ಚವನ್ನು ಪೂರೈಸಲು ಪ್ರತಿವರ್ಷವೂ 15 ದಶಲಕ್ಷರೂಗಳನ್ನು "ಕ್ಷಾಮಪರಿಹಾರ ಮತ್ತು ವಿಮಾನಿಧಿ" ಸ್ಥಾಪಿಸಲು ಮೀಸಲಾಗಿಡಬೇಕಾಗಿತ್ತು.

ತರುವಾಯ ತಲೆದೋರಿದ ಸಣ್ಣಪುಟ್ಟ ಕ್ಷಾಮಗಳ ಕಾಲದಲ್ಲಿ ಮತ್ತು 1896 - 97 ಹಾಗೂ 1899-1900 ರಲ್ಲಿ ತಲೆದೋರಿದ ಭೀಕರ ಕ್ಷಾಮಗಳ ಕಾಲದಲ್ಲಿ ಕ್ಷಾಮ ಕಾನೂನು ತತ್ತ್ವಗಳನ್ನು ಪರಿಣಾಮಕಾರಿ ರೀತಿಯಲ್ಲಿ ಕಾರ್ಯರೂಪಕ್ಕೆ ತರಲಾಯಿತು. 1896-97 ರ ಕ್ಷಾಮ ಸಂಯುಕ್ತ ಪ್ರಾಂತಗಳು, ಬಿಹಾರ್, ಮಧ್ಯ ಪ್ರಾಂತಗಳು, ಮದ್ರಾಸ್ ಮತ್ತು ಬೊಂಬಾಯಿ ಪ್ರದೇಶಗಳಲ್ಲಿ ಭೀಕರವಾಗಿದ್ದು, ಇದು 1,25,000 ಚದರ ಮೈಲಿಗಳ ವಿಸ್ತೀರ್ಣದಲ್ಲಿನ 34 ದಶಲಕ್ಷ ಜನರನ್ನು ತೊಂದರೆಗೆ ಗುರಿಮಾಡಿತು. 1899-1900 ರಲ್ಲಿ ಬೊಂಬಾಯಿ, ಮಧ್ಯ ಪ್ರಾಂತ್ಯಗಳು, ಪಂಜಾಬ್, ರಜಪುಟಾನ, ಬರೋಡಾ ಮತ್ತು ಮಧ್ಯ ಭಾರತದ ಪ್ರಾಂತ್ಯಗಳೂ ವಿವಿಧ ಪ್ರಮಾಣದಲ್ಲಿ ಕ್ಷಾಮದ ಹಾವಳಿಗೆ ಗುರಿಯಾದವು. ವ್ಯಾಪಕ ಪ್ರಮಾಣದಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಯಿತು ಮತ್ತು ಲಾರ್ಡ್ ಕರ್ಜನ್ "ಇಡೀ ಭಾರತದ ನಾಲ್ಕನೆ ಒಂದು ಭಾಗ ಜನತೆ, ಕ್ಷಾಮ ಪರಿಹಾರ ಕಾರ್ಯಾಚರಣೆಗೆ ಒಂದಲ್ಲ ಒಂದು ರೀತಿಯಲ್ಲಿ ಒಳಪಟ್ಟಿತ್ತು" ಎಂದು ಅಂದಾಜು ಮಾಡಿದನು.

1896-97 ರ ಕ್ಷಾಮದ ಆನಂತರ ಸರ್ ಜೇಮ್ಸ್ ಲ್ಯಾಲೆಯ ನಾಯಕತ್ವದಲ್ಲಿ ಒಂದು ಆಯೋಗವನ್ನು ನೇಮಿಸಲಾಯಿತು. 1880 ರಲ್ಲಿ ಅಂಗೀಕರಿಸಲಾಗಿದ್ದ ತತ್ತ್ವಗಳನ್ನು ಅಂಗೀಕರಿಸಿ ಯೋಜನೆಯ ಕಾರ್ಯ ವಿವರಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾತ್ರ ಅದು ಸೂಚಿಸಿತು.

1900 ರಲ್ಲಿ ಸರ್ ಆಂಟೋನಿ ಮ್ಯಾಕ್ಡೊನೆಲ್‌ನ ಅಧ್ಯಕ್ಷತೆಯಲ್ಲಿ ಮತ್ತೊಂದು ಆಯೋಗ ನೇಮಕಗೊಂಡಿತು. ಇದು 1880 ರ ತತ್ತ್ವಗಳನ್ನೇ ಸಮ್ಮತಿಸಿತಾದರೂ ಭೂಗಂದಾಯ ಹಾಗೂ ತೆರಿಗೆಗಳನ್ನು ಮೊದಲೇ ರದ್ದು ಮಾಡುವುದರ ಮೂಲಕ ಮತ್ತು ಬೀಜ ಹಾಗೂ ಜಾನುವಾರುಗಳನ್ನು ಕೊಳ್ಳಲು ಮುಂಗಡ ನೀಡುವುದರ ಸೌಲಭ್ಯಗಳ ಬಗ್ಗೆ ವಿಶೇಷ ಗಮನ ನೀಡಬೇಕು ಎಂದು ಸೂಚಿಸಿತು. ವ್ಯಾಪಕ ಪ್ರಮಾಣದಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲಿರುವ ಪ್ರಾಂತದಲ್ಲಿ ಕ್ಷಾಮ ಪರಿಹಾರ ಕಾರ್ಯದ ಒಬ್ಬ ಕಮೀಷನರನನ್ನು ನೇಮಿಸಲು ಶಿಫಾರಸ್ಸು ಮಾಡಿತು. ಆಯೋಗ ಮಾಡಿದ ಇತರ ಹಲವು ಶಿಫಾರಸ್ಸುಗಳ ಪೈಕಿ ಮುಂದಿನವನ್ನು ಹೆಚ್ಚು ಪ್ರಮುಖವಾದವು ಎಂದು ಪರಿಗಣಿಸಬಹುದು.

(ಅ) ಪರಿಹಾರ ಕಾರ್ಯಗಳಲ್ಲಿ ಈವರೆಗೆ ಪ್ರಧಾನವಾಗಿದ್ದ ಬೃಹತ್ ಲೋಕೋಪಯೋಗಿ ಕಾರ್ಯಗಳಿಗಿಂತ ಕೆಲವು ವಿಶೇಷ ಪರಿಸ್ಥಿತಿಗಳಲ್ಲಿ ಗ್ರಾಮದಲ್ಲಿನ ಸ್ಥಳೀಯ ಕಾರ್ಯಗಳಿಗೆ ಆದ್ಯತೆ ನೀಡಬೇಕು.

(ಆ) ಪರಿಹಾರ ನೀಡುವ ಕಾರ್ಯದಲ್ಲಿ ಸರ್ಕಾರೇತರ ಸಹಾಯವನ್ನು ಬೃಹತ್ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕು.

(ಇ) ಕೃಷಿ ಬ್ಯಾಂಕುಗಳ ಸ್ಥಾಪನೆ ಮತ್ತು ಸುಧಾರಿತ ಕೃಷಿ ವಿಧಾನಗಳ ಅಳವಡಿಕೆ

(ಈ) ನೀರಾವರಿ ಕಾರ್ಯವನ್ನು ವ್ಯಾಪಕವಾಗಿ ವಿಸ್ತರಿಸುವುದು.

ಈ ಶಿಫಾರಸ್ಸುಗಳನ್ನು ಸರ್ಕಾರ ಅಂಗೀಕರಿಸಿ, ಕಾರ್ಯಾಚರಣೆಗೆ ತಂದಿತು. ಭಾರತದಲ್ಲಿ ಕ್ಷಾಮವನ್ನು ತಡೆಗಟ್ಟಲು ಮತ್ತು ಕ್ಷಾಮದ ವಿರುದ್ಧ ಹೋರಾಡಲು ಈ ರೀತಿಯಲ್ಲಿ ಉತ್ತಮ ಕ್ರಮವನ್ನೇ ಅನುಸರಿಸಲಾಯಿತು. ಕ್ಷಾಮ ಪೀಡಿತ ಪ್ರದೇಶಗಳಿಗೆ ದವಸ ದಾನ್ಯಗಳ ಸಾಗಣೆಗೆ ಮತ್ತು ಅತ್ಯಗತ್ಯವಾಗಿ ಪರಿಹಾರ ಬೇಕಾಗಿದ್ದ ವಿವಿಧ ಪ್ರದೇಶಗಳಲ್ಲಿ ನೆರವಿನ ವಿತರಣೆಯ ಕಾರ್ಯದಲ್ಲಿ ರೈಲುಮಾರ್ಗಗಳ ವಿಸ್ತರಣೆ ಕ್ಷಾಮ ಪರಿಹಾರದ ಮುಖ್ಯ ಸಾಧನವಾಗಿ ಪರಿಣಮಿಸಿತು ಎಂಬುದನ್ನು ಸೂಚಿಸಬಹುದು.

ವೈಜ್ಞಾನಿಕ ಅನ್ವೇಷಣೆಗಳ ನೆರವಿನಿಂದ ರಾಷ್ಟ್ರದ ಸಂಪನ್ಮೂಲಗಳನ್ನು ಸುಧಾರಿಸುವತ್ತ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ನಾವು ಈಗ ನಮ್ಮ ಗಮನ ಹರಿಸಬಹುದು.

*(ಈ) ರೈಲು ಮಾರ್ಗಗಳು*

ಇವುಗಳ ಪೈಕಿ ಅತ್ಯಂತ ಮುಖ್ಯವಾದುದು ರೈಲ್ವೆ ವ್ಯವಸ್ಥೆಯ ವಿಸ್ತರಣೆಯಾಗಿದೆ. ಡಾಲ್‌ಹೌಸಿ ಈ ವ್ಯವಸ್ಥೆಯನ್ನು ಮಿತ ಪ್ರಯಾಣದಲ್ಲಿ ಆರಂಭಿಸಿದಂದಿನಿಂದ ಸುಮಾರು 350 ದಶಲಕ್ಷ ಸ್ಟರ್ಲಿಂಗ್‌ಗಳ ಒಟ್ಟು ವೆಚ್ಚದಲ್ಲಿ 36,000 ಮೈಲುಗಳ ರೈಲು ಮಾರ್ಗ ನಿರ್ಮಾಣವಾಯಿತು. ಆರಂಭದಲ್ಲಿ ಈ ಉದ್ಯಮಗಳನ್ನು ಖಾಸಗೀ ಉದ್ಯಮಿಗಳಿಗೆ ವಹಿಸಲಾಗಿತ್ತು. ಖಾಸಗಿ ಕಂಪನಿಗಳ ನಿವ್ವಳ ಆದಾಯ ಶೇ. 5 ಕ್ಕಿಂತ ಕಡಿಮೆಯಾದಲ್ಲಿ ಆದಾಯದ ಕೊರತೆಯನ್ನು, ಭಾರತ ಸರ್ಕಾರ ಪೂರೈಸುವುದೆಂಬ ಭರವಸೆಯ ಮೇಲೆ ಈ ಕಾರ್ಯ ಕೈಗೊಳ್ಳಲು ಖಾಸಗೀ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲಾಯಿತು. ಇದಕ್ಕೆ ಪ್ರತಿಯಾಗಿ ಸರ್ಕಾರ ಕೆಲವು ಸೌಕರ್ಯಗಳನ್ನು ಪಡೆಯಿತು. ಕಂಪೆನಿಯ ಆದಾಯ, ಭರವಸೆ ನೀಡಲಾದ ಶೇ. 5ಕ್ಕೆ ಮೀರಿದಲ್ಲಿ ಹೆಚ್ಚಿನ ಲಾಭದಲ್ಲಿ ಅರ್ಧ ಭಾಗವನ್ನು ಸರ್ಕಾರ ಪಡೆಯುತ್ತಿತ್ತು. ಅಷ್ಟೇ ಅಲ್ಲದೆ, ರೈಲು ಮಾರ್ಗಗಳ ಆಡಳಿತದ ಮೇಲೆ ಸರ್ಕಾರ ನಿಯಂತ್ರಣ ಬೀರಬಹುದಾಗಿತ್ತು ಮತ್ತು ನಿಗಧಿಪಡಿಸಿದ ಅವಧಿಯ ತರುವಾಯ ಅವನ್ನು ಎಂದರೆ ಸಾಮಾನ್ಯವಾಗಿ 25 ವರ್ಷಗಳು ನಿಗಧಿ ಮಾಡಿದ ಬೆಲೆಗೆ ಸರ್ಕಾರ ಕೊಳ್ಳಬಹುದಾಗಿತ್ತು.

ಆರಂಭದಲ್ಲಿ ಮತ್ತು ವಿಶೇಷವಾಗಿ ಹತ್ತೊಂಭತ್ತನೆ ಶತಮಾನದ ಅಂತ್ಯದವರೆವಿಗೆ ಸರ್ಕಾರ ಅಪಾರ ನಷ್ಟವನ್ನು ಅನುಭವಿಸಿತು. ಮೊದಲಿನ ಕರಾರುಗಳ ಮುಕ್ತಾಯವಾದ ತರುವಾಯ ಕಂಪೆನಿಗಳಿಗೆ ಹೆಚ್ಚು ಅನುಕೂಲಕರ ಷರತ್ತುಗಳನ್ನು ವಿಧಿಸಿತ್ತು ಮತ್ತು ಕೆಲವು ಸಂದರ್ಭಗಳಲ್ಲಿ ಸರ್ಕಾರವೇ ರೈಲುಮಾರ್ಗಗಳನ್ನು ರಚಿಸಿ ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳಲಾರಂಭಿಸಿತು. ಕ್ರಮೇಣ ರೈಲ್ವೆ ಆದಾಯದ ಒಂದು ಮೂಲವಾಗಿ ಪರಿಣಮಿಸಿತು. ಆದರೆ ಕೇವಲ ಗಳಿಸಿದ ಆದಾಯದ ದೃಷ್ಟಿಯಿಂದ ಮಾತ್ರವೆ ರೈಲುಗಳ ಪ್ರಾಮುಖ್ಯವನ್ನು ಪರಿಗಣಿಸಲಾಗದು. ಸಾರಿಗೆ-ಸಂಪರ್ಕ ಅನುಕೂಲ ಕಲ್ಪಿಸಿದುದು ಮತ್ತು ವಾಣಿಜ್ಯ ಹಾಗೂ ಕೈಗಾರಿಕೆಗೆ ಅದು ನೀಡಿದ ಪ್ರಚೋದನೆಯಲ್ಲಿ ಅದರ ಪ್ರಾಮುಖ್ಯ ಅಡಗಿದೆ. ಈ ವಿಶಾಲ ದೇಶದ ದೂರದೂರದ ಪ್ರದೇಶಗಳ ನಡುವೆ ಸುಲಭ ಸಂಪರ್ಕ ಏರ್ಪಡಿಸುವುದರ ಮೂಲಕ ಭಾರತೀಯರಲ್ಲಿ ಏಕತೆಯ ಹಾಗೂ ರಾಷ್ಟ್ರೀಯತೆಯ ಭಾವನೆ ಮೂಡಿ ಬರುವಂತೆ ಇವು ಮೂಡಿವೆ.

*(ಉ) ಅರಣ್ಯಗಳು*

ಭಾರತದ ಅರಣ್ಯಗಳು ಯಾವಾಗಲೂ ಆದಾಯದ ಮೂಲವಾಗಿಯೇ ಇವೆ. ಆದರೆ ವಿಶೇಷವಾಗಿ ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿ ಅರಣ್ಯ ವಿಜ್ಞಾನದ ಅಭಿವೃದ್ಧಿ ಬೃಹತ್ ಪ್ರಮಾಣದ ಅರಣ್ಯಗಳು ಯಾವ ರೀತಿ ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ ಎಂಬ ಅಂಶವನ್ನು ಮನಗಾಣುವಂತೆ ಮಾಡಿದವು. ಅರಣ್ಯ ಸಂರಕ್ಷಣೆಯನ್ನು ಯಾವ ರೀತಿ ಮಾಡಬೇಕು ಮತ್ತು ಅದರಿಂದ ರಾಷ್ಟ್ರಕ್ಕೆ ಗರಿಷ್ಠ ಪ್ರಮಾಣದ ಆದಾಯವನ್ನೊದಗಿಸುವಂತೆ ಮಾಡಬಹುದು ಎಂಬುದನ್ನು ಅದು ತೋರಿಸಿತು. 1864 ರಲ್ಲಿ ಒಬ್ಬ ಜರ್ಮನ್ ತಜ್ಞನನ್ನು

ಭಾರತದಲ್ಲಿ ಅರಣ್ಯಗಳ ಇನ್ಸ್‌ಪೆಕ್ಟರ್ ಜನರಲ್ ಆಗಿ ನೇಮಕ ಮಾಡಿದಾಗ ಭಾರತೀಯ ಅರಣ್ಯಗಳ ಸಂರಕ್ಷಣೆಯಲ್ಲಿ ನವ ವೈಜ್ಞಾನಿಕ ವಿಧಾನ ಉಗಮಗೊಂಡಿತು. ಸರ್ಕಾರದ ಅರಣ್ಯಗಳ ರಕ್ಷಣೆ ಮತ್ತು ಉತ್ತಮ ನಿರ್ವಹಣೆಗಾಗಿ 1865 ರಲ್ಲಿ ಒಂದು ಶಾಸನ ಮಾಡಲಾಯಿತು ಮತ್ತು ಇದಾದ ತರುವಾಯ ಮುಂದಿನ ವರ್ಷಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಶಾಸನಗಳನ್ನು ಮಾಡಲಾಯಿತು. ಡೆಹ್ರಾಡೂನ್‌ನಲ್ಲಿ 1878 ರಲ್ಲಿ ಒಂದು ತರಬೇತಿ ಶಾಲೆಯನ್ನು ಸ್ಥಾಪಿಸಲಾಯಿತು. ಸುಮಾರು 500,000 ಚದರ ಮೈಲಿಗಳ ಪ್ರದೇಶ ಅರಣ್ಯ ಇಲಾಖೆ ಅಧೀನದಲ್ಲಿತ್ತು ಮತ್ತು ಭಾರತ ಅರಣ್ಯ ವಿಜ್ಞಾನದ ವೈಜ್ಞಾನಿಕ ಕ್ರಮದ ಸೌಲಭ್ಯವನ್ನು ಅನುಭವಿಸಿತು.

*(ಊ) ನೀರಾವರಿ*

ಭಾರತದಂತಹ ಕೃಷಿ ಪ್ರಧಾನ ರಾಷ್ಟ್ರದಲ್ಲಿ ನೀರಾವರಿ ಯಾವಾಗಲೂ ಆಡಳಿತದ ಒಂದು ಮುಖ್ಯ ಭಾಗವಾಗಿದೆ. ಹಿಂದೂ ಹಾಗೂ ಮುಸ್ಲಿಂ ಆಳ್ವಿಕೆಗಾರರಿಬ್ಬರೂ ಪ್ರಮುಖ ನೀರಾವರಿ ಯೋಜನೆಗಳನ್ನು ಕೈಗೊಂಡರು ಮತ್ತು ಮೊದಲ ಬ್ರಿಟಿಷ್ ಆಡಳಿತಗಾರರು ಇವರ ಮೇಲ್ಪಂಕ್ತಿಯನ್ನು ಅನುಸರಿಸಿದರು. ಆದರೆ ಲಾರ್ಡ್ ಲಾರೆನ್ಸ್ 1866 ರಲ್ಲಿ ಒಂದು ಹೊಸ ನೀತಿಯನ್ನು ಆರಂಭಿಸಿದ. ಸಾರ್ವಜನಿಕ ಸಾಲಗಳಿಂದ ವ್ಯಾಪಕ ನೀರಾವರಿ ಯೋಜನೆಗಳಿಗೆ ಅವನು ಆರ್ಥಿಕ ನೆರವನ್ನು ಒದಗಿಸಿದ. ಸರ್ ಹಿಂದ್ ಕಾಲುವೆ (1882), ಕೆಳಗಣ ಗಂಗಾ ಕಾಲುವೆ (1978) ಮತ್ತು ಆಗ್ರಾ ಕಾಲುವೆ (1874)-ಇವು ಈ ಹೊಸ ನೀತಿಯಿಂದ ದೊರೆತ ಫಲಗಳಾಗಿವೆ. ಉಪ ಕಾಲುವೆಗಳೂ ಸೇರಿದಂತೆ ಸರ್ ಹಿಂದ್ ಕಾಲುವೆಯ ಒಟ್ಟು ಉದ್ದ 3,700 ಮೈಲಿಗಳಿತ್ತು.

ಪಂಜಾಬಿನ 'ಕಾಲೋನಿ ಕಾಲುವೆ' ಗಳು ವಿಶಿಷ್ಟ ವರ್ಗದವಾಗಿವೆ. ಸರ್ಕಾರಕ್ಕೆ ಸೇರಿದ ವಿಶಾಲವಾದ ಬಂಜರು ಭೂಮಿಗಳನ್ನು ಸಾಗುವಳಿ ಯೋಗ್ಯವಾಗಿ ಮಾಡಲು ಅದನ್ನು ಯೋಜಿಸಲಾಗಿತ್ತು. 1890 ಮತ್ತು 1899 ರ ನಡುವೆ ರಚಿಸಲಾದ ಕೆಳಗಣ ಚೀನಾಬ್ ಕಾಲುವೆಯ ಒಟ್ಟು ಉದ್ದ 2,700 ಮೈಲುಗಳು. ಚೀನಾಬ್ ಹಾಗೂ ರಾವಿ ನದಿಗಳ ನಡುವೆ ಎರಡು ದಶಲಕ್ಷ ಎಕರೆ ಪ್ರದೇಶವನ್ನು ಇದು ನೀರಾವರಿಗೆ ಗುರಿ ಮಾಡಿದೆ. ಮೂಲತಃ ಜನರ ಹಿತವಾಗಿದ್ದು ಪಾಳು ಬಿದ್ದಿದ್ದ ಈ ಪ್ರದೇಶ 1901 ರಲ್ಲಿ 800,000 ಜನರಿಗೆ ಜೀವನಾಧಾರ ಪ್ರದೇಶವಾಗಿ ಪರಿಣಮಿಸಿತು. ಈ ಕಾಲುವೆ ಒಟ್ಟು ವ್ಯಯದ ಶೇ. 40 ಭಾಗದಷ್ಟು ವಾರ್ಷಿಕ ಆದಾಯವನ್ನು ನೀಡಿತು.

ನೀರಾವರಿ ಪ್ರತಿಯೊಂದು ಪ್ರಾಂತೀಯ ಆಡಳಿತದ ಪ್ರಮುಖ ಭಾಗವಾಗಿತ್ತು. ಸಾಗುವಳಿಗೆ ಒಳಗಾಗಿರುವ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸುವ ದೃಷ್ಟಿಯಿಂದ ಮತ್ತು ಪಾಳು ಭೂಮಿಗಳನ್ನು ಕೃಷಿ ಯೋಗ್ಯವನ್ನಾಗಿ ಮಾಡುವ ದೃಷ್ಟಿಯಿಂದ ಸಣ್ಣ ಹಾಗೂ ದೊಡ್ಡ ಯೋಜನೆಗಳೂ ಸೇರಿದಂತೆ ವಿವಿಧ ಯೋಜನೆಗಳನ್ನು ಆರಂಭಿಸಲಾಯಿತು.

## 78.3 ಸಾರ್ವಜನಿಕ ಸೇವೆ

ಭಾರತದ ಪ್ರತ್ಯಕ್ಷ ಆಡಳಿತವನ್ನು ಪರಮಾಧಿಕಾರ ವಹಿಸಿಕೊಂಡುದರಿಂದ ಭಾರತದ ಆಂತರಿಕ ಆಡಳಿತ ಕ್ರಮ ಹಾಗೂ ವಿವರಗಳೆರಡರ ದೃಷ್ಟಿಗಳಿಂಲೂ ಮಹತ್ತರ ಬದಲಾವಣೆಗಳಾದವು. ಕಂಪೆನಿಯ ಆಳ್ವಿಕೆಯ ಅವಧಿಯಲ್ಲಿ ಸಾಧ್ಯವಾಗಿದ್ದ ಪರಿಪೂರ್ಣತೆಯೊಂದಿಗೆ ಆಡಳಿತ ವ್ಯವಸ್ಥೆಯನ್ನು ಕ್ರಮೇಣ ರೂಪಿಸಲಾಯಿತು ಹಾಗೂ ಇಂಗ್ಲೆಂಡಿನ ರಾಜಕೀಯ ಆದರ್ಶಗಳು ಮತ್ತು ಆಡಳಿತ ತತ್ತ್ವಗಳನ್ನು ಬಹುಮಟ್ಟಿಗೆ ಭಾರತಕ್ಕೆ ಅನ್ವಯಿಸಲಾಯಿತು. ಭಾರತೀಯ ಆಡಳಿತ ಹೆಚ್ಚು ದಕ್ಷವೂ ಹೆಚ್ಚು ಕಾಲೋಚಿತವೂ ಆಗಿ ಪರಿಣಮಿಸಿತು. ಕಂಪನಿ ಮತ್ತು ಬೋರ್ಡ್ ಆಫ್ ಕಂಟ್ರೋಲ್‌ಗಳ ನಡುವೆ ಇದ್ದ ಹಿಂದಿನ ವೈರ ಹಾಗೂ ಈರ್ಷ್ಯೆ ಕಣ್ಮರೆಯಾಗಿ ಪಾರ್ಲಿಮೆಂಟಿನ ಏಕೀಕೃತ ನಿಯಂತ್ರಣ ಸ್ಥಾಪನೆಗೊಂಡಿತು.

ಆದರೆ ಇದು ದೋಷಯುಕ್ತವಾಗಿಯೇ ಇದ್ದಿತು. ಹಿಂದಿನ ಆಡಳಿತ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಚಾರ್ಟರುಗಳ ನಿಯತಕಾಲಿಕ ನವೀಕರಣ ಭಾರತದಲ್ಲಿನ ವ್ಯವಹಾರಗಳನ್ನು ಸಂಶಯಗ್ರಸ್ತತೆಯಿಂದ ಜಾಗರೂಕವಾಗಿ ಸೂಕ್ಷ್ಮವಾಗಿ ಪರಿಶೀಲಿಸಲು ಪಾರ್ಲಿಮೆಂಟಿಗೆ ಅವಕಾಶವನ್ನೊದಗಿಸಿತ್ತು. ಆದರೆ ಸೆಕ್ರೆಟರಿ ಆಫ್ ಸ್ಟೇಟ್ ಭಾರತದ ಸಂಪೂರ್ಣ ಮೇಲ್ವಿಚಾರಕನಾಗಿ ಪರಿಣಮಿಸಿದಾಗ ಆ ಆಸಕ್ತಿ ಕೆರಳುವುದು ನಿಂತು ಹೋಯಿತು. ತಾತ್ತ್ವಿಕವಾಗಿ ಕಾಮನ್ಸ್ ಸಭೆಯು ಭಾರತದ ಆಡಳಿತಕ್ಕೆ ಹೊಣೆಯಾಗಿತ್ತು. ಆದರೆ ಈ ದೇಶದ ಮೇಲೆ ಪರಿಣಾಮ ಬೀರುವಂತಹ ವಿಷಯಗಳಲ್ಲಿ ಎಲ್ಲೋ ಕೆಲವೇ ಮಂದಿ ಆಸಕ್ತಿ ವಹಿಸುತ್ತಿದ್ದರು. ಕಂಪನಿಯ ಆಳ್ವಿಕೆಯ ದಿನಗಳಲ್ಲಿ ಆಡಳಿತದ ಬಗ್ಗೆ ವರದಿ ಸಲ್ಲಿಸಲು ಪಾರ್ಲಿಮೆಂಟ್ ಒಂದು ಸೆಲೆಕ್ಟ್ ಸಮಿತಿಯನ್ನು ನೇಮಿಸುತ್ತಿತ್ತು. ಆ [illegible]

ವಿಷಯದ ಬಗ್ಗೆ ಅಮೂಲಾಗ್ರವಾಗಿ ಪರಿಶೀಲನೆ ನಡೆಸಿ ಲೋಪದೋಷಗಲನ್ನು ಹೊರಗೆಡಹಿ ಇವುಗಳಿಗೆ ಪರಿಹಾರಗಳನ್ನು ಸೂಚಿಸುತ್ತಿತ್ತು. ಇವುಗಳನ್ನು ಹೊಸ ಶಾಸನಗಳಲ್ಲಿ ಆಗಾಗ್ಗೆ ಅಳವಡಿಸಲಾಗುತ್ತಿತ್ತು. ಆದರೆ ಈಗ ಸೆಕ್ರೆಟರಿ ಇಡೀ ಸಭೆಯ ಮುಂದೆ ಒಂದು ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದ. ಪ್ರತಿಯೊಬ್ಬ ಸದಸ್ಯರೂ ಅದರ ಬಗ್ಗೆ ಆಸಕ್ತಿ ವಹಿಸಬೇಕಾಗಿತ್ತು. ಆದರೆ ಅನೇಕ ವೇಳೆ ಆಗುವಂತೆ ಎಲ್ಲರ ಕರ್ತವ್ಯ ಯಾರ ಕರ್ತವ್ಯವೂ ಅಲ್ಲ ಎಂಬ ರೀತಿಯಲ್ಲಿ ಪರಿಣಮಿಸಿತು.

ಸೆಕ್ರೆಟರಿ ಆಫ್ ಸ್ಟೇಟಿನ ಅಧಿಕಾರದ ಹೆಚ್ಚಳದ ಮೇಲೆ ಇದರ ಪರಿಣಾಮದ ಬಗ್ಗೆ ಹಿಂದೆಯೇ ವಿವರಿಸಲಾಗಿದೆ. ಆದರೆ ಭಾರತದ ಆಂತರಿಕ ಆಡಳಿತದ ಮೇಲೂ ಅದು ಬಹು ಮಟ್ಟಿಗೆ ಪರಿಣಾಮ ಬೀರಿತು. ಭಾರತದ ಅಧಿಕಾರಿಗಳು ಈಗ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಮಾತ್ರ ಹೊಣೆಗಾರರಾಗಿದ್ದರು ಮತ್ತು ಸೆಕ್ರೆಟರಿ ಸಮಾಧಾನವಿರುವವರೆವಿಗೆ ಅಧಿಕಾರಿಗಳಿಗೆ ಇತರ ಯಾವ ಅಧಿಕಾರ ವರ್ಗದ ಭೀತಿಯೂ ಇರಲಿಲ್ಲ. ಅಷ್ಟು ದೂರದಲ್ಲಿದ್ದ ಸೆಕ್ರೆಟರಿ ಆಫ್ ಸ್ಟೇಟ್ ಆಡಳಿತ ವಿವರಗಳ ಮೇಲೆ ಯಾವುದೇ ರೀತಿಯ ಪರಿಣಾಮಕಾರಿ ನಿಯಂತ್ರಣ ಬಿರುವ ಸಾಧ್ಯತೆ ಸುಲಭವಾದುದಾಗಿರಲಿಲ್ಲ. ಆದರೆ ಅದರ ಅಂತಿಮ ಹೊಣೆ ತನ್ನದಾಗಿದ್ದುರಿಂದ ತನ್ನ ಅಧಿಕಾರಿಗಳ ಕೆಲಸ ಕಾರ್ಯಗಳನ್ನು ಅವನು ಸಮರ್ಥಿಸಬೇಕಿತ್ತು. ಉನ್ನತ ಭಾರತದ ಸಿವಿಲ್ ಸರ್ವೀಸಿನ ಉನ್ನತ ಸದಸ್ಯರ ಮುಖಂಡತ್ವದಲ್ಲಿ ಭಾರತದಲ್ಲಿ ಸಕಲ ಬಲಿಷ್ಠ ಅಧಿಕಾರಿಶಾಹಿ ಬೆಳವಣಿಗೆಯೇ ಇದರ ಫಲವಾಗಿ ಪರಿಣಮಿಸಿತು. ಈ ಸೇವಾವರ್ಗ ಅಲ್ಪಕಾಲದಲ್ಲಿಯೇ ಬಲಿಷ್ಠ ಸಂಸ್ಥೆಯಾದಂತಾಯಿತು ಮತ್ತು ಈ ಸೇವಾ ವರ್ಗದ ಸದಸ್ಯರು ಬ್ಲಂಟ್‌ರವರ ಮಾತಿನಲ್ಲಿಯೇ ಹೇಳುವುದಾದರೆ "ತಮ್ಮ ಸಹಸದಸ್ಯರಿಗೆ ಮಾತ್ರವಲ್ಲದೆ ಇತರ ಯಾವುದೇ ಅಧಿಕಾರಕ್ಕೆ ಸಗ್ಗದಂತ, ಬೇಜಾವಾಬ್ದಾರಿಯ, ಉದ್ಯೋಗದಿಂದ ತೆಗೆದು ಹಾಕಲಾಗದ ಭಾರತದ ವಾಸ್ತವ ಒಡೆಯರಾದರು". ಈ ಸೇವಾ ವರ್ಗದ ಸದಸ್ಯರು ಅತ್ಯಂತ ಸಮರ್ಥರಾಗಿದ್ದರು ಮತ್ತು ಒಟ್ಟಿನಲ್ಲಿ ಅವರು ಪ್ರಾಮಾಣಿಕರು ಆಗಿದ್ದರು ಎಂಬ ಅಂಶ ನಿಸ್ಸಂದೇಹವಾದುದು. ಆದರೆ ತಾವಿದ್ದಂತ ಸ್ಥಾನಮಾನ ಅವರಲ್ಲಿ ಒಂದು ತೆರನಾದ ಮೇಲ್ಮನೋಭಾವವನ್ನು ಉಂಟುಮಾಡಿತು ಮತ್ತು ಆಳಿಕೆಗೊಳಗಾದವರು ಆಳುವವರ ನಡುವಣ ಒಂದು ಬೃಹತ್ ಕಂದರವೇ ಏರ್ಪಟ್ಟಿತು. ಎಲ್ಲ ಉತ್ತಮ ಆಡಳಿತಗಳ ಹಿನ್ನೆಲೆಯಲ್ಲಿ ಅಡಗಿರುವಂತ ಅನುಕಂಪ ಹಾಗೂ ಪರಸ್ಪರ ಅರಿಯುವಿಕೆ - ಈ ಎರಡು ವರ್ಗಗಳ ನಡುವೆ ಕಡೆಗೊಂಡಿತು.

ದುರದೃಷ್ಟವಶಾತ್ ಉನ್ನತ ಬ್ರಿಟಿಷ್ ಅಧಿಕಾರಿಗಳ ಪ್ರತ್ಯೇಕತೆಯನ್ನು ತೀವ್ರಗೊಳಿಸಲು ಇತರ ಕಾರಣಗಳೂ ಇದ್ದವು. ಕಂಪೆನಿಯ ಆಳ್ವಿಕೆಯ ಕಾಲದಲ್ಲಿ ಇಂಗ್ಲಿಷ್ ಅಧಿಕಾರಿಗಳು ಭಾರತೀಯರೊಡನೆ ಸ್ನೇಹ ಭಾವದಿಂದ ಬೆರೆಯುತ್ತಿದ್ದರು. ವಾಸ್ತವವಾದ ಸದ್ಭಾವನೆ ಹಾಗೂ ಹಲವೊಮ್ಮೆ ಅವರ ನಡುವೆ ಮೈತ್ರಿಯೂ ಏರ್ಪಡುತ್ತಿತ್ತು. ಭಾರತೀಯರ ಬಗ್ಗೆ ಬ್ರಿಟಿಷರ ಮನದಲ್ಲಿ ದಂಗೆಯ ಭೀಕರ ಭೀತಿಗಳು ಒಂದು ರೀತಿಯ ಜಿಗುಪ್ಸಾ ಭಾವನೆಯನ್ನು ಉಂಟುಮಾಡಿದವು. ಈ ಭಾವನೆ ಕಾಲಕ್ರಮದಲ್ಲಿ ದುರ್ಬಲಗೊಂಡು ಕ್ರಮೇಣ ಕಣ್ಮರೆಯಾಗಬಹುದಿತ್ತು. ಆದರೆ ಹಬೆ ನೌಕಾಯಾನ, ಸೂಯಜ್ ಕಾಲುವೆ, ತಂತಿ ಹಾಗೂ ಭೂಮಾರ್ಗ ಇವೆಲ್ಲ ಬ್ರಿಟಿಷರಿಗೆ ತಮ್ಮ ತಾಯ್ನಾಡಿನೊಡನೆ ನಿಕಟ ಸಂಪರ್ಕ ಪಡೆಯಲು ಕಾರಣವಾದವು. ಅವರು ಈಗ ವಿದೇಶಿ ಪ್ರದೇಶದಲ್ಲಿದ್ದ ದೇಶಭ್ರಷ್ಟರಾಗಿರದೆ ತಮ್ಮ ತಾಯ್ನಾಡಿನೊಡನೆ ನೇರ ಹಾಗೂ ನಿರಂತರ ಸಂಪರ್ಕ ಪಡೆದವರಾಗಿದ್ದರು. ದೊಡ್ಡ ಪಟ್ಟಣಗಳಲ್ಲಿ ಕ್ರಮೇಣ ಇಂಗ್ಲೀಷ್ ಸಮಾಜ ಅಭಿವೃದ್ಧಿಗೊಂಡಿತು. ಭಾರತೀಯರೊಡನೆ ಮೈತ್ರಿ ಬೆಳೆಸದಿರಲು ಇವೆಲ್ಲವೂ ಕಾರಣವಾದವು ಮತ್ತು ಭಾರತೀಯರಿಗೆ ಸಂಬಂಧಿಸಿದಂತೆ, ಬ್ರಿಟಿಷ್ ಅಧಿಕಾರಿ ವರ್ಗ ಹೆಚ್ಚು ಹೆಚ್ಚು ಪ್ರತ್ಯೇಕತಾ ಜೀವನ ನಡೆಸಲಾರಂಭಿಸಿತು. ಇಂಗ್ಲೀಷ್ ಅಧಿಕಾರಿಯ ಕಾಲ ಅವನ ಕಛೇರಿ ಹಾಗೂ ಅವನ ಮನೆಗಳಿಗೆ ಮೀಸಲಾಗಿದ್ದು ಭಾರತೀಯರೊಡನೆ ಸಾಮಾಜಿಕ ಸಂಪರ್ಕ ಪಡೆಯುತ್ತಿದ್ದುದೇ ಅಪೂರ್ವವಾಗಿತ್ತು. ಅವರು ಭಾರತದಲ್ಲಿ ದೀರ್ಘಕಾಲ ನೆಲೆಸಿದ್ದರೂ ಎಲ್ಲ ದೃಷ್ಟಿಗಳಿಂದಲೂ ಅವರು ವಿದೇಶೀಯರಾಗಿಯೇ ಉಳಿದಿದ್ದು ಭಾರತೀಯರ ಭಾವನೆಗಳು. ಚಿತ್ತವೃತ್ತಿ ಹಾಗೂ ಆಸೆ ಆಕಾಂಕ್ಷೆಗಳ ಬಗ್ಗೆ ಅವರ ಜ್ಞಾನ ಅತ್ಯಲ್ಪವಾಗಿತ್ತು. "ಕಂಪನಿಯ ಆಳ್ವಿಕೆಯ ಕಾಲದ ಆಂಗ್ಲೋ ಇಂಡಿಯನ್ ಅಧಿಕಾರ ಭಾರತವನ್ನು ಪ್ರೀತಿಸುತ್ತಿದ್ದ ರೀತಿ ಇಂದು ರಾಣಿಯ ಯಾವ ಅಧಿಕಾರಿಯೂ ಪ್ರೀತಿಸುವುದನ್ನು ಕನಸಿನಲ್ಲಿಯೂ ಭಾವಿಸಲಾಗದ ವಿಷಯವಾಗಿದೆ; ಅದನ್ನು ಪ್ರೀತಿಸುತ್ತಾ ಆತ ಭಾರತಕ್ಕೆ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದ" ಎಂದು ಬ್ಲಂಟ್ ನುಡಿದಿರುವುದು ಔಚಿತ್ಯ ಪೂರ್ಣವಾಗಿದೆ.

ಸಾರ್ವಜನಿಕ ಹುದ್ದೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರನ್ನು ನೇಮಕ ಮಾಡುವುದರ ಮೂಲಕ ಮಾತ್ರ ಈ ಪರಿಸ್ಥಿತಿ ಸುಧಾರಿಸಬಹುದು, ಎಂಬುದನ್ನು ಭಾರತೀಯರು ಮನಗಂಡರು. 1833 ರ ಛಾರ್ಟರ್ ಕಾಯ್ದೆ ರಾಜ್ಯದ ಉನ್ನತ ಅಧಿಕಾರಗಳಿಗೂ ಭಾರತೀಯರ ನೇಮಕವನ್ನು ನ್ಯಾಯ ಬದ್ದಗೊಳಿಸಿತು. ಆದರೆ 1793 ರ ಕಾಯ್ದೆಯ ಸೌಲಭ್ಯಗಳು ಇನ್ನೂ ರದ್ದಾಗಿರಲಿಲ್ಲ. ಅದರ

ಪ್ರಕಾರ - "ವಾರ್ಷಿಕ 800 ಪೌಂಡ್‌ಗಳಿಗಿಂತ ಅಧಿಕ ವರಮಾನದ ಅಧಿಕಾರ ಸ್ಥಾನವನ್ನು ಕಂಪನಿಯ ಒಡಂಬಡಿಕೆಯಿಷ್ಟು ಕಟ್ಟಿಗೊಳಪಟ್ಟ ಅಧಿಕಾರವರ್ಗ ಮಾತ್ರ ಪಡೆಯಬಹುದಿತ್ತು". ಹಾಗಾಗಿ ಈಸ್ಟ್ ಇಂಡಿಯಾ ಕಂಪೆನಿಯ ಒಡಂಬಡಿಕೆಯ ಕಟ್ಟಿಗೊಳಪಟ್ಟ ಅಧಿಕಾರಿಯಿಲ್ಲದೆ ಮತ್ತಾವ ಭಾರತೀಯನೂ ಉನ್ನತ ಸ್ಥಾನವನ್ನು ಅಲಂಕರಿಸುವಂತಿರಲಿಲ್ಲ. ಮೊದಲಿಗೆ ಈ ಅಧಿಕಾರಿಗಳನ್ನು ಭಾಗಶಃ ಡೈರೆಕ್ಟರುಗಳು ಮತ್ತು ಭಾಗಶಃ ಬೋರ್ಡ್ ಆಫ್ ಕಂಟ್ರೋಲ್ ನಾಮಕರಣ ಮಾಡುತ್ತಿತ್ತು. ನಾಮಕರಣಗೊಂಡ ತರುವಾಯ ಹೈಲೆಬರಿಯ ಈಸ್ಟ್ ಇಂಡಿಯಾ ಕಾಲೇಜಿನಲ್ಲಿ ಅವರು ಎರಡು ವರ್ಷಗಳ ತರಬೇತಿ ಪಡೆಯುತ್ತಿದ್ದರು. ಈ ನೇಮಕಗಳಿಗೆ ಬಹಿರಂಗ ಸ್ಪರ್ಧಾಪರೀಕ್ಷೆಗಳ ವ್ಯವಸ್ಥೆಯನ್ನು 1853 ರಲ್ಲಿ ಜಾರಿಗೆ ತರಲಾಯಿತು ಮತ್ತು 1858 ರಲ್ಲಿ ಮತ್ತೆ ಇದನ್ನು ಸ್ಥಿರಪಡಿಸಲಾಯಿತು. ಈ ಸ್ಪರ್ಧೆಯಲ್ಲಿ ಸಾಮ್ರಾಜ್ಞಿಯ ಯಾವ ಪ್ರಜೆಯೇ ಆಗಲಿ (ಭಾರತೀಯ ಅಥವಾ ಯೂರೋಪಿಯನ್) ಸ್ಪರ್ಧಿಸಬಹುದಿತ್ತು. ಪ್ರವೇಶಕ್ಕೆ ಗರಿಷ್ಠ ವಯೋಮಿತಿ ಮೊದಲಿಗೆ ಇಪ್ಪತ್ತಮೂರು ವರ್ಷಗಳಿತ್ತು. 1859 ರಲ್ಲಿ ಗರಿಷ್ಠ ವಯೋಮಿತಿಯನ್ನು ಇಪ್ಪತ್ತೆರಡು ವರ್ಷಗಳಿಗೆ ಇಳಿಸಲಾಯಿತು ಮತ್ತು ಆಯ್ಕೆಯಾದ ಅಭ್ಯರ್ಥಿಗಳು ಇಂಗ್ಲೆಂಡಿನಲ್ಲಿ ಒಂದು ವರ್ಷದ ಖಾಯಂ ಪೂರ್ವ ಅವಧಿಯಲ್ಲಿ ರಚಿಸಬೇಕಾಗಿತ್ತು. 1866ರಲ್ಲಿ ಗರಿಷ್ಠ ವಯೋಮಿತಿಯನ್ನು ಇಪ್ಪತ್ತೊಂದಕ್ಕೆ ಇಳಿಸಲಾಯಿತು ಮತ್ತು ಪ್ರೋಬೆಷನರುಗಳು ಅಂಗೀಕೃತ ವಿಶ್ವವಿದ್ಯಾನಿಲಯದಲ್ಲಿ ಎರಡು ವರ್ಷಗಳ ತರಬೇತಿಯ ವಿಶೇಷ ಶಿಕ್ಷಣ ಪಡೆಯಬೇಕಿತ್ತು.

ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಭಾರತೀಯರಿಗೆ ತುಂಬಾ ಕಷ್ಟಕರವಾದುದಾಗಿತ್ತು. ಇಂಗ್ಲೆಂಡಿಗೆ ಪ್ರಯಾಣ ದುಬಾರಿಯಾದುದೂ ಅಸಾಧಾರಣವಾದುದೂ ಆಗಿದ್ದುದು ಮಾತ್ರವಲ್ಲದೆ ಹಿಂದೂ ಜನಾಂಗದ ಸಂಪ್ರದಾಯಸ್ಥರು ಇದಕ್ಕೆ ಹೆಚ್ಚು ಅಸಮ್ಮತಿ ವ್ಯಕ್ತಪಡಿಸುತ್ತಿದ್ದರು. ಇಂಗ್ಲೀಷ್ ವಿಶ್ವವಿದ್ಯಾನಿಲಯವೊಂದು ಇಂಗ್ಲೀಷ್ ಮಾಧ್ಯಮದ ಮೂಲಕ ನಡೆಸುವ ಪರೀಕ್ಷೆಯಲ್ಲಿ ಇಂಗ್ಲೀಷಿನವರೊಡನೆ ಸ್ಪರ್ಧಿಸುವುದು ವಾಸ್ತವವಾಗಿ ದುಸ್ಸಾಧ್ಯ ಕಾರ್ಯವಾಗಿತ್ತು. ಕೆಲವೇ ಮಂದಿ ಭಾರತೀಯರು ಈ ಪರೀಕ್ಷೆಗಳಲ್ಲಿ ಸಫಲರಾದರು ಎಂಬುದರಲ್ಲಿ ಆಶ್ಚರ್ಯವೇನೂ ಅಲ್ಲ.

ಭಾರತದಲ್ಲಿ ರಾಜಕೀಯ ಚಳುವಳಿಯ ಮೇಲೆ ಇಂಥಹ ವಸ್ತುಗತಿಯ ಪ್ರತಿಕ್ರಿಯೆಗಳನ್ನು ಮುಂದಿನ ಒಂದು ಅಧ್ಯಯನದಲ್ಲಿ ಚರ್ಚಿಸಲಾಗುವುದು. ಉನ್ನತ ಸಿವಿಲ್ ಸರ್ವೀಸ್‌ನಲ್ಲಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿರುವ ಅಂಶವನ್ನು ಬ್ರಿಟಿಷ್ ಸರ್ಕಾರ ಸಹ ಮನಗಂಡಿತು. ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆಹೊಂದದ ಉನ್ನತ ಅಧಿಕಾರ ಸ್ಥಾನಗಳಿಗೆ ಭಾರತೀಯರ ನೇಮಕಕ್ಕೆ ಅಂಗೀಕಾರ ನೀಡುವ ಒಂದು ಕಾಯ್ದೆಯನ್ನು 1870 ರಲ್ಲಿ ಅಂಗೀಕರಿಸಲಾಯಿತು. ಆದರೆ, ಮುಂದೆ ವಿವರಿಸಲಾಗುವ ಪರಿಸ್ಥಿತಿಗಳಲ್ಲಿ ಇದನ್ನು 1879 ರಲ್ಲಿ ಮಾತ್ರವೇ ಕಾರ್ಯಾಚರಣೆಗೆ ತರಲಾಯಿತು.

1879 ರಲ್ಲಿ ಅಂಗೀಕರಿಸಲಾದ ನಿಯಮದಲ್ಲಿ ಈ ರೀತಿಯಿತ್ತು; "ಸೆಕ್ರೆಟರಿ" ಆಫ್ ಸ್ಟೇಟ್ ಯಾವುದೇ ವರ್ಷದಲ್ಲಿ ನೇಮಕ ಮಾಡುವ, ಒಡಂಬಡಿಕೆಯ ಕಟ್ಟಿಗೊಳಪಟ್ಟ ಒಟ್ಟು ಸಿವಿಲ್ ನೌಕರರ ಪೈಕಿ ಅನುಪಾತದಲ್ಲಿ ಆರನೆ ಒಂದು ಭಾಗಕ್ಕೆ ಹೆಚ್ಚಿಲ್ಲದಂತೆ, ಗವರ್ನರ್ ಜನರಲ್-ಇನ್-ಕೌನ್ಸಿಲ್‌ನ ಅಂಗೀಕಾರಕ್ಕೊಳಪಟ್ಟು ಸ್ಥಳೀಯ ಸರ್ಕಾರಗಳು ಭಾರತದಲ್ಲಿ ಆಯ್ಕೆ ಮಾಡಿದ ಸ್ಥಳೀಯವಾಗಿರಬೇಕು". ಈ ಅಧಿಕಾರಗಳನ್ನು "ಸ್ಟ್ಯಾಚುಟರಿ ಸಿವಿಲ್ ನೌಕರರು" ಎಂದು ಕರೆಯಲಾಗುತ್ತಿತ್ತು. ಉತ್ತಮ ಶಿಕ್ಷಣ ಹಾಗೂ ಸಾಮರ್ಥ್ಯ ಪಡೆದ ಸದ್ವಂಶಸ್ಥರು ಮತ್ತು ಉತ್ತಮ ಸಾಮಾಜಿಕ ಸ್ಥಾನಗಳಿಸಿದ ಯುವಕರ ಪೈಕಿ ಇವರನ್ನು ನೇಮಕ ಮಾಡಲಾಗುತ್ತಿತ್ತು. ನಾಮಕರಣ ವಿಧಾನದಲ್ಲಿ ಯಾವ ಯಾವ ಲೋಪದೋಷಗಳಿರುವುವೋ ಅವೇ ಲೋಪದೋಷಗಳು ಈ ಪದ್ಧತಿಯಲ್ಲಿಯೂ ಇದ್ದವು. ಭಾರತೀಯರೇ ಸ್ಪರ್ಧಾ ಪರೀಕ್ಷೆಗಳನ್ನು ಅಪೇಕ್ಷಿಸುತ್ತಿದ್ದರು. ಆದರೆ ಭಾರತೀಯರಿಗೆ ಉತ್ತಮ ಹಾಗೂ ಸಮವಾದ ಅವಕಾಶಗಳನ್ನೊದಗಿಸಲು ಇಂಗ್ಲೆಂಡ್ ಹಾಗೂ ಭಾರತಗಳೆರಡರಲ್ಲಿಯೂ ಏಕಕಾಲದಲ್ಲಿ ಪರೀಕ್ಷೆಗಳನ್ನು ನಡೆಸಬೇಕೆಂದು ಅವರು ಶಿಫಾರಸು ಮಾಡಿದರು. ಇದೇ ಕಾರಣಕ್ಕಾಗಿಯೂ ಪ್ರವೇಶಕ್ಕಾಗಿ ಗರಿಷ್ಠ ವಯೋಮಿತಿಯನ್ನು ಇಪ್ಪತ್ತೊಂದು ವರ್ಷಗಳಿಗಿಂತ ಕಡಿಮೆ ಮಾಡಲು ಅವರು ವಿರೋಧಿಸಿದುದು. ಏಕೆಂದರೆ ವಿದೇಶೀ ಭಾಷೆಯೊಂದರಲ್ಲಿ ಭಾರತೀಯ ವಿದ್ಯಾರ್ಥಿಗಳನ್ನು ಪರೀಕ್ಷಿಸಬೇಕಾದಾಗ ವಿದ್ಯಾರ್ಥಿಗಳಿಗೆ ಪ್ರತಿಕೂಲ ಪರಿಣಾಮವಾಗುತ್ತಿತ್ತು. ಗರಿಷ್ಠ ವಯೋಮಿತಿಯನ್ನು 1877 ರಲ್ಲಿ ಹತ್ತೊಂಬತ್ತು ವರ್ಷಗಳಿಗೆ ಇಳಿದುದು ಭಾರತೀಯರನ್ನು ಈ ಪರೀಕ್ಷೆಗಳಿಂದ ಹೊರಗಿಡಬೇಕೆಂಬ ಉದ್ದೇಶಪೂರಿತ ಪ್ರಯತ್ನವೆಂದು ಪರಿಗಣಿಸಿದರು. ಇದೇ ಒಂದು ಚಳುವಳಿಗೆ ಕಾರಣವಾಯಿತು. ಕಾಂಗ್ರೆಸ್ ಚಳುವಳಿ ತೀವ್ರಗೊಳ್ಳಲು ಇದು ಕಾರಣವಾಯಿತು. ಏಕಕಾಲದಲ್ಲಿ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಹಾಗೂ ಅಧಿಕ ಸಂಖ್ಯೆಯಲ್ಲಿ ಭಾರತೀಯರ ನೇಮಕದ ಪ್ರಶ್ನೆಯನ್ನು ಕಾಂಗ್ರೆಸ್ ತೀವ್ರವಾಗಿ ಪರಿಗಣಿಸಿತು.

ಈ ಸಮಸ್ಯೆಯನ್ನು ಪರಿಶೀಲಿಸಲು ಲಾರ್ಡ್ ಡಫರಿನ್ "ಸಾರ್ವಜನಿಕ ಸೇವಾ ಆಯೋಗ"ವೊಂದನ್ನು 1886 ರಲ್ಲಿ ನೇಮಿಸಿದ. ಆಗ ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಸರ್ ಚಾರ್ಲಸ್ ಆಚೆಸ್‌ನ್‌ನನ್ನು ಈ ಆಯೋಗದ ಅಧ್ಯಕ್ಷನನ್ನಾಗಿ ನೇಮಿಸಿದ. ಈ ಆಯೋಗ ಒಡಂಬಡಿಕೆಗೊಳಪಟ್ಟ ಸೇವಾ ವರ್ಗದವರಿಗೆ ಏಕಕಾಲದಲ್ಲಿ ಪರೀಕ್ಷೆ ನಡೆಸುವ ಅಭಿಪ್ರಾಯವನ್ನು ತಳ್ಳಿಹಾಕಿತು ಮತ್ತು ಸ್ಟ್ಯಾಟುಟರಿ ಸಿವಿಲ್ ಸರ್ವೀಸನ್ನು ರದ್ದುಗೊಳಿಸುವ ಬಗ್ಗೆ ಸಲಹೆ ನೀಡಿತು. ಇಲ್ಲಿಯವರೆವಿಗೆ ಒಡಂಬಡಿಕೆಗೊಳಪಟ್ಟಿದ್ದ ಸೇವಾವರ್ಗದ ಹಲವಾರು ಹುದ್ದೆಗಳನ್ನು ಮೀಸಲಾಗಿರಿಸುತ್ತಿದ್ದು, ಇದನ್ನು ಸ್ಥಳೀಯ ಸೇವಾವರ್ಗದವರೆಲ್ಲರಿಗೂ (Local Service) ಅನ್ವಯವಾಗುವಂತೆ ತೆರೆದಿಡಬೇಕು. ಇದನ್ನು ಪ್ರಾಂತೀಯ (ಸಾರ್ವಜನಿಕ) ಸೇವಾ ವರ್ಗವೆಂದು ಕರೆಯಲಾಗುವುದು. ಪ್ರತಿ ಪ್ರಾಂತದಲ್ಲಿಯೂ ಕೆಳದರ್ಜೆಯವರಿಗೆ ಬಡ್ತಿ ನೀಡುವುದು ಮೂಲಕ ಅಥವಾ ನೇರವಾಗಿ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿತು. ಒಡಂಬಡಿಕೆಗೊಳಪಟ್ಟ ಮತ್ತು ಒಡಂಬಡಿಕೆಗೊಳಪಡದ ಎಂಬ ಪದಗಳ ಬದಲು ಸಾಮ್ರಾಜ್ಯದ ಮತ್ತು ಪ್ರಾಂತೀಯ ಎಂಬ ಪದಗಳ ಒಂದು ಪ್ರಾಂತೀಯ ಸಭೆಯ ಅಧೀನದಲ್ಲಿ ಸಬಾರ್ಡಿನೇಟ್ ಸಿವಿಲ್ ಸರ್ವೀಸ್ ವರ್ಗವಿತ್ತು.

ಈ ಶಿಫಾರಸುಗಳನ್ನು ಅಂಗೀಕರಿಸಲಾಯಿತು. ಒಡಂಬಡಿಕೆಗೊಳಪಟ್ಟ ಸಿವಿಲ್ ಸರ್ವೀಸನ್ನು ಇನ್ನು ಮುಂದೆ ಸಿವಿಲ್ ಸರ್ವೀಸ್ ಆಫ್ ಇಂಡಿಯಾ ಎಂದೂ ಪ್ರಾಂತೀಯ ಸಿವಿಲ್ ಸರ್ವೀಸ್ ಅನ್ನು ಆ ನಿರ್ದಿಷ್ಟ ಪ್ರಾಂತಕ್ಕೆ ಸೇರಿಸಿದಂತೆಯೂ ಉದಾಹರಣೆಗೆ ಬಂಗಾಳ ಸಿವಿಲ್ ಸರ್ವೀಸ್ ಕರೆಯುವ ವಾಡಿಕೆಯಾಯಿತು. ಸಿವಿಲ್ ಸರ್ವೀಸ್ ಆಫ್ ಇಂಡಿಯಾಕ್ಕೆ ಮೀಸಲಾದ ಆದರೆ ಹೊಸ ಪ್ರಾಂತೀಯ ಸೇವಾ ವರ್ಗಕ್ಕೆ ತೆರೆದ ಹುದ್ದೆಗಳ ಒಂದು ಪಟ್ಟಿಯನ್ನು ತಯಾರಿಸಲಾಯಿತು ಮತ್ತು ಅಂತಹ "ಪಟ್ಟಿ ಮಾಡಿದ ಹುದ್ದೆಗೆ " ಯಾವ ಭಾರತೀಯನನ್ನೇ ಆಗಲಿ ನೇಮಕ ಮಾಡಲು ಸ್ಥಳೀಯ ಸರ್ಕಾರಗಳಿಗೆ ಅಧಿಕಾರ ನೀಡಲಾಗಿತ್ತು. ಶಿಕ್ಷಣ, ಪೋಲೀಸ್, ಲೋಕೋಪಯೋಗಿ ಹಾಗೂ ವೈದ್ಯಕೀಯ ವಿಭಾಗಗಳು ಮುಂತಾದ ಇತರ ವಿಭಾಗಗಳಲ್ಲಿ ಸಹ ಇಂಪೀರಿಯಲ್, ಪ್ರಾವಿನ್ಷಿಯಲ್ ಹಾಗೂ ಸಬಾರ್ಡಿನೇಟ್ ಸೇವೆಗಳೆಂಬ ಅದೇ ರೀತಿಯ ವಿಭಾಗಗಳು ಇದ್ದವು. ಮೊದಲನೆಯದರಲ್ಲಿ ಬಹುಭಾಗ ಇಂಗ್ಲೀಷರೇ ಇದ್ದರೂ ಉಳಿದ ಎರಡು ವಿಭಾಗಗಳಲ್ಲಿ ವಿಶೇಷವಾಗಿ ಭಾರತೀಯರೇ ಇರುತ್ತಿದ್ದರು.

ಈ ವ್ಯವಸ್ಥೆ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಬ್ರಿಟಿಷರ ಆಳ್ವಿಕೆಯ ಅಂತ್ಯದವರೆವಿಗೂ ಅಸ್ತಿತ್ವದಲ್ಲಿತ್ತು. ಅದು ಸೇವಾ ಮಟ್ಟವನ್ನು ಉತ್ತಮಗೊಳಿಸಿತು. ಆದರೆ ರಾಜ್ಯದಲ್ಲಿನ ಉನ್ನತ ಹುದ್ದೆಗಳಿಗೆ ಅಧಿಕ ಸಂಖ್ಯೆಯಲ್ಲಿ ಭಾರತೀಯರ ನೇಮಕದ ನ್ಯಾಯಬದ್ಧ ಮಹತ್ವಾಕಾಂಕ್ಷೆಯನ್ನು ತೃಪ್ತಿಗೊಳಿಸಲಾಗಲಿಲ್ಲ.

ಇಂಡಿಯನ್ ಸಿವಿಲ್ ಸರ್ವಿಸ್‌ಗೆ ಭಾರತ ಹಾಗೂ ಇಂಗ್ಲೀಷ್‌ಗಳೆರಡರಲ್ಲಿ ಏಕಕಾಲದಲ್ಲಿ ಪರೀಕ್ಷೆ ನಡೆಸುವುದರ ಪರವಾಗಿ ಕಾಮನ್ಸ್ ಸಭೆ 1893 ರಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಸೆಕ್ರೆಟರಿ ಆಫ್ ಸ್ಟೇಟ್ ಅಭಿಪ್ರಾಯಕ್ಕಾಗಿ ಈ ನಿರ್ಣಯವನ್ನು ಭಾರತ ಸರ್ಕಾರಕ್ಕೆ ಕಳುಹಿಸಿದ. ಪ್ರಾಂತೀಯ ಸರ್ಕಾರಗಳೊಡನೆ ಸಮಾಲೋಚನೆ ನಡೆಸಿದ ತರುವಾಯ ಲಾರ್ಡ್ ಲ್ಯಾನ್ಸ್‌ಡೌನ್‌ನ ಸರ್ಕಾರ ಈ ನಿರ್ಣಯವನ್ನು ಖಂಡಿತವಾಗಿಯೂ ವಿರೋಧಿಸಿತು. "ಆಗ ನೇಮಕಗೊಂಡಿದ್ದ ಯುರೋಪಿಯನ್ ಅಧಿಕಾರ ವರ್ಗದವರ ಸಂಖ್ಯೆಯ ಇಳಿಸುವಿಕೆ ಬ್ರಿಟಿಷ್ ಆಳ್ವಿಕೆಯ ಸುಭದ್ರತೆಗೆ ಸರಿಯಾಗುವುದಿಲ್ಲ. ಪರೀಕ್ಷೆಗಳಲ್ಲಿ ಅನಿರ್ಬಂಧಿತ ಸ್ಪರ್ಧೆಯು ಸಿವಿಲ್ ಸರ್ವೀಸ್‌ನಲ್ಲಿ ಬ್ರಿಟಿಷ್ ಸಂಖ್ಯೆಯನ್ನು ಅತಿಯಾಗಿ ಕಡಿಮೆಗೊಳಿಸುವುದು ಮಾತ್ರವೇ ಅಲ್ಲ; ಆದರೆ ಪರಂಪರಾನುಗತವಾಗಿ ಆಳ್ವಿಕೆಗೆ ಹೊಂದಿಕೊಂಡಿರುವ ಮತ್ತು ವಿಶೇಷ ಗುಣಶಕ್ತಿ ಹೊಂದಿರುವ ಆದರೆ ಶೈಕ್ಷಣಿಕವಾಗಿ ಅಷ್ಟಾಗಿ ಮುಂದುವರಿಯದ ಮಹಮದೀಯರು, ಸಿಖ್‌ರು ಹಾಗೂ ಇತರ ಜನಾಂಗಗಳನ್ನು ಸಹ ಬಹುಮಟ್ಟಿಗೆ ಸೇವಾವರ್ಗದಿಂದ ಹೊರ ಹಾಕುವುದು ಎಂಬುದು ಅವರ ವಾದವಾಗಿತ್ತು". ಈ ಸಲಹೆಯ ಬಗ್ಗೆ ಯಾವ ಕಾರ್ಯವನ್ನು ಕೈಗೊಳ್ಳಲಾಗಲಿಲ್ಲ ಮತ್ತು ಈ ಬಗ್ಗೆ ಯಾವುದೇ ಕ್ರಮ ಕೈಕೊಳ್ಳುವ ಮುನ್ನ ಕಾಲು ಶತಮಾನದ ಕಾಲ ಚಕ್ರ ಉರುಳಿತು.

## 78.4 ಸೇನಾ ಆಡಳಿತ

ದಂಗೆಯವರೆವಿಗೆ ಮತ್ತು ದಂಗೆ ನಡೆದ ಬಹು ಸಮಯದ ಅನಂತರವೂ ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತಗಳು ಪ್ರತ್ಯೇಕ ಕಮಾಂಡರುಗಳಿದ್ದ ಪ್ರತ್ಯೇಕ ಸೇನೆಗಳನ್ನು ಪಡೆದಿದ್ದವು. ಬಂಗಾಳದ ಸೇನೆಯ ದಂಡನಾಯಕ ಭಾರತದ ಸೇನಾ ಮಂಡಳಿಗಳ ಮುಖ್ಯಸ್ಥನಾಗುತ್ತಿದ್ದರೂ ಬೊಂಬಾಯಿ ಮತ್ತು ಮದ್ರಾಸ್ ಸರ್ಕಾರಗಳಿಗೆ ತಮ್ಮದೇ ಆದ ಪಡೆಗಳಿದ್ದು ಈ ಪಡೆಗಳಿಗೆ ಸ್ಥಳೀಯವಾಗಿ

ನೇಮಕ ಮಾಡಿಕೊಳ್ಳುತ್ತಿದ್ದರು. 1893 ರಲ್ಲಿ ಅಂಗೀಕೃತಗೊಂಡು 1895 ರಲ್ಲಿ ಕಾರ್ಯಾಚರಣೆಗೆ ಬಂದ ಒಂದು ಕಾಯ್ದೆಯಿಂದ ಭಾರತದ ಸಂಪೂರ್ಣ ಸೈನ್ಯ ಒಬ್ಬ ದಂಡನಾಯಕನ ನಿಯಂತ್ರಣಕ್ಕೊಳಪಟ್ಟಿತು ಮತ್ತು ಇಡೀ ಸೇನೆಯನ್ನು ನಾಲ್ಕು ವಿಭಾಗಗಳಾಗಿ ಬಂಗಾಳ, ಮದ್ರಾಸ್, ಬೊಂಬಾಯಿ ಮತ್ತು ಪಂಜಾಬ್ ವಿಭಾಗಿಸಲಾಯಿತು. ಪ್ರತಿಯೊಂದು ಒಬ್ಬ ಲೆಫ್ಟಿನೆಂಟ್ ಜನರಲ್‌ನ ನೇತೃತ್ವದಲ್ಲಿತ್ತು. 1904 ರಲ್ಲಿ ಲಾರ್ಡ್ ಕಿಚನ್‌ರ ಭಿನ್ನ ತತ್ತ್ವಗಳ ಮೇಲೆ ಒಂದು ವ್ಯವಸ್ಥೆ ಮಾಡಿದ. ಭಾರತದ ಸೇನಾ ಬಲವನ್ನು ಮೂರು ಸೇನಾ ಕಮ್ಯಾಂಡ್‌ಗಳಾಗಿ ಮತ್ತು ಒಂಬತ್ತು ಡಿವಿಷನ್‌ಗಳಾಗಿ ವಿಭಾಗಿಸಲಾಯಿತು. ಯುದ್ಧ ಕಾಲದಲ್ಲಿ ಅಗತ್ಯವಾಗಬಹುದಾಗಿದ್ದ ಸಂಘಟನೆಯನ್ನು ಶಾಂತಿ ಕಾಲದಲ್ಲಿಯೇ ಉಂಟು ಮಾಡುವುದರಲ್ಲಿ ಈ ವ್ಯವಸ್ಥೆಯು ಅನುಕೂಲ ಅಡಗಿದ್ದಿತು. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಯುದ್ಧ ಮತ್ತು ಶಾಂತಿ ಕಾಲಗಳೆರಡರಲ್ಲಿಯೂ ಅದೇ ಸೇನಾನಿಗಳು ಅದೇ ಘಟಕಗಳ ನಾಯಕತ್ವ ವಹಿಸುತ್ತಿದ್ದರು.

(1) ಬಹುಮಟ್ಟಿಗೆ ಸ್ಥಳೀಯರೇ ನೇಮಕಗೊಂಡ ಭಾರತೀಯ ಪಡೆಗಳು

(2) ಕಂಪೆನಿಗೆ ಸೇರಿದ ಯುರೋಪಿಯನ್ ಯೂನಿಟ್‌ಗಳು ಮತ್ತು

(3) ರಾಯಲ್ ರೆಜಿಮೆಂಟ್‌ಗಳು - ಈ ರೀತಿಯಾಗಿ ಪ್ರತಿಯೊಂದು ಪ್ರೆಸಿಡೆನ್ಸಿ ಸೇನೆ ಮೂಲತಃ ಮೂರು ಭಾಗಗಳನ್ನೊಳಗೊಂಡಿತು. 1858 ರ ತರುವಾಯ ಕೊನೆಯ ಎರಡು ಯೂನಿಟ್‌ಗಳನ್ನು ಒಂದುಗೂಡಿರಲೇಬೇಕಾಯಿತು. ಆದರೆ ಇದರಿಂದ ಕಂಪೆನಿಯ ಪಡೆಗಳಲ್ಲಿ ಹೆಚ್ಚಿನ ಅಸಮಾಧಾನವುಂಟಾಗಿ ಸುಮಾರು 10,000 ಸೈನಿಕರು ನಿವೃತ್ತಿ ಪಡೆಯ ಬಯಸಿದರು. ಇದು 'ಬಿಳಿಯರ ದಂಗೆ' ಎಂದು ಪರಿಚಿತವಾಗಿದೆ. ಆದಾಗ್ಯೂ ಪ್ರೋತ್ಸಾಹ ದ್ರವ್ಯ ಹಾಗೂ ಇತರ ವಿನಾಯಿತಿಗಳನ್ನು ನೀಡುವುದರ ಮೂಲಕ ಈ ಅಸಮಾಧಾನವನ್ನು ಉಪಶಮನಗೊಳಿಸಲಾಯಿತು. 1857-59 ರ ದಂಗೆಯ ಪರಿಣಾಮವಾಗಿ ಸೇನಾ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಜಾರಿಗೆ ತರಲಾಯಿತು. ಮೊದಲನೆಯದಾಗಿ ಯುರೋಪಿಯನ್ ಪಡೆಗಳ ಪ್ರಮಾಣವನ್ನು ಹೆಚ್ಚಿಸಿ ಭಾರತೀಯ ಪಡೆಗಳ ಸಂಖ್ಯೆಯನ್ನು ಕಡಿಮೆ ಮಾಡಲಾಯಿತು. 1863 ರಲ್ಲಿ 65,000 ಯುರೋಪಿಯನ್ನರಿಗೆ ಪ್ರತಿಯಾಗಿ 1,40,000 ಭಾರತೀಯರು ಇದ್ದರು. ಇದೇ ಪ್ರಮಾಣವನ್ನು ಮೊದಲನೇ ಮಹಾಯುದ್ಧ ಆರಂಭವಾಗುವವರೆವಿಗೂ ಬಹುಮಟ್ಟಿಗೆ ಉಳಿಸಿಕೊಂಡು ಬರಲಾಗಿತ್ತು. ಫಿರಂಗಿ ದಳವನ್ನು ಯೂರೋಪಿಯನ್ನರೇ ಪ್ರತ್ಯೇಕವಾಗಿ ನಿಯಂತ್ರಿಸುತ್ತಿದ್ದರು.

ಎರಡನೆಯದಾಗಿ, ಭಾರತೀಯ ಸೇನೆಯ ವಿಶೇಷವಾಗಿ ಉತ್ತರ ಭಾರತದ ಸೇನೆಯ ರಚನೆಯಲ್ಲಿ ಮಹತ್ತರ ಬದಲಾವಣೆಗಳಾದವು. ಮೊದಲಿಗೆ ಈ ಸವಾಲುಗಳನ್ನು ಅದೇ ಪ್ರಾಂತದಿಂದ ನೇಮಕ ಮಾಡಿಕೊಳ್ಳಲಾಗುತ್ತಿತ್ತು ಮತ್ತು ಸಾಮಾನ್ಯವಾಗಿ ಇವರು ಉಚ್ಚ ವರ್ಗಕ್ಕೆ ಸೇರಿದವರಾಗಿರುತ್ತಿದ್ದರು. ದಂಗೆಯಿಂದ ಈ ವ್ಯವಸ್ಥೆಯಲ್ಲಿನ ಲೋಪದೋಷಗಳು ಸ್ವಚ್ಛಗೊಂಡವು. ಆದ್ದರಿಂದ ಅಲ್ಲಿಂದ ಮುಂದೆ ನೇಮಕವನ್ನು ಮಿಶ್ರ ವರ್ಗಗಳಿಂದ ಮಾಡಿಕೊಳ್ಳಲಾಗುತ್ತಿದ್ದು ಪ್ರತಿಯೊಂದು ಕಂಪನಿಯಲ್ಲಿಯೂ ಎಲ್ಲ ಜನಾಂಗ, ಜಾತಿ ಪಂಥಗಳಿಗೆ ಸೇರಿದವರಿದ್ದು ಸುಲಭವಾಗಿ ಸಂಘಟಿತರಾಗಿ ದಂಗೆಯೇಳುವಂತಿರಲಿಲ್ಲ.

ಇನ್ನೊಂದು ಬದಲಾವಣೆಯ ಪ್ರಭಾವ ಬಹು ನಿಧಾನವಾಗಿ ತಿಳಿಯ ಬಂದಿತು. ಘೂರ್ಖಾ, ಪಠಾನ್ ಮತ್ತು ಸಿಖ್ ಮುಂತಾದ ಪರಾಕ್ರಮಿ ಜನಾಂಗಗಳ ಹೆಚ್ಚಿನ ಜನರನ್ನು ಸೇನೆಯಲ್ಲಿ ಸೇರಿಸಿಕೊಂಡುದೇ ಈ ಬದಲಾವಣೆಯಾಗಿತ್ತು. ಕಾಲಾನುಕ್ರಮದಲ್ಲಿ ಇವರು ಬಂಗಾಳದ ಸೇನೆಯಲ್ಲಿನ ಹಿಂದೂಸ್ತಾನೀ ಪಡೆಯನ್ನು ಮತ್ತು ಬೊಂಬಾಯಿ ಹಾಗೂ ಮದ್ರಾಸ್‌ಗಳಲ್ಲಿ ಸ್ಥಳೀಯವಾಗಿ ನೇಮಕಗೊಂಡಿದ್ದ ಸಿಪಾಯಿಗಳ ಸ್ಥಾನವನ್ನು ಆಕ್ರಮಿಸಿದರು. ಅತಿ ಹೆಚ್ಚಿನ ಬದಲಾವಣೆಗಳು ಮದ್ರಾಸ್ ಸೇನೆಯಲ್ಲಿ ಆದವು. ಇದು ಕ್ರಮೇಣ ಸಿಖ್‌ರು, ಘೂರ್ಖಾಗಳು ಮತ್ತು ಉತ್ತರದ ಇತರರಿಂದ ತುಂಬಲ್ಪಟ್ಟಿತು. ತೆಲುಗರ ನೇಮಕ ಸಂಪೂರ್ಣವಾಗಿ ನಿಂತು ಹೋಯಿತು.

1861 ರಿಂದ ಗವರ್ನರ್ ಜನರಲ್‌ನ ಎಕ್ಸಿಕ್ಯುಟಿವ್ ಕೌನ್ಸಿಲ್‌ನಲ್ಲಿ ಒಬ್ಬ ಸೇನಾ ಅಧಿಕಾರಿಯನ್ನು ಸೇನಾ ಸದಸ್ಯನಾಗಿ ನೇಮಕ ಮಾಡಲಾಗುತ್ತಿದ್ದು ಈ ಸದಸ್ಯನ ಮೂಲಕ ಭಾರತದ ಸೇನೆಯ ಆಡಳಿತದ ಮೇಲ್ವಿಚಾರಣೆಯನ್ನು ಸರ್ಕಾರ ನೋಡಿಕೊಳ್ಳುತ್ತಿತ್ತು. ಪ್ರಧಾನ ದಂಡನಾಯಕ ಗವರ್ನರ್ ಜನರಲ್‌ನ ಎಕ್ಸಿಕ್ಯುಟಿವ್ ಕೌನ್ಸಿಲ್‌ನ ವಿಶೇಷ ಸದಸ್ಯನಾಗಿದ್ದ ಎಂಬ ಅಂಶದಿಂದ ಈ ಸ್ಥಾನ ವಿಪರೀತ ಅಸಂಗತವಾದುದಾಗಿತ್ತು. ಇವನು ಸೇನಾ ಸದಸ್ಯನಿಗಿಂತ ವಾಸ್ತವವಾಗಿ ಅಧಿಕಾರ ಪದವಿಯಲ್ಲಿ ಉನ್ನತ ಅಧಿಕಾರಿಯಾಗಿದ್ದರೂ

ಇವನು ಮಂಡಿಸುವ ಯಾವುದೇ ಸಲಹೆಯನ್ನು ವಿಮರ್ಶಿಸಲು ಮತ್ತು ಪರಿಶೀಲನೆಗಾಗಿ ಸೇನಾ ಸದಸ್ಯನಿಗೆ ಕಳುಹಿಸಬೇಕಾಗಿತ್ತು. ಪ್ರತಿಯೊಂದು ಪ್ರೆಸಿಡೆನ್ಸಿಯೂ ಪ್ರತ್ಯೇಕವಾದ ಸೇನೆಯನ್ನು ನಿರ್ವಹಿಸುತ್ತಿದ್ದಾಗ ಈ ಆಶ್ಚರ್ಯಕರ ಅಸಂಗತಕ್ಕೆ ಸ್ವಲ್ಪ ಮಟ್ಟಿನ ನ್ಯಾಯ ಸಮ್ಮತಿಯಿತ್ತು. ಆದರೆ 1895 ರಲ್ಲಿ ಇಡೀ ಭಾರತದ ಪಡೆಗಳನ್ನು ಪ್ರಧಾನ ದಂಡನಾಯಕನ ಏಕಾಧಿಕಾರಕ್ಕೆ ಗುರುಪಡಿಸಿದ್ದರಿಂದ ಈ ಅಸಂಗತಕ್ಕೆ ಪರಿಹಾರ ಅವಶ್ಯಕವಾಯಿತು. ಲಾರ್ಡ್ ಕರ್ಜನ್ 1904 ರಲ್ಲಿ ಈ ಸಮಸ್ಯೆಯನ್ನು ಪರಿಶೀಲಿಸಲಾರಂಭಿಸಿದ ಮತ್ತು ಸೇನೆಗೆ ಸಂಬಂಧಿಸಿದ ವಿಷಯಗಳಲ್ಲಿ ಪ್ರಧಾನ ದಂಡನಾಯಕನನ್ನು ಸಂಪೂರ್ಣ ಸಲಹಾಗಾರನನ್ನಾಗಿ ಮಾಡಿಕೊಳ್ಳುವುದರ ಮೂಲಕ ಈ ಅಸಂಗತವನ್ನು ನಿವಾರಿಸುವ ಬಗ್ಗೆ ಸಲಹೆ ನೀಡಿದ. ವೈಸರಾಯಿ ಲಾರ್ಡ್ ಕರ್ಜನ್ ಈ ವ್ಯವಸ್ಥೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ. ಸೇನಾ ಅಧಿಕಾರದ ಮೇಲೆ ಸಾರ್ವಜನಿಕ ಹತೋಟಿ ಇದರಿಂದ ಅಂತಿಮವಾಗಿ ತಪ್ಪಿ ಹೋಗಿತನ್ಮೂಲಕ ಸಂವಿಧಾನದ ಮೂಲಭೂತ ಹಕ್ಕುಗಳ ಮೇಲೆ ಪರಿಣಾಮ ಬೀರಬಹುದೆಂಬುದೇ ವೈಸರಾಯ್‌ನ ವಿರೋಧಕ್ಕೆ ಪ್ರಬಲ ಕಾರಣವಾಗಿತ್ತು. ಆದರೆ ಲಾರ್ಡ್ ಕಿಚನರ್‌ನ ಅಭಿಪ್ರಾಯವನ್ನು ಸೆಕ್ರೆಟರಿ ಆಫ್ ಸ್ಟೇಟ್ ಒಪ್ಪಿಕೊಂಡ ಮತ್ತು ಇವನ ಸಮ್ಮತಿ ವೈಸರಾಯಿ 1905 ರಲ್ಲಿ ರಾಜೀನಾಮೆ ನೀಡುವ ರೀತಿಯಲ್ಲಿತ್ತು. 1907 ರ ತರುವಾಯ ಭಾರತ ಸರ್ಕಾರದ ನೇತೃತ್ವದಲ್ಲಿ ಸೇನಾ ಆಡಳಿತಕ್ಕೆ ಪ್ರಧಾನ ದಂಡನಾಯಕ ಏಕಮಾತ್ರ ಅಧಿಕಾರಿಯಾದ.

## 78.5 ಉಪಸಂಹಾರ

ಪ್ರಜಾ ಆಡಳಿತದಲ್ಲಿ ಬಹು ಪರಿಣಾಮಕಾರಿಯಾದ ಮುಖ್ಯವಾದ ಒಂದು ಬದಲಾವಣೆ 1905 ರಲ್ಲಿ ಉಂಟಾಯಿತು. ಅವರೆವಿಗೆ ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳು ಒಬ್ಬ ಲೆಫ್ಟಿನೆಂಟ್ ಗವರ್ನರ್ ಆಳುತ್ತಿದ್ದ ಒಂದು ಪ್ರಾಂತವಾಗಿತ್ತು. ದಕ್ಷ ಆಡಳಿತ ದೃಷ್ಟಿಯಿಂದ ಸುಮಾರು 1,89,000 ಚದರ ಮೈಲಿಗಳ ವ್ಯಾಪಕ ಪ್ರದೇಶ ತುಂಬಾ ದೊಡ್ಡ ಪ್ರಮಾಣದ್ದಾಗಿದ್ದುದರಿಂದ ಪ್ರಾಂತೀಯ ಮೇರೆಗಳನ್ನು ಪುನರ್ ವ್ಯವಸ್ಥೆಗೊಳಿಸುವ ಬಗ್ಗೆ ಲಾರ್ಡ್ ಕರ್ಜನ್ ಯೋಜಿಸಿದ ಅಂತಿಮವಾಗಿ ಈ ಪ್ರಾಂತದಿಂದ ಢಾಕ್ಕಾ, ಚಿಟ್ಟಿಗಾಂಗ್ ಮತ್ತು ರಾಜ್ ಷಾಹಿಗಳನ್ನು ಪ್ರತ್ಯೇಕಗೊಳಿಸಲು ತೀರ್ಮಾನಿಸಲಾಯಿತು. ಆಗ ಒಬ್ಬ ಛೀಫ್ ಕಮೀಷನರ್‌ನ ಆಡಳಿತದಲ್ಲಿದ್ದ ಅಸ್ಸಾಂನೊಡನೆ ಇದನ್ನು ಸೇರಿಸಲಾಯಿತು ಮತ್ತು ಢಾಕ್ಕಾ ರಾಜಧಾನಿಯಾಗಿದ್ದ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಎಂದು ಕರೆಯಲಾದ ಹೊಸ ಪ್ರಾಂತವನ್ನಾಗಿ ಮಾಡಲಾಯಿತು. ಸಾರ್ವಜನಿಕ ತೀವ್ರ ವಿರೋಧವಿದ್ದಾಗ್ಯೂ 1905 ರಲ್ಲಿ ಈ ವಿಭಜನೆ ಮಾಡಲಾಯಿತು ಮತ್ತು ಬಂಗಾಳದ ಈ ವಿಭಜನೆ ಭಾರತದ ರಾಷ್ಟ್ರೀಯ ಭಾವನೆಯನ್ನು ತೀವ್ರವಾಗಿ ಅಲ್ಲೋಲ್ಲಕಲ್ಲೋಲ ಮಾಡಿದ ಭೀಕರ ರಾಜಕೀಯ ಚಳುವಳಿಯಾಗಿ ಪರಿಣಮಿಸಿತು.

## 78.6 ಮಾದರಿ ಪ್ರಶ್ನೆಗಳು

1. ಬ್ರಿಟಿಷ್ ಭಾರತದ ಹಣಕಾಸು ನೀತಿಗಳು ಭಾರತದ ಸಂಪನ್ಮೂಲಗಳನ್ನು ದೋಚುವುದೆ ಅವುಗಳ ಉದ್ದೇಶಿತವಾಗಿತ್ತು, ವಿಮರ್ಶಾತ್ಮಕವಾಗಿ ಬರೆಯಿರಿ.
2. 19ನೆಯ ಶತಮಾನದ ಸಾರ್ವಜನಿಕ ಸೇವೆಗಳು ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಬರೆಯಿರಿ.

## 78.7 ಪರಾಮರ್ಶನ ಕೃತಿಗಳು


1. G.N. Joshi : Indian Administration (1937)
2. L.S.S.O. Malley : Indian Civil Service 1601-1930 (1931)



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

# ಘಟಕ - 79

## ಬ್ರಿಟಿಷ್ ಭಾರತದ ವಿದೇಶಿ ವ್ಯವಹಾರ ಮತ್ತು ಗಡಿನೀತಿ 1858-1909


79.0 ಪ್ರಸ್ತಾವನೆ

79.1 ಆಫ್ಘನಿಸ್ಥಾನ ಮತ್ತು ವಾಯುವ್ಯ ಗಡಿ

79.2 ಮೇಲಣ ಬರ್ಮಾವನ್ನು ಸ್ವಾಧೀನ ಪಡಿಸಿಕೊಂಡದ್ದು

79.3 ಭಾರತೀಯ ರಾಜ್ಯಗಳು

79.4 ಉಪಸಂಹಾರ

79.5 ಮಾದರಿ ಪ್ರಶ್ನೆಗಳು

79.6 ಪರಾಮರ್ಶನ ಕೃತಿಗಳು

## 79.0 ಪ್ರಸ್ತಾವನೆ

ಭಾರತ ಸರ್ಕಾರದ ಆಡಳಿತವನ್ನು ಇಂಗ್ಲೆಂಡಿನ ಚಕ್ರವರ್ತಿಯ ಹೆಸರಿನಲ್ಲಿ ನಡೆಸಲಾರಂಭಿಸಲಾದ 1858 ರಿಂದ 1935 ರ ಸುಧಾರಿತ ಸಂವಿಧಾನ್ವಯ "ಪ್ರಾಂತೀಯ" ಸ್ವಾಯತತ್ತೆಯನ್ನು ಸ್ಥಾಪಿಸಿದ 1937 ರವರೆಗಿನ ಅವಧಿ ಭಾರತದ ಇತಿಹಾಸದಲ್ಲಿ ವಿಶಿಷ್ಟವಾದ ಯುಗವಾಗಿದೆ. 'ಸಾಮ್ರಾಜ್ಯಶಾಹಿ ಯುಗ (1856-1905) ಮತ್ತು ಸುಧಾರಣೆಗಳ ಯುಗ (1905-1937)' ಎಂದು ಈ ಕಾಲವನ್ನು ಎರಡು ಭಾಗಗಳಾಗಿ ವಿಭಾಗಿಸಬಹುದು. ಬ್ರಿಟಿಷ್ ಚಕ್ರವರ್ತಿಯ ಪ್ರಧಾನ ಸೆಕ್ರೆಟರಿ ಆಫ್ ಸ್ಟೇಟ್ ಒಬ್ಬ ಭಾರತದ ಆಡಳಿತ ನಿಯಂತ್ರಣ ಹೊಂದಿದ್ದುದೇ ಈ ಯುಗದ ಗಮನಾರ್ಹ ಲಕ್ಷಣವಾಗಿದೆ. ಈ ಅಂಶ ಬೇರೆಲ್ಲ ಕ್ಷೇತ್ರಗಳಿಗಿಂತ ವಿದೇಶೀ ನೀತಿಯ ಕ್ಷೇತ್ರದಲ್ಲಿ ವಿಶೇಷವಾಗಿ ಎದ್ದು ಕಾಣುತ್ತಿತ್ತು. 1858 ರ ತರುವಾಯ ಭಾರತದ ವಿದೇಶಿ ನೀತಿಯು ಯುರೋಪಿನ ಸ್ಥಿತಿಗತಿಗಳಿಂದ ಬಹುಮಟ್ಟಿಗೆ ಪ್ರಭಾವಿತಗೊಂಡಿತ್ತು ಮತ್ತು ಲಂಡನ್ನಿನ ವೈಟ್ ಹಾಲ್‌ನ ಬ್ರಿಟಿಷ್ ಸರ್ಕಾರದ ವಿದೇಶಿ ನೀತಿಯ ಒಂದು ಭಾಗವಾಗಿತ್ತು ಎಂದು ಹೇಳಿದಲ್ಲಿ ಉತ್ಪ್ರೇಕ್ಷೆಯೇನು ಆಗಲಾರದು.

## 79.1 ಆಫ್‌ಘನಿಸ್ಥಾನ ಮತ್ತು ವಾಯುವ್ಯ ಗಡಿ

ಬಹುಕಾಲದವರೆಗೆ ಇಂಗ್ಲೆಂಡ್ ಹಾಗೂ ರಷ್ಯಾಗಳ ನಡುವಣ ಸಂಬಂಧದ ಮೇಲೆ ವಾಯುವ್ಯ ಗಡಿಗೆ ಸಂಬಂಧಿಸಿದ ನೀತಿ ಆಧಾರಿತಗೊಂಡಿತ್ತು. ಮೊದಲನೆ ಆಫ್‌ಘನ್ ಯುದ್ಧದ ತರುವಾಯ ಎರಡೂ ದೇಶಗಳ ನಡುವೆ ಮೈತ್ರಿ ಭಾವನೆ ಮತ್ತೆ ಮೂಡಿತ್ತು. 1844 ರಲ್ಲಿ ರಷ್ಯದ ಚಕ್ರವರ್ತಿ ಒಂದೊನೆ ನಿಕೊಲಸ್ ವಿಕ್ಟೋರಿಯಾ ರಾಣಿಯನ್ನು ಭೇಟಿಯಾದ ಮತ್ತು ಮಧ್ಯ ಏಷ್ಯಾಕ್ಕೆ ಸಂಬಂಧಿಸಿದಂತೆ ಅವರು ಒಂದು ಒಪ್ಪಂದಕ್ಕೆ ಬಂದರು. ಬುಖಾರಾ, ಕಿವಾ ಹಾಗೂ ಸಮರ ಖಾಂದಗಳ ಖಾನೇಟ್‌ಗಳನ್ನು (ಪ್ರಾಂತ್ಯ) "ಅಪಾಯಕಾರಿ ಸಂಪರ್ಕದಿಂದ ರಕ್ಷಿಸುವ ದೃಷ್ಟಿಯಿಂದ ಈ ಎರಡು ಸಾಮ್ರಾಜ್ಯಗಳ ನಡುವೆ ತಟಸ್ಥವಲಯ" ಗಳನ್ನಾಗಿ ಬಿಟ್ಟು ಬಿಡುವುದೇ ಈ ಒಪ್ಪಂದಕ್ಕೆ ಆಧಾರವಾಗಿತ್ತು.

ಆದರೆ ಕ್ರಿಮಿಯನ್ ಯುದ್ಧದಿಂದಾಗಿ ಈ ಮೈತ್ರಿಯುತ ಸಂಬಂಧಗಳು ತೀವ್ರ ಕ್ಷೋಭೆಗೊಳಗಾದವು ಮತ್ತು ಆಗ್ನೇ. ಯುರೋಪಿನಲ್ಲಿ ವಿಫಲಗೊಂಡ ರಷ್ಯಾ ಮಧ್ಯ ಏಷ್ಯಾದಲ್ಲಿ ತನ್ನ ಮುನ್ನುಗ್ಗುನ ನೀತಿಯನ್ನು ಮುಂದುವರಿಸಿತು. ಆಫ್‌ಘಾನಿಸ್ತಾನದ ಗಡಿಯತ್ತ ರಷ್ಯಾದ ತೀವ್ರಗತಿಯ ಮುನ್ನುಗ್ಗುವಿಕೆ ಬ್ರಿಟಿಷ್ ಸರ್ಕಾರಕ್ಕೆ ಕಳವಳಿ ಹಾಗೂ ಭೀತಿಯ ಕಾರಣವಾಗಿ ಪರಿಣಮಿಸಿತು. ಪಂಜಾಬ್ ಹಾಗೂ ಸಂಘಗ್ ಸ್ವಾಧೀನಪಡಿಸಿಕೊಳ್ಳುವಿಕೆಯಿಂದ ಆಫ್‌ಘಾನಿಸ್ತಾನದ ಬೆಟ್ಟಗಳವರೆಗೆ ಬ್ರಿಟಿಷ್ ಸ್ವಾಧೀನ ವ್ಯಾಪಿಸಿತು ಮತ್ತು ಮುಂದೆ ಬಂದಿದ್ದ ರಷ್ಯಾದ ಗಿಡರೇಖೆಗಳು ಹಾಗೂ ಭಾರತದಲ್ಲಿನ ಬ್ರಿಟಿಷ್ ಸಾಮ್ರಾಜ್ಯದ ನಡುವೆಯೇ ಈ ಪ್ರದೇಶ ಇದ್ದಿತು. ಆದರೆ ಆಫ್‌ಘಾನಿಸ್ತಾನದ ಆಗಿನ ಅನಂತರದ ಸ್ಥಿತಿಗತಿಗಳಿಂದ ಬ್ರಿಟಿಷರಿಗೆ ಪರಿಸ್ಥಿತಿ ಪ್ರತಿಕೂಲವಾಗಿ ಪರಿಣಮಿಸಿತು.

ಒಂದನೇ ಆಫ್‌ಗನ್ ಯುದ್ದ ಮುಗಿದ ಮೇಲೆ ಬ್ರಿಟಿಷ್ ಸರ್ಕಾರ ಮತ್ತು ಕಾಬೂಲಿನ ಅಮೀರ ದೋಸ್ತ್ ಮಹಮದ್‌ರ ನಡುವಣ ಸಂಬಂಧ ಒಟ್ಟಿನಲ್ಲಿ ಮೈತ್ರಿಯದ್ದಾಗಿದ್ದಿತು. ಪರ್ಷಿಯನ್ನರು ಹೀರತ್ ಹಾಗೂ ಕಾಂದಹಾರ್‌ಗಳ ಮೇಲೆ ದಾಳಿ ಮಾಡುವ ಭೀತಿಯನ್ನು ಉಂಟುಮಾಡಿದಾಗ ಅಮೀರ ನೆರವಿಗಾಗಿ ಬ್ರಿಟಿಷರೊಡನೆ ಸಮಲೋಚಿಸಿದ ಮತ್ತು 1855 ರಲ್ಲಿ ಒಂದು ಒಪ್ಪಂದವೇರ್ಪಟ್ಟಿತು. ಈ ಒಪ್ಪಂದದ ಪ್ರಕಾರ ಭಾರತ ಸರ್ಕಾರ ಅಮೀರನ ಪ್ರಾಂತವನ್ನು ಪ್ರವೇಶಿಸದಿರಲು ಒಪ್ಪಿಕೊಂಡಿತ್ತು. ಕೆಲವೊಂದು ವಿಷಯಗಳಲ್ಲಿ ಬ್ರಿಟಿಷರ ತೀರ್ಪು ಆಫ್‌ಘಾನಿಸ್ತಾನದ ವಿರುದ್ಧವಾಗಿದ್ದುದರಿಂದ ಇದನ್ನು ಅನ್ಯಾಯದ ಕೃತ್ಯ ಎಂದು ಅಮೀರ ವಿರೋಧಿಸಿದ. ಎರಡನೆಯದಾಗಿ, ಅಮೀರನು ತನ್ನ ಮಗ ಅಬ್ದುಲ್ಲಾ ಜಾನನನ್ನು ತನ್ನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿದ ಮತ್ತು ಈ ವಿಷಯವನ್ನು ಭಾರತ ಸರ್ಕಾರಕ್ಕೆ ತಿಳಿಸಿದಾಗ, ಲಾರ್ಡ್ ನಾರ್ಥ್ ಬ್ರೂಕ್ ಅವನನ್ನು ಅಮೀರನನ್ನಾಗಿ ಅಂಗೀಕರಿಸಲು ಒಪ್ಪಲಿಲ್ಲ. ತಾನು ತನ್ನ ಪ್ರತಿಸ್ಪರ್ಧಿಗಳೊಡನೆ ಹೋರಾಡುವಾಗ ಬ್ರಿಟಿಷ್‌ರಿಂದ ನೆರವು ಗಳಿಸಿದ್ದಂತೆಯೇ ಅಬ್ದುಲ್ಲಾ ಜಾನನೂ ನೆರವು ಪಡೆಯಲಾರ ಎಂಬ ಅಂಶ ಅಮೀರನಿಗೆ ಮನದಟ್ಟಾಯಿತು.

ಇಂಗ್ಲೀಷರ ಪ್ರವೃತ್ತಿಯಿಂದಾಗಿ ತೀವ್ರವಾಗಿ ಬೇಸತ್ತ ಅಮೀರ ರಷ್ಯದವರೊಡನೆ ಉತ್ತಮ ಒಪ್ಪಂದಕ್ಕೆ ಕಾತರಿಸುತ್ತಿದ್ದ ಮತ್ತು ಇಂತ ಸದಾವಕಾಶವನ್ನು ರಷ್ಯ ಸದುಪಯೋಗಪಡಿಸಿಕೊಂಡಿತು. ಆಫ್‌ಘಾನಿಸ್ತಾನ ಮತ್ತು ಆಸಕ್ತಿಯ ವಲಯದಿಂದ ಹೊರತಾದುದೆಂದು ಅದು ಹೇಳುತ್ತಿದ್ದರೂ ಅಮೀರನೊಡನೆ ವ್ಯವಹಾರವನ್ನು ಮುಂದುವರೆಸಿತು ಮತ್ತು ಅವನನ್ನು ತನ್ನ ಪರ ಒಲಿಸಿಕೊಳ್ಳಲು ಯತ್ನಿಸುತ್ತಿತ್ತು.

ರಷ್ಯದ ಪತ್ರ ವ್ಯವಹಾರ ಕ್ರಮೇಣ ಅಧಿಕಗೊಂಡಿತು ಮತ್ತು ರಷ್ಯ ಸರ್ಕಾರದ ನಿಯೋಗಿಗಳೆಂದು ಭಾವಿಸಲಾದ ಚಾರರು ಯಾವಾಗಲೂ ಕಾಬೂಲಿನಲ್ಲಿರುತ್ತಿದ್ದರು.

ಈ ಮಧ್ಯೆ ಬ್ರಿಟನ್ನಿನ ಸರ್ಕಾರದಲ್ಲಿ ಬದಲಾವಣೆಯುಂಟಾಗಿತ್ತು. 1874 ರಲ್ಲಿ ಡಿಸ್ರೇಲಿ, ಗ್ಲಾಡ್‌ಸ್ಟನ್‌ನ ಉತ್ತರಾಧಿಕಾರಿಯಾದ. ಲಾರ್ಡ್ ಸ್ಯಾಲಿಸ್‌ಬರಿ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಆದ. ಎರಡು ವರ್ಷಗಳ ತರುವಾಯ ನಾರ್ಥ್ ಬ್ರೂಥ್‌ನ ಉತ್ತರಾಧಿಕಾರಿಯಾಗ ಲಾರ್ಡ್ ಲಿಟ್ಟನ್ (1876-1880) ವೈಸರಾಯಿಯಾದ. 1877 ರ ರೂಸೋ-ಟರ್ಕಿಷ್ ಯುದ್ಧ ರಷ್ಯ ಹಾಗೂ ಇಂಗ್ಲೆಂಡ್‌ಗಳ ನಡುವಣ ಸಂಬಂಧಗಳನ್ನು ವಿಷಮಗೊಳಿಸಿತು ಮತ್ತು ಇವೆರಡರ ನಡುವಣ ಯುದ್ಧ ಅನಿವಾರ್ಯವಾಗಿ ಕಂಡು ಬಂದಿತು. ಈಗ ಪರಿಸ್ಥಿತಿ ವಿರುದ್ಧ ದಿಕ್ಕಿನತ್ತ ತೀವ್ರವಾಗಿ ಚಲಿಸಲಾರಂಭಿಸಿತು. ಆಫ್ಘಾನಿಸ್ತಾನದಲ್ಲಿ ರಷ್ಯದ ಪ್ರಭಾವವನ್ನು ತಡೆಗಟ್ಟಲು ಒಮ್ಮೆಲೆ ಆಫ್ಘನ್ ವ್ಯವಹಾರಗಳ ಮೇಲೆ ತೀವ್ರವಾದ ಹತೋಟಿ ಹೊಂದಲು ಹೊಸ ಮಂತ್ರಿಮಂಡಲ ತೀರ್ಮಾನಿಸಿತು.

ಕ್ವೆಟ್ಟಾವನ್ನು ಸ್ವಾಧೀನ ಪಡಿಸಿಕೊಂಡುದು ಅದು ಕೈಗೊಂಡ ಪ್ರಪ್ರಥಮ ಕ್ರಮವಾಗಿತ್ತು. ಅದು ಕಾಂದಾಹಾರ್‌ನ ಮಾರ್ಗವನ್ನು ನಿಯಂತ್ರಿಸುತ್ತಿದ್ದುದರಿಂದ ಗಡಿಯಲ್ಲಿ ಮುಖ್ಯ ಆಯಕಟ್ಟಿನ ಸ್ಥಳವನ್ನು ಕ್ರಮಿಸಿತು ಮತ್ತು ಕೈಬರ್ ಕಣಿವೆಯ ಮೂಲಕ ಭಾರತದ ಮೇಲೆ ದಾಳಿ ಮಾಡುವ ಸೈನ್ಯದ ಮೇಲೆ ಪಾರ್ಶ್ವಾಕ್ರಮಣ ಮಾಡಬಹುದಿತ್ತು. ಕಲತ್‌ನ ಖಾನನೊಡನೆ ಒಪ್ಪಂದವೊಂದನ್ನು ಮಾಡಿಕೊಳ್ಳಲಾಯಿತು ಮತ್ತು 1877 ರಲ್ಲಿ ಕ್ವೆಟ್ಟಾವನ್ನು ಹಿಡಿಯಲಾಯಿತು.

ಗಡಿ ಸರಹದ್ದಿನಲ್ಲಿ ರಷ್ಯದ ಚಲನವಲನಗಳ ಬಗ್ಗೆ ನಿರ್ದಿಷ್ಟ ಮಾಹಿತಿ ಸರ್ಕಾರಗಳಿಗೆ ದೊರೆಯುವಂತೆ ಮಾಡಲು ಹೀರತ್‌ನಲ್ಲಿ ಬ್ರಿಟಿಷ್ ಏಜೆಂಟನನ್ನು ನೇಮಿಸಿದುದು ಹೊಸ ಮಂತ್ರಿಮಂಡಲದ ಎರಡನೆ ಕಾರ್ಯವಾಯಿತು. 1876 ರವರೆಗೆ ವೈಸರಾಯ್ ಆಗಿ ಮುಂದುವರೆದ ಲಾರ್ಡ್ ನಾರ್ಥ್ ಬ್ರೂಟ್ ಹಾಗೂ ಅವನ ಕೌನ್ಸಿಲ್‌ನ ಬಹುಪಾಲು ಸದಸ್ಯರು ಈ ನೀತಿಯನ್ನು ವಿರೋಧಿಸಿದರು. ಅಮೀರನು ಇದನ್ನು ವಿರೋಧಿಸುವನು ಮತ್ತು ಮತ್ತೊಂದು ಯುದ್ಧ ನಿಶ್ಚಿತವೆಂದು ಅವರು ಭಾವಿಸಿದ್ದರು. ಲಾರ್ಡ್ ಸ್ಯಾಲಿಸ್‌ಬರಿ ತನ್ನ ಅಭಿಪ್ರಾಯದ ಬಗ್ಗೆ ಒತ್ತಾಯಪಡಿಸುತ್ತಿದ್ದ. ಆಗ ಲಾರ್ಡ್ ನಾರ್ಥ್ ಬ್ರುಟ್ ತನ್ನ ವೈಸರಾಯಿ ಪದವಿಗೆ ರಾಜೀನಾಮೆ ನೀಡಿದ. ಹೊಸ ನೀತಿಯನ್ನು ಕಾರ್ಯಾಚರಣೆಗೆ ತರಲು ಲಾರ್ಡ್ ಲಿಟ್ಟನ್ ವೈಸರಾಯಿಯಾಗಿ ನೇಮಕಗೊಂಡನು. ಅಮೀರನು ಮಂಡಿಸಿದ ಷರತ್ತುಗಳಿಗೆ 1873 ರಲ್ಲಿ ಅಂಗೀಕಾರ ನೀಡಲಾಯಿತು. ಆದರೆ ಯಾವುದೇ ರೀತಿಯ ಬ್ರಿಟಿಷ್ ನಿಯೋಗವನ್ನು ಅಂಗೀಕರಿಸಲು ಅಮೀರ ಒಪ್ಪಲಿಲ್ಲ. ಆಗ ರಷ್ಯದವರಿಂದಲೂ ಅಂಥದೇ ಒಂದು ನಿಯೋಗವನ್ನು ತಾನು ನಿರಾಕರಿಸುವಂತಿಲ್ಲವೆಂಬ ಅಂಶವನ್ನು ಅವರಿಗೆ ಮನದಟ್ಟು ಮಾಡಿಕೊಟ್ಟನು.

ಈ ಮಧ್ಯೆ ರಷ್ಯದೊಡನೆ ಅಮೀರನ ಸಂಬಂಧ ಹೆಚ್ಚು ನಿಕಟಗೊಂಡಿತ್ತು. 1873 ರಲ್ಲಿ ಬ್ರಿಟಿಷರ ಮುಂದೆ ಅಮೀರನು ಮಂಡಿಸಿದ ಷರತ್ತುಗಳಿಗೆ ಒಪ್ಪುವ ಕರಡು ಒಪ್ಪಂದದೊಡನೆ ರಷ್ಯದ ಗವರ್ನರ್ ಮತ್ತು ಅಮೀರನು "ಈಸ್ಟ್ ಇಂಡಿಯ ಕಂಪನಿಯ ಶತ್ರುಗಳ ಶತ್ರುವಾಗಿರಲು ಮಿತ್ರರ ಮಿತ್ರನಾಗಿರಲು" ಒಪ್ಪಿಕೊಂಡನು.

1856 ರಲ್ಲಿ ಪರ್ಷಿಯನ್ನರು ಮತ್ತು ಹೀರತ್‌ನ್ನು ಮುತ್ತಿದಾಗ ಮೈತ್ರಿಯು ಪರೀಕ್ಷೆಗೊಳಗಾಯಿತು. ಬ್ರಿಟಿಷರು ಅಮೀರನಿಗೆ ಶಸ್ತ್ರಾಸ್ತ್ರ ಹಾಗೂ ಆರ್ಥಿಕ ನೆರವು ನೀಡಿದುದು ಮಾತ್ರವೆ ಅಲ್ಲದೆ ಪರ್ಷಿಯಾದ ವಿರುದ್ಧ ಯುದ್ಧ ಘೋಷಿಸಿದರು ಮತ್ತು ಬೊಂಬಾಯಿಯಿಂದ ಒಂದು ಸೇನೆ ಕಳುಹಿಸಿದರು. ಪರ್ಷಿಯನ್ನರು 1857 ರಲ್ಲಿ ಒಂದು ಒಪ್ಪಂದ ಮಾಡಿಕೊಂಡರು.

ದೋಸ್ತ್ ಮಹಮ್ಮದ್ 1862 ರಲ್ಲಿ ಆಕ್ರಮಣಕಾರಿ ನಿಲುವು ತಳೆದು ಆಗ ಸ್ವಾತಂತ್ರ ನಾಯಕನೊಬ್ಬನ ವಶದಲ್ಲಿದ್ದ ಹೀರತ್‌ನ ಮೇಲೆ ದಾಳಿ ಮಾಡಿದಾಗ ಮೈತ್ರಿ ಭಾವನೆ ಮೊದಲಿಗೆ ಕ್ಷೋಭೆಗೊಳಗಾಯಿತು. ಭಾರತ ಸರ್ಕಾರ ಈ ಕ್ರಮವನ್ನು ಒಪ್ಪಲಿಲ್ಲ ಮತ್ತು 1857 ರಿಂದ ಕಾಬೂಲಿನಲ್ಲಿದ್ದ ಮುಸಲ್ಮಾನ್ ನಿಯೋಗವನ್ನು ಹಿಂದಕ್ಕೆ ಕರೆಸಿತು. ದೋಸ್ತ್ ಮಹಮ್ಮದ್ ಈ ಪ್ರತಿಭಟನೆಗೆ ಕಿವಿಗೊಡಲಿಲ್ಲ ಮತ್ತು 1863 ರಲ್ಲಿ ಹೀರತ್‌ನನ್ನು ವಶಪಡಿಸಿಕೊಳ್ಳುವುದರಲ್ಲಿ ಸಫಲನಾದನು.

ಇದಾದ ಅಲ್ಪಕಾಲದಲ್ಲಿಯೇ ದೋಸ್ತ್ ಮಹಮ್ಮದ್ ತನ್ನ ಎಂಬತ್ತನೆ ವಯಸ್ಸಿನಲ್ಲಿ ಕಾಲವಾದ ಮತ್ತು ಅವನ ಹದಿನಾರು ಮಕ್ಕಳಲ್ಲಿ ಉತ್ತರಾಧಿಕಾರಕ್ಕಾಗಿ ಕಾದಾಟ ಅನಿವಾರ್ಯವಾಯಿತು. ಆಫ್ಘಾನಿಸ್ತಾನ ಐದು ವರ್ಷಗಳವರೆಗೆ ವೈಷಮ್ಯ, ಅನೈಕಮತ್ಯಗಳಿಂದ ಕೂಡಿದ ಭ್ರಾತೃಹತ್ಯಾಯುದ್ಧಗಳು ಹಾಗೂ ಪ್ರಾಂತ ವಿಭಜನಾ ಕ್ಷೇತ್ರವಾಗಿ ಪರಿಣಮಿಸಿತು. ಅಂತಿಮವಾಗಿ ದಿವಂಗತ ಅಮೀರನ

ಮೂರನೆ ಮಗ ಹಾಗೂ ಅವನು ಆಯ್ಕೆ ಮಾಡಿದ್ದ ಉತ್ತರಾಧಿಕಾರಿ ಷೇರ್ ಆಡಳಿತದ ಮೈಲಿಗಳನ್ನು 1868 ರಲ್ಲಿ ಪರಾಭವಗೊಳಿಸಿದ ಮತ್ತು ತನ್ನ ಆಳ್ವಿಕೆಯಲ್ಲಿ ಸಂಪೂರ್ಣ ಆಫ್‌ಘಾನಿಸ್ತಾನವನ್ನು ಒಂದುಗೂಡಿಸಿದ.

ಈ ಅವಧಿಯಲ್ಲಿ ಬ್ರಿಟಿಷರ ಸ್ಥಿತಿ ಅತ್ಯಂತ ಕಷ್ಟಕರವಾದುದಾಗಿತ್ತು. ಸರ್ ಜಾನ್ ಲಾರೆನ್ಸ್ (ಗವರ್ನರ್ ಜನರಲ್, 1864-1869) ಕಟ್ಟುನಿಟ್ಟಾದ ತಾಟಸ್ಥ್ಯ ನೀತಿಯನ್ನನುಸರಿಸಿದ ಮತ್ತು ಆಫ್‌ಘಾನಿಸ್ತಾನದ ವಾಸ್ತವ ಆಳ್ವಿಕೆಗಾರರೊಡನೆ ಬ್ರಿಟಿಷ್ ಸರ್ಕಾರದ ಸಂಬಂಧ ಎಂಬ ತರ್ಕ ಬದ್ಧನೀತಿ ಅನುಸರಿಸಿದ. ಇದರಿಂದಾಗಿ ನೆರವು ಬಯಸಿದ ಸ್ಪರ್ಧಿ ಸೋದರರಿಗೆ ಅವನು ನೆರವು ನಿರಾಕರಿಸಿದ ಮತ್ತು ಕಾಬೂಲಿನಲ್ಲಿ ನೆಲೆಗೊಂಡ ಪ್ರತಿಯೊಬ್ಬರಿಗೂ ಅನಂತರ ಅವನು ಮನ್ನಣೆ ನೀಡಿದ. ಷೇರ್ ಆಲಿ ಬ್ರಿಟಿಷ್ ಸರ್ಕಾರದ ನೆರವನ್ನು ಮೂರ ಸಲ ಕೋರಿದ್ದನಾದರೂ ಮೂರು ಸಲವೂ ಅದು ನೆರವು ನೀಡಲು ನಿರಾಕರಿಸಿತು. ಅವನು ಈ ಹೋರಾಟದಲ್ಲಿ ಜಯಶಾಲಿಯಾದನೆಂಬುದು ಸ್ಪಷ್ಟಗೊಳ್ಳುತ್ತಿದ್ದಂತೆಯೇ ತಕ್ಷಣ ಲಾರೆನ್ಸ್ ಅವನಿಗೆ ಮನ್ನಣೆ ನೀಡಿದ ಮತ್ತು ಅವನು ತನ್ನ ಸ್ಥಾನವನ್ನು ಕ್ರೋಢೀಕರಿಸಿಕೊಳ್ಳಲು ನೆರವಾದ ದ್ರವ್ಯ ಸಹಾಯ ನೀಡಿದ.

ಲಾರೆನ್ಸ್ ಅನುಸರಿಸಿದ ನೀತಿಯನ್ನು ಕೆಲವರು "ಪರಿಣತ ಜಡತೆ" ಎಂದು ವಿವರಿಸಿದ್ದರೂ ಮತ್ತೆ ಕೆಲವರು ಅದನ್ನು ಕಟುವಾಗಿ ಖಂಡಿಸಿದ್ದಾರೆ. ತಾನು ಒಬ್ಬ ಶತ್ರುವಿನ ಪಕ್ಷ ವಹಿಸಿದಲ್ಲಿ ಮತ್ತೊಬ್ಬ ರಷ್ಯದ ಅಥವಾ ಪರ್ಷಿಯನ್ ನೆರವು ಬಯಸುವವನು ಎಂಬ ಭೀತಿಯ ಮೇಲೆ ಅವನ ತಾಟಸ್ಥ್ಯ ನೀತಿ ನಿಂತಿತ್ತು. ಇದಕ್ಕೆ ಪ್ರತಿಯಾಗಿ, ಬ್ರಿಟಿಷ್ ಸರ್ಕಾರ ಮಧ್ಯೆ ಪ್ರವೇಶಿಸಲಿ ಅಥವಾ ಇಲ್ಲದಿರಲಿ ಈ ಆಕಸ್ಮಿಕ ಘಟನೆ ಅನಿವಾರ್ಯವಾಗಿತ್ತು ಎಂಬುದು ಕೆಲವರ ಅಭಿಪ್ರಾಯವಾಗಿದೆ. ಬ್ರಿಟಿಷರ ತಾಟಸ್ಥ್ಯ ನೀತಿ ಹೊರಗಡೆಯಿಂದ ಯಾವುದೇ ರೀತಿಯ ಮಧ್ಯ ಪ್ರವೇಶಿಸುವಿಕೆ ಯಾವಾಗಲಾದರೂ ತಲೆದೋರಿದ್ದಲ್ಲಿ ಅದನ್ನು ನ್ಯಾಯಬದ್ಧವಾಗಿ ತಡೆಯಬಹುದಾಗಿತ್ತು, ಎಂಬ ಅಂಶವನ್ನು ಉಪೇಕ್ಷಿಸಲಾಗಿದೆ. ಒಂದು ಪಕ್ಷ ಲಾರೆನ್ಸ್ ಯಾವ ವ್ಯಕ್ತಿಗಾಗಲಿ ಬೆಂಬಲ ನೀಡಿದ್ದಲ್ಲಿ ರಷ್ಯ ಅಥವಾ ಪರ್ಷಿಯಾ ಮತ್ತೊಬ್ಬನಿಗೆ ಸಹಾಯ ಮಾಡುವುದನ್ನು ಯುಕ್ತ ಅಥವಾ ನ್ಯಾಯವಾಗಿ ತಡೆಯಲಾಗುತ್ತಿರಲಿಲ್ಲ. ಒಟ್ಟಿನಲ್ಲಿ ಆಫ್‌ಘನ್ ಅಂತಃ ಕಲಹವನ್ನು ಪ್ರತ್ಯೇಕವಾಗಿರಿಸುವುದರಲ್ಲಿ ಅವನು ಸಫಲನಾದ ಮತ್ತು ಯಾವುದೆ ರೀತಿಯದಾದ ಅಂತರರಾಷ್ಟ್ರೀಯ ಜಟಿಲತೆಯನ್ನು ತಪ್ಪಿಸಿದ.

ಲಾರೆನ್ಸ್ ಪ್ರತಿಸ್ಪರ್ಧಿಯೋರ್ವನಿಗೆ ಕ್ರಿಯಾಶೀಲವಾಗಿ ನೆರವು ನೀಡಿದ್ದು ಆ ಪ್ರತಿಸ್ಪರ್ಧಿ ಅಧಿಕಾರಗಳಿಸುವುದರಲ್ಲಿ ಲಾರೆನ್ಸ್ ಸಹಾಯ ಮಾಡಿದಲ್ಲಿ ಬ್ರಿಟಿಷರು ಆಫ್‌ಘಾನಿಸ್ತಾನದಲ್ಲಿ ಸುಲಭವಾಗಿ ಬೇರೂರೂಬಹುದಿತ್ತ ಮತ್ತು ಆ ಭಾಗದಲ್ಲಿ ರಷ್ಯದ ಪ್ರಭಾವವನ್ನು ಕಿತ್ತೊಗೆಯಬಹುದಿತ್ತು ಎಂದು ಲಾರೆನ್ಸ್‌ನ ಬಗ್ಗೆ ಟೀಕಾಕಾರರು ಹೇಳುವುದರಲ್ಲಿ ಸಂದೇಹವಿಲ್ಲ. ಆದರೆ ಮೊದಲನೆ ಆಫ್‌ಘನ್ ಯುದ್ಧದ ಅನುಭವ ಅಂತ ಯಾವುದೇ ನಿರೀಕ್ಷಣೆಗೆ ಸಂಪೂರ್ಣ ವಿರುದ್ಧವಾಗಿದ್ದುದ್ದತ್ತು ಮತ್ತು ಲಾರೆನ್ಸ್ ತಪ್ಪು ಬೆಂಬಲ ನೀಡಿ, ಅದಕ್ಕಾಗಿ ತೀವ್ರ ದಂಡ ತೆರಬೇಕಾಗಿತ್ತೋ ಏನೋ ಈ ಒಂದು ಅಪಾಯಕಾರಿ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ರಷ್ಯನ್ ಯುದ್ಧದ ಅನಿವಾರ್ಯ ಜಟಿಲತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಲಾರೆನ್ಸ್ ಹೆಚ್ಚು ಎಚ್ಚರಿಕೆಯ ನೀತಿಯನ್ನು ಅನುಸರಿಸಿದ್ದರೂ ಅವನನ್ನು ಮನ್ನಿಸಬಹುದು. ಯಶಸ್ವಿಯಾಗದಿದ್ದರೆ ದೂರದೃಷ್ಟಿಯ ರಾಜಕಾರಣ ಪಟುವೆಂದೂ ಪರಿಜಾತನಾಗಿದ್ದಾರೆ ಆತುರದ ಹಾಗೂ ಮೂರ್ಖತನದ ಸಾಹಸಿಯೆಂದೂ ಹೆಸರಿಸುವಂತ ಪ್ರಯತ್ನ ಇದಾಗಿದ್ದಿತು.

ಲಾರೆನ್ಸ್‌ನ ಈ ನೀತಿ ಪರಿಣಾಮದಲ್ಲಿ ಬ್ರಿಟಿಷರಿಗೆ ಪ್ರತಿಕೂಲಕರವಾಗಿತ್ತು ಎಂಬ ಅಂಶವನ್ನು ಯಾರೂ ನಿರಾಕರಿಸುವಂತಿಲ್ಲ. ಹೊಸ ಅಮೀರ್ ಷೇರ್ ಆಲಿ ತನ್ನ ಜೀವನದ ಅತ್ಯಂತ ಸಂದಿಗ್ಧದ ಪರಿಸ್ಥಿತಿಗಳಲ್ಲಿ ತನಗೆ ನೆರವು ನೀಡಲು ನಿರಾಕರಿಸಿದಂತ ಪಕ್ಷದ ಬಗ್ಗೆ ಮೈತ್ರಿಯುತ ಭಾವನೆ ಹೊಂದಿರುವನೆಂದು ಭಾವಿಸಲಾಗುವುದಿಲ್ಲ. "ಇಂಗ್ಲೀಷರು ತಮ್ಮ ಹಿತಾಸಕ್ತಿಗಳ ಬಗ್ಗೆಯಲ್ಲದೆ ಬೇರೇನನ್ನು ಗಮನಿಸಲಿಲ್ಲ ಎಂಬ ಸತ್ಯವನ್ನು ಷೇರ್ ಅಲಿ ಸುಲಭವಾಗಿ ಮನಗಂಡನು. ಯಾವ ವಿಷ ಆ ಸಮಯದಲ್ಲಿ ಬಲಿಷ್ಠವಾಗಿ ಕಾಣುವುದೋ ಆ ಪಕ್ಷದ ಮಿತ್ರವಾಗಿ ಪರಿವರ್ತಿತರಾಗುವರು ಎಂದು ಅವನು ಕಟುವಾಗಿ ಟೀಕಿಸಿದ.

ಆಫ್‌ಘನ್ ಗಲಭೆಯ ಈ ಸಮಯದಲ್ಲಿಯೇ ರಷ್ಯನ್ನರು ಮಧ್ಯ ಏಷ್ಯಾದಲ್ಲಿ ತಮ್ಮ ಆಕ್ರಮಣಶೀಲ ಸಾಮ್ರಾಜ್ಯ ಷಾಹಿಯನ್ನು ಪುನರಾರಂಭಿಸಿದರು. 864 ರಲ್ಲಿ ಅವರು ಪ್ರಪ್ರಥಮ ಮುನ್ನಡೆಯನ್ನಾರಂಭಿಸಿದರು. 1866 ರಲ್ಲಿ ಬುಖಾರವನ್ನು ಆಶ್ರಿತ ಸಂಸ್ಥಾನದ ಸ್ಥಿತಿಗೊಳಿಸಲಾಯಿತು. ಅದರ ಮುಂದಿನ ವರ್ಷವೇ ಕೇಂದ್ರ ಕಾರ್ಯ ಸ್ಥಾನವಾಗಿ ತಾಷ್ಕೆಂಟನ್ನು ಹೊಂದಿದ್ದ ರಷ್ಯನ್ ತುರ್ಕಿ ಸ್ತಾನದ ನವ

ಪ್ರಾಂತದ ಸರ್ಜನೆಯಾಯಿತು. ಇದು ಬರನ್ ಬರ್ಗ್‌ನಲ್ಲಿದ್ದ ತಮ್ಮ ಮೊದಲ ರಾಣಿಯಿಂದ ಸುಮಾರು ಒಂದು ಸಾವಿರ ಮೈಲುಗಳ ದೂರವಿತ್ತು. 1868 ರಲ್ಲಿ ನಮರ್‌ಖಂಡ್ ರಷ್ಯಾದ ಆಳ್ವಿಕೆಯ ಪ್ರದೇಶದ ವ್ಯಾಪ್ತಿಗೆ ಸೇರಿತು ಮತ್ತು ಐದು ವರ್ಷಗಳ ತರುವಾಯ ಖಾವಾ ಸಹ ಅದರ ವಶವಾಯಿತು.

ಆಫ್‌ಘಾನಿಸ್ಥಾನದತ್ತ ರಷ್ಯದ ತೀವ್ರ ಮುನ್ನಡೆ ಬ್ರಿಟಿಷರಿಗೆ ಕಳವಳಿ ಹಾಗೂ ಆತಂಕಕಾರಿಯಾಗಿತ್ತು. ಈಚಿನ ಘಟನೆಗಳಿಂದ ಬ್ರಿಟಿಷ್‌ರಿಂದ ವಿಮುಖಿಗೊಂಡಿದ್ದ ಹೊಸ ಅಮೀರನನ್ನು ಸಮಾಧಾನ ಪಡಿಸುವುದೇ ಅವರ ಪ್ರಪ್ರಥಮ ಕಾರ್ಯವಾಗಿತ್ತು. ಲಾರೆನ್ಸ್ 1868 ರಲ್ಲಿ ಸೇನೆ ಹಾಗೂ ಧನ ಸಹಾಯವನ್ನು ಕಳುಹಿಸಿದ ಮತ್ತು ಈ ನೆರವು ಲಾರ್ಡ್‌ಮೇಯೋ (1869-72) ಮುಂದುವರಿಸಿದ್ದನು. ಅಮೀರನ ಮೈತ್ರಿಯನ್ನು ಮತ್ತೆ ಪಡೆಯುವಲ್ಲಿ ಈ ಕ್ರಮಗಳು ಎಷ್ಟರ ಮಟ್ಟಿಗೆ ನೆರವಾದುವೆಂದು ಹೇಳುವುದು ಕಷ್ಟ. ಆದರೆ ರಷ್ಯನ್ನರ ಮುನ್ನುಗ್ಗುವಿಕೆ ಆಫ್‌ಘಾನಿಸ್ತನದವರಿಗೆ ತೀವ್ರ ಉಪದ್ರವಕಾರಿಯಾಗಿತ್ತು. ಆದ್ದರಿಂದ ಅಮೀರ ಇಂಗ್ಲೀಷರ ನೆರವು ಪಡೆಯುವುದರ ಬಗ್ಗೆ ಕಾತುರನಾಗಿದ್ದ. ಹಾಗಾಗಿ ಎರಡು ಪಕ್ಷಗಳ ನಡುವಣ ಮರುಮೈತ್ರಿ ಸುಲಭವಾಯಿತು. ಇಂಗ್ಲೀಷರು ಚತುರತೆ ಹಾಗೂ ರಾಜಕಾರಣ ಮಟ್ಟದಲ್ಲಿ ವರ್ತಿಸಿದ್ದಲ್ಲಿ ಅಮೀರನನ್ನು ಸಂಪೂರ್ಣವಾಗಿ ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳಬಹುದಾಗಿತ್ತು. ದುರಾದೃಷ್ಟವಶಾತ್ ಇಂಗ್ಲೀಷರ ರಾಜನೀತಿ ಇಂತ ಸಂದಿಗ್ಧ ಸಮಯದಲ್ಲಿ ವಿಫಲಗೊಂಡಿತು. ಇದು ಅಮೀರನ ಮೈತ್ರಿಗೊಳಿಸುವ ಬದಲು ಅವನನ್ನು ರಷ್ಯದ ಪರವಾಯಿತು.

ಅಮೀರ ಮತ್ತು ಲಾರ್ಡ್ ಮೇಯೋ ನಡುವೆ ಅಂಬಾಲದಲ್ಲಿ 1869 ರಲ್ಲಿ ನಡೆದ ಸಭೆ ಶಾಶ್ವತ ಮೈತ್ರಿಗೆ ಅತ್ಯುತ್ತಮ ಅವಕಾಶ ಒದಗಿಸಿತು. ರಷ್ಯದ ವಿರುದ್ಧ ಇಂಗ್ಲೀಷರು ತನಗೆ ನೆರವು ನೀಡುವ ಹಾಗೂ ತಾನು ಮತ್ತು ತನ್ನ ವಂಶಸ್ಥರನ್ನು ಮಾತ್ರ ಆಫ್‌ಘಾನಿಸ್ತಾನದ ಅಮೀರರನ್ನಾಗಿ ಅಂಗೀಸರಿಸುವ ಭರವಸೆ ನೀಡಿದ್ದಿದ್ದಲ್ಲಿ ಅಪಾರ ಇಂಗ್ಲೀಷರ ಬೇಡಿಕೆಗಳೆಲ್ಲಕ್ಕೂ ಒಪ್ಪುತ್ತಿದ್ದ ಅಥವಾ ಸಮ್ಮತ್ತಿಸುತ್ತಿದ್ದ. ಈ ನಿರ್ದಿಷ್ಟ ಆಶ್ವಾಸನೆಯನ್ನು ನೀಡುವ ಬದಲು ಲಾರ್ಡ್‌ಮೇಯೋ ಅಮೀರನಿಗೆ ಬರೆದ ಪತ್ರದಲ್ಲಿ "ನಿನ್ನ ಶತ್ರುಗಳು ಯಾರೇ ಆಗಲಿ ನಿನ್ನ ಸ್ಥಾನಕ್ಕೆ ಧಕ್ಕೆ ಬರುವಂತೆ ವರ್ತಿಸಿದಲ್ಲಿ ಭಾರತ ಸರ್ಕಾರ ಅದನ್ನು ಸಹಿಸಲಾರದು ಮತ್ತು ಅದು ನಿಮ್ಮ ರಾಜನ ಸರಕಾರವನ್ನು ಬಲಗೊಳಿಸಲು ಪ್ರಯತ್ನಿಸುತ್ತದೆ" ಎಂದು ಮಾತ್ರವೆ ಬಂರೆದಿದ್ದ.

ಅಂಬಾಲದಲ್ಲಿನ ಸಭೆ ಸಂಪೂರ್ಣವಾಗಿ ಯಶಸ್ವಿಯಾಯಿತು ಮತ್ತು ಅಮೀರನು ಬ್ರಿಟಿಷರ ಪರವಾಗಿ ಸಂಪೂರ್ಣವಾಗಿ ಒಲವಿದ್ದ ಎಂದು ಲಾರ್ಡ್ ಮೇಯೋವಿನ ಅನುರಾಗಿಗಳು ಸೂಚಿಸಿದ್ದಾರೆ. ಆದರೆ ನಿರ್ದಿಷ್ಟವಾದ ಭರವಸೆ ಮತ್ತು ಲಾರ್ಡ್‌ಮೇಯೋವಿನ ಪತ್ರದಲ್ಲಿದ್ದಂತ ಸಾಮಾನ್ಯ ಭರವಸೆಗಳ ನಡುವೆ ವ್ಯತ್ಯಾಸವನ್ನು ಗ್ರಹಿಸುವಷ್ಟು ಚತುರಮತಿ ಷೇರ್ ಆಲಿಯಾಗಿದ್ದ, ರಷ್ಯದವರು ಚೀನಾವನ್ನು ವಶಪಡಿಸಿಕೊಂಡಿದ್ದರಿಂದ ಭೀತನಾದ ಅಮೀರ ಮುಂದಿನ ಗವರ್ನರ್ ಜನರಲ್ ಲಾರ್ಡ್ ನಾರ್ಥ್ ಬ್ರೂಕ್‌ನ ಬಳಿಗೆ ತನ್ನ ನಿಯೋಗಿಯನ್ನು 1873 ರಲ್ಲಿ ಕಳುಹಿಸಿದ. ರಷ್ಯ ಅಥವಾ ಅದರ ಯಾವುದೇ ರಕ್ಷಿತ ಅಥವಾ ಆಶ್ರಿತ ರಾಜ್ಯ ಅಮೀರನ ಪ್ರಾಂತಗಳ ಮೇಲೆ ದಾಳಿ ಮಾಡಿದಲ್ಲಿ ಬ್ರಿಟಿಷ್ ಸರ್ಕಾರ ಅಮೀರನಿಗೆ ಶಸ್ತ್ರಾಸ್ತ್ರ ಹಾಗೂ ಆರ್ಥಿಕ ರೂಪದಲ್ಲಿ ನೆರವು ನೀಡುವುದು ಮಾತ್ರವಲ್ಲದೆ, ಅವಶ್ಯವಾದಲ್ಲಿ ಸೇನಾಪಡೆಗಳನ್ನು ಕಳುಹಿಸಬೇಕೆಂಬ ಲಿಖಿತ ಆಶ್ವಾಸನೆಗಾಗಿ ಈ ನಿಯೋಗಿಯನ್ನು ಕಳುಹಿಸಿದ.

ಲಾರ್ಡ್ ನಾರ್ಥ್ ಬ್ರೂಕ್ (1872-76) ಪರಿಸ್ಥಿತಿಯ ಬಗ್ಗೆ ಯುಕ್ತಿಯ ನಿಲುವು ತಳೆದ ಮತ್ತು ಅಮೀರನ ಬೇಡಿಕೆಗಳನ್ನು ಅಂಗೀಕರಿಸಲು ಸಿದ್ಧನಾಗಿದ್ದ. ಐದು ವರ್ಷಗಳ ಮೊದಲು, ಭಾರತದ ವೈಸರಾಯ್ ತನ್ನ ಸ್ವಂತ ಜವಾಬ್ದಾರಿಯ ಮೇಲೆ ಅಂತಹ ಭರವಸೆಯನ್ನು ನೀಡಿ, ತನ್ನ ಕಾರ್ಯ ವಿವರವನ್ನು ಅಸಮರ್ಥನೆಗಾಗಿ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸುತ್ತಿದ್ದ. ಆದರೆ ಭಾರತ ಹಾಗೂ ಇಂಗ್ಲೆಂಡ್‌ಗಳ ನಡುವಣ ನೇರ ಟೆಲಿಗ್ರಾಫ್ ವ್ಯವಸ್ಥೆ ಗವರ್ನರ್ ಜನರಲ್ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್‌ಗಳ ನಡುವಣ ಸಂಬಂಧದಲ್ಲಿ ಮಹತ್ತರ ಬದಲಾವಣೆಗಳನ್ನು ಉಂಟು ಮಾಡಿತ್ತು. 1873 ರ ಜುಲೈ 24 ರಂದು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸಿದ ಒಂದು ತಂತಿ ಸಂದೇಶದಲ್ಲಿ ಈ ರೀತಿ ತಿಳಿಸಿದ. "ಎಲ್ಲ ಬಾಹ್ಯ ಸಂಬಂಧಗಳಲ್ಲಿಯೂ ಅಮೀರನು ನಮ್ಮ ಸಲಹೆಯನ್ನು ಸಂಪೂರ್ಣವಾಗಿ ಅಂಗೀಕರಿಸಿ, ಅವರಂತೆ ವರ್ತಿಸಿದಲ್ಲಿ ನಾವು ಅವನಿಗೆ ಧನ ಹಾಗೂ ಶಸ್ತ್ರಾಸ್ತ್ರ ನೆರವು ಮತ್ತು ಅವಶ್ಯವಾದಲ್ಲಿ ವಿನಾ ಕಾರಣದ ದಾಳಿಯನ್ನು ಹಿಮ್ಮೆಟ್ಟಿಸುವುದರಲ್ಲಿ ಸೇನಾ ನೆರವನ್ನು ನೀಡುವುದು ಅವಶ್ಯಕತೆಯ ಬಗ್ಗೆ ತೀರ್ಮಾನಕ್ಕೆ ನಾವೇ ನ್ಯಾಯವರ್ತಿಗಳು".

ಗ್ಲಾಡ್‌ಸ್ಟನ್‌ನ ಮಂತ್ರಿಮಂಡಲ ರಷ್ಯದೊಡನೆ ವೈಮನಸ್ಯ ಹೊಂದಲು ಇಚ್ಛಿಸಿದಿದ್ದುದರಿಂದ ಸೆಕ್ರೆಟರಿ ಆಫ್ ಸ್ಟೇಟ್ ಈ ಸಲಹೆಯನ್ನು ನಿರಾಕರಿಸಿದ ಮತ್ತು ಮಧ್ಯ ಏಷ್ಯಾದಲ್ಲಿನ ರಷ್ಯದ ವಿಸ್ತರಣೆ ಆಫ್‌ಘಾನಿಸ್ತಾನ ಅಥವಾ ಭಾರತದ ಸುಭದ್ರತೆ ಮತ್ತು

ಸುರಕ್ಷಿತತೆಗೆ 'ಅಪಾಯಕಾರಿ' ಎಂದು ಅದು ಪರಿಗಣಿಸಲಿಲ್ಲ. ತನ್ನ ತಾಯ್ನಾಡಿನ ಸರ್ಕಾರದ ಸೂಚನೆಯ ಮೇರೆಗೆ ಅಫ್ಘಾನ್ ನೀತಿ 'ಆಫ್‌ಘಾನಿಸ್ತನದಲ್ಲಿ ನಮ್ಮ ನಿರ್ಧಾರಿತ ನೀತಿಯನ್ನು ಮುಂದುವರೆಸಿದವು' ಎಂಬುದರ ಬಗ್ಗೆ ಮಾತ್ರ ಭರವಸೆ ನೀಡಿದ. ರಷ್ಯದ ವಿರುದ್ಧ ತನಗೆ ರಕ್ಷಣೆ ನೀಡುವುದಕ್ಕೆ ಇಂಗ್ಲೀಷಿನವರಿಗೆ ಮನಸ್ಸಿಲ್ಲದೆ ಇರುವುದೇ ಇದಕ್ಕೆ ಕಾರಣವೆಂಬುದನ್ನು ಅಮೀರ ಗ್ರಹಿಸಿದ.

ಇದೇ ಸಮಯದಲ್ಲಿ ನಡೆದ ಮತ್ತೆರಡು ಘಟನೆಗಳು ಅಮೀರ ಮತ್ತಷ್ಟು ವಿಮುಖನಾಗಲು ಕಾರಣವಾದವು. ಪಿಯಿಸ್ತಾನ್ ಗಡಿಗಳ ಬಗ್ಗೆ ಪರ್ಷಿಯಾ ಹಾಗೂ ಆಫ್‌ಘಾನಿಸ್ತಾನಗಳ ಬೇಡಿಕೆಗಳಿಗೆ ಮಧ್ಯಸ್ಥಿಕೆವಹಿಸುವ ಜವಾಬ್ದಾರಿಯನ್ನು ಬ್ರಿಟಿಷ್ ಸರ್ಕಾರ ಅವಿವೇಕದಿಂದ ಒಪ್ಪಿಕೊಂಡಿತ್ತು. ಜನರಲ್ ತನ್ನ ಅಧಿಕಾರ ಸ್ಟೋಲಿತೋಫ್‌ನನ್ನು 1878 ರ ಜೂನ್‌ನಲ್ಲಿ ಕಳುಹಿಸಿದ. ಲಾರ್ಡ್ ಲಿಟ್ಟನ್ ಈ ಷರತ್ತುಗಳನ್ನು ಅಂಗೀಕರಿಸಲು ಸಿದ್ಧನಾಗಿದ್ದ. ಈ ನಿಯೋಗಿಯೊಡನೆ ತಾಷ್ಕೆಂಡನಿಂದ ಆಫ್‌ಘನ್ನ ಗಡಿಯತ್ತ ಮೂರು ದಂಡವ್ಯೂಹ ಪಡೆಗಳನ್ನು ಕಳುಹಿಸಲಾಯಿತು. ಆಫ್‌ಘಾನಿಸ್ತಾನವನ್ನು ಪ್ರವೇಶಿಸಿದಂತೆ ಸ್ಟೋಲಿಲೋಫನಿಗೆ ಅಮೀರನು ಆಜ್ಞಾಪಿಸಿದ. ಆದರೆ ಅಮೀರನ ಆಜ್ಞೆಗಳನ್ನು ನಿರ್ಲಕ್ಷಿಸಿದ ಸ್ಟೋಲತೋಫ್ ಜುಲೈ 22 ರಂದು ಕಾಬೂಲನ್ನು ತಲುಪಿದ. ಅಲ್ಲಿ ಅಮೀರನೊಡನೆ ಸಂಧಾನ ನಡೆಸಿದ ಮತ್ತು ವಿದೇಶಿ ಆಕ್ರಮಣದ ವಿರುದ್ಧ ಆತನಿಗೆ ನೆರವಿನ ಆಶ್ವಾಸನೆಯಿತ್ತ.

ಕಾಬೂಲಿನಲ್ಲಿ ರಷ್ಯದ ನಿಯೋಗಗಳಿಗೆ ನೀಡಿದ ಸ್ವಾಗತದಿಂದ ಅಮೀರ ಹಾಗೂ ಬ್ರಿಟಿಷ್ ಸರ್ಕಾರಗಳ ನಡುವಣ ಸಂಬಂಧ ತೀಕ್ಷ್ಣಗೊಂಡಿತು. ಇಂಗ್ಲೀಷ್ ನಿಯೋಗವೊಂದನ್ನು ಕಾಬೂಲಿಗೆ ಕಳುಹಿಸುವುದಾದರೆ ಲಿಟ್ಟನ್ ಅಮೀರನಿಗೆ ತನ್ನ ತಾಯ್ನಾಡಿನ ಸರ್ಕಾರದ ಪೂರ್ವಾನುಮತಿಯೊಡನೆ ತಿಳಿಸಿದ. ಈ ನಿಯೋಗವನ್ನು ಲಿಟ್ಟರ್ ಕಣಿವೆಯ ಮೂಲಕ ಕಲುಹಿಸಿಲಾಗಿತ್ತು. ಆದರೆ ಸೆಪ್ಟೆಂಬರ್ 21 ರಂದು ಆಲಿ ಮಸೀದಿಯ ಬಳಿ ಇದನ್ನು ತಡೆಯಲಾಯಿತು. 20 ರ ವೇಳೆಗೆ ನಿಯೋಗವನ್ನು ಅಂಗೀಕರಿಸಿ ಉತ್ತರ ಕಳುಹಿಸದಿದದ್ರೆ ಯುದ್ಧ ಮಾಡುವುದಾಗಿ ಲಿಟ್ಟನ್ ನವೆಂಬರ್ 2 ರಂದು ತನ್ನ ಅಂತ್ಯ ನಿರ್ಧಾರ ತಿಳಿಸಿದ. ರಷ್ಯದ ನೆರವಿಗಾಗಿ ಅಮೀರ ಮೊರೆಯಿಟ್ಟ. ಈ ಮಧ್ಯೆ ಬರ್ಲಿನ್‌ನ ಒಪ್ಪಂದ ಯುರೋಪಿನ ಸಮಸ್ಯೆಯನ್ನು ಪರಿಹರಿಸುತ್ತ ಮತ್ತು ಈ ಒಪ್ಪಂದವನ್ನು ಉಲ್ಲಂಘಿಸದೆ, ಈ ಒಪ್ಪಂದದ ಸಕಲ ಅನುಕೂಲಗಳನ್ನು ಕಳೆದುಕೊಂಡು ಇಂಗ್ಲೀಷ್‌ರೊಡನೆ ರಷ್ಯನ್ನರು ಯುದ್ಧ ಮಾಡುವಂತಿರಲಿಲ್ಲ. ಹಾಗಾಗಿ ಬ್ರಿಟಿಷರೊಡನೆ ಶಾಂತಿ ಮಾಡಿಕೊಳ್ಳಲು ಅಮೀರನಿಗೆ ರಷ್ಯದ ಗವರ್ನರ್ ಜನರಲ್ ಕಾಫ್‌ಮನ್ ಸೂಚಿಸಿದ. ಬ್ರಿಟಿಷರ ಹಗೆತನವನ್ನು ಹೆಚ್ಚಿಸಿಕೊಳ್ಳಲು ರಷ್ಯನ್ನರು ಷೇಕ್ ಆಲಿಯನ್ನು ಪ್ರೇರೇಪಿಸಿದ್ದರು. ಆದರೆ ಸಂದಿಗ್ಧದ ಪರಿಸ್ಥಿತಿಯಲ್ಲಿ ರಷ್ಯನ್ನರು ಅವನ ಕೈಬಿಟ್ಟರು.

ನವೆಂಬರ್ 20 ರಂದು ಬ್ರಿಟಿಷ್ ಪಡೆಗಳು ಆಫ್‌ಘಾನಿಸ್ತಾನದ ಮೇಲೆ ದಾಳಿ ಮಾಡಿದವು. ಕುರ್ರಮ್ ಕಣಿವೆಯನ್ನು ರಾಬರ್ಟ್ಸ್ ಜೀವಿಸಿದ ಮತ್ತು ಕಾಂದಾಹಾರವನ್ನು ಜನರಲ್ ಸ್ಟೀವರ್ಟ್ ಸ್ವಾದೀನಪಡಿಸಿಕೊಂಡ. ಡಿಸೆಂಬರ್‌ನಲ್ಲಿ ಷೇಕ್ ಆಲಿ ತುರ್ಕಿಸ್ತಾನಕ್ಕೆ ಹಿಂದಿರುಗಿದ ಹಾಗೂ ಅಲ್ಪಾವಧಿಯಲ್ಲಿಯೇ ಕಾಲವಾದ. ಇವನ ಮಗ ಯಾಕೂಬೊ ಬ್ರಿಟಿಷರೊಡನೆ ಸಂಧಾನವನ್ನಾರಂಭಿಸಿದ ಮತ್ತು 1879 ರ ಮೇ 26 ರಂದು ಗಂಡಮಕ್ ಒಪ್ಪಂದ ಏರ್ಪಟ್ಟಿತು.

ಈ ಒಪ್ಪಂದ ಬ್ರಿಟಿಷರಿಗೆ ಅತ್ಯಂತ ಅನುಕೂಲಕರವಾದುದಾಗಿತ್ತು ಮತ್ತು ಅವರ ಷರತ್ತುಗಳೆಲ್ಲವನ್ನು ಅಂಗೀಕರಿಸಲಾಯಿತು. ಕಾಬೂಲಿನಲ್ಲಿ ಶಾಶ್ವತವಾಗಿ ಬ್ರಿಟಿಷ್ ನಿಯೋಗವೊಂದನ್ನು ಸ್ಥಾಪಿಸಲು ಮತ್ತು ವೈಸರಾಯ್‌ನ ಸಲಹೆಯ ಮೇಲೆ ತನ್ನ ವಿದೇಶಿ ನೀತಿಯನ್ನು ರೂಪಿಸಲು ಅಮೀರ ಒಪ್ಪಿಕೊಂಡ. ಕುರ್ರಮ್, ಮಿಷಿನ್ ಮತ್ತು ಸಿಬಿ ಜಿಲ್ಲೆಗಳನ್ನು ಬ್ರಿಟಿಷರಿಗೆ ಬಿಟ್ಟು ಕೊಟ್ಟನು. ಆಫ್‌ಘಾನಿಸ್ತಾನದಿಂದ ಇತರ ವಿದೇಶೀ ಪ್ರಭಾವಗಳನ್ನು ಹೊರಹಾಕಿದುದು ಮತ್ತು ಅಲ್ಲಿ ಶಾಶ್ವತವಾಗಿ ಬ್ರಿಟಿಷ್ ಪ್ರಭಾವವನ್ನು ರಕ್ಷಿಸುವ ರೀತಿಯಲ್ಲಿ ಆ ವರ್ಷ ಗಡಿಯನ್ನು ಆಕ್ರಮಿಸಿಕೊಂಡಿದ್ದುದು - ಇವೆರಡು ಧ್ಯೇಯಗಳನ್ನು ಬ್ರಿಟಿಷ್ ಸರ್ಕಾರ ಸಾಧಿಸಿತೆಂದು ಗಂಡಮಾಕ್ ಒಪ್ಪಂದದ ಬಗ್ಗೆ ಲಿಟ್ಟನ್ ಅಭಿಪ್ರಾಯಪಟ್ಟಿದ್ದಾನೆ. ಈ ಒಪ್ಪಂದ ನಮ್ಮ ಭಾರತ ಸಾಮ್ರಾಜ್ಯಕ್ಕೆ ಕ್ರಮಬದ್ಧವಾದ ಹಾಗೂ ಪರಿಪೂರ್ಣ ಗಡಿಯನ್ನು ಒದಗಿಸಿತು ಎಂದು ಲಾರ್ಡ್ ಬೇಕನ್ಸ್ ಫೀಲ್ಡ್ ಘೋಷಿಸಿದ.

ಈ ಒಪ್ಪಂದದ ನಿಯಮಗಳಿಗೆ ಅನುಸಾರವಾಗಿ, ಬ್ರಿಟಿಷ್ ನಿಯೋಗಿ ಕ್ಯಾವಗ್ನೇರಿ ಜುಲೈ 24 ರಂದು ಕಾಬೂಲನ್ನು ತಲುಪಿದ. ಆದರೆ ಸೆಪ್ಟೆಂಬರ್ 3 ರಂದು ದಂಗೆಕೋರ ಪಡೆಗಳು ಅವನನ್ನು ಕೊಂದವು. ಅಮೀರನೇ ಈ ಹತ್ಯೆಯಲ್ಲಿ ಪಾಲುದಾರನಾಗಿದ್ದಲ್ಲಿ ಇದರಲ್ಲಿ ಎಷ್ಟರ ಮಟ್ಟಿಗೆ ಅವನ ಪ್ರಭಾವವಿದ್ದಿತು ಎಂಬುದು ನಿರ್ಧಾರವಾಗಿಲ್ಲ. ವ್ಯವಹಾರ ನಿರ್ವಹಣೆಯಲ್ಲಿ ಕ್ಯಾವಗ್ನೆರಿಯ ಚತುರತೆ ಅಷ್ಟೇನೂ ಉತ್ತಮವಾಗಿರಲಿಲ್ಲ ಎಂಬುದು ನಿಸ್ಸಂಶಯವಾದುದು ಮತ್ತು ಅವನನ್ನು ಹಿಂದಕ್ಕೆ ಕಳುಹಿಸಬೇಕೆಂಬುದು ಅಮೀರನ ಇಚ್ಛೆಯಾಗಿದ್ದಿತು ಎಂಬುದೂ ಅಷ್ಟೇ ಸತ್ಯ.

ಈ ಭಯಂಕರ ಕೊಲೆ ಹಗೆತನಗಳ ಪುನರಾರಂಭಕ್ಕೆ ಕಾರಣವಾಯಿತು. ಅಕ್ಟೋಬರ್ 7 ರಂದು ರಾಬರ್ಟ್ಸ್ ಕಾಬೂಲನ್ನು ಆಕ್ರಮಿಸಿದ. ಅಮೀರನು ಬ್ರಿಟಿಷರ ಪಕ್ಷವನ್ನು ಸೇರಿದ್ದರೂ ಅವನು ಅಧಿಕಾರದಲ್ಲಿರಲು ಅನರ್ಹನೆಂದು ಭಾವಿಸಿ ಭಾರತಕ್ಕೆ ಕಳುಹಿಸಲಾಯಿತು. ರಷ್ಯದ ಆಶ್ರಯದಲ್ಲಿ ಸಮರ್ ಖಂಡ್‌ನಲ್ಲಿದ್ದ ಶರಣಾರ್ಥಿ, ಷೇರ್ ಅಲಿಯ ಸೋದರ ಸಂಬಂಧಿ ಅಬ್ದುಲ್ ಅಹಮದನೊಡನೆ ಸಮಾಲೋಚನೆಯನ್ನು ಆರಂಭಿಸಲಾಯಿತು.

ಆದರೆ ಈ ಸಮಾಲೋಚನೆಗಳು ಕೊನೆಗೊಳ್ಳುವ ಮೊದಲೇ ಲಾರ್ಡ್ ಚೀಕನ್ಸ್ ಫೀಲ್ಡ್‌ನ ಸರ್ಕಾರದ ಸ್ಥಾನದಲ್ಲಿ ಗ್ಲಾಡ್ ಸ್ಟನ್‌ನ ನಿರ್ಧಾರ ಬಂದಿತು. ಹೊಸ ಸರ್ಕಾರ ತನ್ನ ಪೂರ್ವಾಧಿಕಾರಿಯ ನೀತಿಯನ್ನು ರದ್ದುಗೊಳಿಸಲು ನಿರ್ಧರಿಸಿತು ಮತ್ತು ಗಂಡಮಕ್‌ನ ಒಪ್ಪಂದದಿಂದ ಬಂದಿದ್ದ ಜಿಲ್ಲೆಗಳನ್ನು ಬಿಟ್ಟು ಬರಲು ಸಹ ನಿರ್ಧರಿಸಿತು. ಈ ಹೊಸ ನೀತಿಯನ್ನು ಕಾರ್ಯಾಚರಣೆಗೆ ತರಲು ಲಾರ್ಡ್ ಲಿಪ್ಪನ್‌ನನ್ನು (1880-1884) ಕಳುಹಿಸಲಾಯಿತು. ಲಾರ್ಡ್ ಲಿಪ್ಪನ್ ಬಂದ ಅಲ್ಪ ಅವಧಿಯಲ್ಲಿಯೇ (1880 ರ ಜೂನ್ 8) ಕಾಂದ್‌ಹಾರ್‌ನಲ್ಲಿನ ಬ್ರಿಟಿಷ್ ಪಡೆಯನ್ನು ಷೇರ್ ಆಲಿಯ ಪುತ್ರಿ ಆಯೂಬ್ ಖಾನ್ ಮೈವಾಂಡ್‌ನಲ್ಲಿ ತೀವ್ರವಾಗಿ ಸೋಲಿಸಿದನು (1880 ರ ಜುಲೈ) ರಾಬರ್ಟ್ ಕಾಬೂಲಿನಿಂದ ಕಾಂದ್‌ಹಾರ್‌ಗೆ ದಂಡೆತ್ತಿ ಬಂದು, ಆಯೂಚನ ಸೇನೆಗಳನ್ನು ಸಂಪೂರ್ಣವಾಗಿ ಸೋಲಿಸಿದನು. ಈ ಕಾರ್ಯದಲ್ಲಿ ಅಬ್ದುಲ್ ರೆಹಮನ್ ಇವನಿಗೆ ಬಹುಮಟ್ಟಿಗೆ ಸಹಾಯ ಮಾಡಿದ.

ಭಾರತದಲ್ಲಿನ ಪರಿಸ್ಥಿತಿಯ ಅಧ್ಯಯನ ನಡೆಸಿದ ತರುವಾಯ ಲಾರ್ಡ್ ಲಿಪ್ಪನ್ ತನ್ನ ಪೂರ್ವಾಧಿಕಾರಿಗಳ ನೀತಿಯನ್ನು ಮುಂದುವರಿಸಲು ನಿರ್ಧರಿಸಿದ ಮತ್ತು ಆಬ್ದುಲ್ ರೆಹಮಾನನೊಡನೆ ಒಂದು ಸಂಧಾನ ಮಾಡಿಕೊಂಡ. ಹೊಸ ಅಮೀರನು ವಾರ್ಷಿಕ ನೆರವಿಗೆ ಪ್ರತಿಯಾಗಿ ತನ್ನ ವಿದೇಶಿ ನೀತಿ ಭಾರತ ಸರ್ಕಾರದಿಂದ ನಿಯಂತ್ರಿತಗೊಳ್ಳಲು ಅಂಗೀಕರಿಸಿದ. ಗಂಡಮನ್‌ನ ಒಪ್ಪಂದದಿಂದ ಬಿಟ್ಟುಕೊಡಲಾಗಿದ್ದ ಜಿಲ್ಲೆಗಳನ್ನು ಬ್ರಿಟಿಷರೇ ಉಳಿಸಿಕೊಂಡರು. ಆಫ್‌ಘಾನಿಸ್ತಾನದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಲು ಬಯಸಿದ ರಷ್ಯ ಹಾಗೂ ಇಂಗ್ಲೆಂಡ್ ಈ ಎರಡು ವೈರಿ ರಾಷ್ಟ್ರಗಳ ಬಯಕೆಯ ಫಲವೇ ಎರಡನೆ ಆಫ್‌ಘನ್ ಯುದ್ಧವಾಯಿತು. ಆಫ್‌ಘಾನಿಸ್ತಾನದ ಮೂಲಕ ಭಾರತದ ಮೇಲೆ ರಷ್ಯದವರು ದಾಳಿ ಮಾಡಬಹುದೆಂದು ಇಂಗ್ಲೀಷ್ ರಾಜತಂತ್ರಜ್ಞರು ಭೀತರಾಗಿದ್ದರು. ಇಂತ ಒಂದು ಉಪದ್ರವ ವಾಸ್ತವವಾದುದಾಗಿತ್ತು ಎಂಬುದು ಸಂದೇಹದ ವಿಷಯವಾಗಿದೆ. ಆಫ್‌ಘಾನಿಸ್ತಾನದ ಮೈತ್ರಿಯಿಂದ ಕೂಡಿದ ರಷ್ಯ ಬ್ರಿಟಿಷರ ಮೇಲೆ ಸಾಕಷ್ಟು ಬಲ ಪ್ರಯೋಗಿಸಬಹುದು ಮತ್ತು ಯುರೋಪಿಯನ್ ಸಮರದಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರೊಡನೆ ಯುದ್ಧ ಮಾಡುವುದು ಮಾತ್ರವೇ ಅಲ್ಲದೆ ಯುರೋಪಿನಲ್ಲಿ ಬ್ರಿಟಿಷರಿಂದ ರಿಯಾಯಿತಿಗಳನ್ನು ಪಡೆಯಲು ತಮ್ಮ ಸ್ಥಾನವನ್ನು ಒಂದು ಸಾಧನೋಪಾಯವನ್ನಾಗಿ ಬಳಸಬಹುದೆಂಬುದರಲ್ಲಿ ಸಂದೇಹವಿಲ್ಲ. ಹೀಗಾಗಿ ಆಫ್‌ಘಾನಿಸ್ತಾನ ಯುರೋಪಿನ ಸ್ವಾರ್ಥಸಾಧನೆಯಲ್ಲಿನ ಒಂದು ದುರ್ಬಲ ರಾಷ್ಟ್ರವಾಗಿತ್ತು. ನತದೃಷ್ಟ ಷೇಕ್ ಆಲಿ ತಾನು ಜವಾಬ್ದಾರನಲ್ಲದಂಥಾ ತನ್ನ ಹತೋಟಿಗೆ ಒಳಪಡದಂಥ ಪರಿಸ್ಥಿತಿಗಳಿಗೆ ನಿಲುಕಿದ ವ್ಯಕ್ತಿಯಾಗಿದ್ದ. ಬರ್ಲಿನ್‌ನ ಒಪ್ಪಂದವೇ ಷೇಕ್ ಆಲಿಯ ಅಧಃಪತನಕ್ಕೆ ಮೂಲಕಾರಣವೆಂದು ಹೇಳುವುದು ಆಶ್ಚರ್ಯಕರವಾಗಿ ತೋರಬಹುದು.

ಇಂಗ್ಲೆಂಡ್ ಹಾಗೂ ರಷ್ಯ ಇವೆರಡು ರಾಷ್ಟ್ರಗಳ ಆಫ್‌ಘನ್ ನೀತಿ, ಆಕ್ರಮಣಶಾಲಿ ಸಾಮ್ರಾಜ್ಯ ನೀತಿಯ ಮೇಲೆ ಆಧಾರತವಾದ ಸ್ವಾರ್ಥಪರ ಧ್ಯೇಯಗಳಿಂದ ನಿಯಂತ್ರಿತವಾಗಿತ್ತು. ಲಿಟ್ಟನ್ ಹಾಗೂ ಸ್ಯಾಲಿಸ್ ಬಲಿಗಳ ಮುನ್ನುಗ್ಗುವ ನೀತಿಯನ್ನು ಈ ದೃಷ್ಟಿಕೋನದಿಂದ ಮಾತ್ರ ನಿರ್ಮಿಸಬಹುದು. ಬ್ರಿಟಿಷರಿಗೆ ಆಫ್‌ಘಾನಿಸ್ತಾನದಲ್ಲಿ ಬಂದು ನೆಲೆಯೂರಲು ಸುಭದ್ರವಾದ ಸ್ಥಾನಗಳಿಕೆ ಹಾಗೂ ತಮ್ಮ ಪ್ರಭಾವದ ವಲಯದಲ್ಲಿ ರಷ್ಯದ ಉಪದ್ರವವನ್ನು ನಿರ್ಮೂಲನ ಮಾಡುವ ಬ್ರಿಟಿಷ್ ರಾಜತಂತ್ರದ ಪ್ರಧಾನ ಧ್ಯೇಯ ಸಾಧಿಸಿತ್ತು.

ಆಫ್‌ಘಾನಿಸ್ತಾನದಲ್ಲಿ ಬ್ರಿಟಿಷ್ ಪ್ರಭಾವದ ಸ್ಥಾಪನೆಯಿಂದಾಗಿ ರಷ್ಯನ್ನರ ಆಗ್ರಗಾಮಿ ನೀತಿಗೆ ತೀವ್ರವಾದ ಧಕ್ಕೆಯುಂಟಾಯಿತು. ಆದರೆ ತಾವು ಹಿಂಜರಿದುದನ್ನು ಸರಿದೂಗಿಸಲೆಂಬಂತೆ ರಷ್ಯನ್ನರು ತಮ್ಮ ಗಡಿ ರಾಜ್ಯಗಳನ್ನು ಮುಂದೆ ತಳ್ಳಲಾರಂಭಿಸಿದರು. ಬ್ರಿಟಿಷ್ ಸರ್ಕಾರದ ಭೀತಿಯನ್ನು ರಷ್ಯದ ವಿದೇಶಿ ಕಾರ್ಯಾಲಯ ಸಮೃದ್ಧವಾದ ಶಾಂತ ಧ್ಯೇಯಗಳಿಂದ ಸದಾಕಾಲ ಉಪಶಮನಗೊಳಿಸುತ್ತಿತ್ತು ಮತ್ತು ಆಕ್ರಮಣ ಕಾರ್ಯವನ್ನು ಸ್ಥಳೀಯ ಅಧಿಕಾರಿಗಳ ಅನಧೀಕೃತ ಕಾರ್ಯವೆಂದಾಗಲಿ ಸ್ಥಳೀಯ ಸ್ಥಿತಿಗಳಿಗೆ ಅನುಗುಣವಾಗಿಯೆಂದಾಗಲಿ ವಿವರಿಸುತ್ತಿತ್ತು. 1884 ರಲ್ಲಿ ರಷ್ಯನ್ನರ ಸ್ವಾಧೀನಕ್ಕೆ ಸೇರಿದಾಗ ಬ್ರಿಟಿಷರು ಪ್ರಬಲ ವಿರೋಧಿ ವ್ಯಕ್ತಪಡಿಸಲಾರಂಭಿಸಿದರು. ರೂಸೋ-ಆಫ್‌ಘನ್ ಗಡಿಗಳನ್ನು ನಿರ್ಣಯಿಸುವ ವಸ್ತುವನ್ನು ರಷ್ಯನ್ನರು ಒಪ್ಪಿಕೊಂಡಿದುದಷ್ಟೇ ಇದರ ಫಲಿತಾಂಶವಾಯಿತು. ಎರಡು ಕಡೆಗಳಲ್ಲಿಯೂ ಕಮೀಷನರ್‌ಗಳನ್ನು ನೇಮಕ ಮಾಡಲಾಯಿತು. ಆದರೆ ರಷ್ಯದ ಕಮೀಷನ್‌ರ ಒಂದಲ್ಲ ಒಂದು ಕಾರಣದಿಂದ

ವಿಳಂಬ ಮಾಡಲಾರಂಭಿಸಿದ. ಸಾಧಿತ ಅಂಶಗಳ ಬಗ್ಗೆ ತಮ್ಮ ಬೇಡಿಕೆಗಳನ್ನು ಪರಿವರ್ತಿಸಲೋಸುಗ ವಿವಾದಕ್ಕೊಳಗಾಗಿದ್ದ ಪ್ರಾಂತಗಳನ್ನು ಈ ಮಧ್ಯೆ ರಷ್ಯನ್ ಪಡೆಗಳು ಆಕ್ರಮಿಸಲಾರಂಭಿಸಿದವು.

ಪಂಜ್‌ದೇಯಿಂದ ಆಫ್‌ಘನ್ನರು 1885 ರ ಮಾರ್ಚ್ 30 ರಂದು ಒಟನಿ ರಷ್ಯನ್ನರು ಅದನ್ನು ಆಕ್ರಮಿಸಿದಾಗ ಪರಿಸ್ಥಿತಯ ಕಾಷ್ಠೆಯನ್ನು ತಲುಪಿತು. ಗ್ಲಾಡ್‌ಸ್ಟನ್‌ನ ಶಾಂತ ಸರ್ಕಾರವು ಯುದ್ಧ ರೋಷದಿಂದ ಕೆರಳಿತು. ಸೀನಾ ಚಲನೆಗೆ ಆಜ್ಞೆ ಮಾಡಲಾಯಿತು ಮತ್ತು ಸೇನಾ ಪದ್ಧತಿಗಳಿಗಾಗಿ ಪಾರ್ಲಿಮೆಂಟ್‌ನಲ್ಲಿ ಮಾನ್ಯತೆಯ ಮತ (Vote of Credit) ನೀಡಲಾಯಿತು. ಬಹುಮಟ್ಟಿಗೆ ಅನಿವಾರ್ಯವೆಂದು ಕಂಡು ಬಂದಿದ್ದ ಯುದ್ದ ಗ್ಲಾಡ್‌ಸ್ಟನ್‌ನ ನೈಪುಣ್ಯದಿಂದ ತಪ್ಪಿತು. ಕೊನೆಗೆ, ಎರಡು ರಾಷ್ಟ್ರಗಳು ಒಪ್ಪಂದ ಮಾಡಿಕೊಂಡವು. ರಷ್ಯನ್ನರು ಪಂಜದೇಯನ್ನು ಉಳಿಸಿಕೊಂಡರು. ಆದರೆ ಬುಲ್ಪೀಕರ್ ಕಣಿವೆಯನ್ನು ಅಮೀರನಿಗೆ ನೀಡಿದರು.

ಈ ಸೌಹಾರ್ದದ ವ್ಯವಸ್ಥೆಯ ತರುವಾಯ ರಷ್ಯ ಹಾಗೂ ಬ್ರಿಟಿಷ್ ಸರ್ಕಾರಗಳ ನಡುವಣ ಸಂಬಂಧಗಳ ಉತ್ತಮಗೊಂಡವು. ಗಡಿ ನಿರ್ಧರಣಾ ಆಯೋಗ 1886 ರಲ್ಲಿ ತನ್ನ ಕಾರ್ಯ ಪೂರೈಸಿತು ಮತ್ತು ಆಫ್‌ಘನ್‌ನಿಂದ ಬುಲ್ಪೀಕರ್ ಕಣಿವೆಯವರೆಗಿನ ರೂಸೋ-ಆಫ್‌ಘನ್ ಗಡಿ ವಿದ್ಯುಕ್ತವಾಗಿ ನಿರ್ಧರಿಸಲ್ಪಟ್ಟಿತು. ಆರು ವರ್ಷಗಳವರೆಗೆ ದೀರ್ಘಕಾಲದ ಶಾಂತಿ ನೆಲೆಸಿತ್ತ. ಆದರೆ ಇಡೀ ಫಾಮರ್‌ನ ಸೇರಿಕೆಯ ಬಗ್ಗೆ ಮತ್ತೆ 1892 ರಲ್ಲಿ ವಿವಾದ ಆರಂಭವಾಯಿತು. ಕೊನೆಗೆ 1895 ರಲ್ಲಿ ಒಂದು ಸಂಧಾನ ಮಾಡಿಕೊಂಡರು ಮತ್ತು ಈ ಪ್ರಾಂತದಲ್ಲಿ ಗಡಿರೇಖೆಯನ್ನು ಸ್ಪಷ್ಟವಾಗಿ ನಿಗಧಿಪಡಿಸಲಾಯಿತು. ಏಷಿಯಾಟಿಕ್ ಸಾಮ್ರಾಜ್ಯಗಳಿಗೆ ಸಂಬಂಧಿಸಿದಂತೆ ಇಂಗ್ಲೆಂಡ್ ಹಾಗೂ ರಷ್ಯಗಳ ನಡುವಣ ದೀರ್ಘ ಕಾಲದ ವೈರತ್ವ ತತ್ಕಾಲಕ್ಕೆ ಅಂತ್ಯಗೊಂಡಿತ್ತು. ಆಫ್‌ಘಾನಿಸ್ತಾನದ ಮೇಲೆ ಇಂಗ್ಲೀಷರ ಹಿಡಿತ ಬಲವಾಗಿತ್ತು ಮತ್ತು ರಷ್ಯ ತನ್ನ ಶಕ್ತಿಯನ್ನು ಪೂರ್ವದತ್ತ ಹರಿಸಲಾರಂಭಿಸಿತು.

ಇದಾದ ತರುವಾಯ ಅನೇಕ ವರ್ಷಗಳವರೆಗೆ ಭಾರತದ ವಾಯುವ್ಯ ಗಡಿನೀತಿ ಆಫ್‌ಘಾನಿಸ್ತಾನದೊಡನೆ ಸಂಬಂಧಗಳಿಗೆ ಮಾತ್ರ ಸೀಮಿತವಾಗಿತ್ತು. ಆಫ್ಘರ್ಷ ಹಾಗೂ ಬ್ರಿಟಿಷ್ ಪ್ರದೇಶಗಳ ನಡುವೆ ಇದ್ದ ಪ್ರಾಂತಗಳಲ್ಲಿನ ಅನಾಗರಿಕ ಗುಡ್ಡಗಾಡಿನ ಜನಾಂಗ ಸ್ಥಾನದ್ದೇ ಪ್ರಧಾನ ಸಮಸ್ಯೆಯಾಗಿತ್ತು. ಈ ಜನಾಂಗಗಳು ಬ್ರಿಟಿಷರಿಗಾಗಲಿ, ಆಫ್‌ಘನ್ನರಿಗಾಗಲಿ ನಿಷ್ಠರಾಗಿರಲಿಲ್ಲ. 'ಅಗ್ರಗಾಮಿ ನೀತಿ' ಎಂದು ಕರೆಯಲಾಗಿರುವ ನೀತಿಯಿಂದ ಬ್ರಿಟಿಷ್ ಸರ್ಕಾರ, ಬ್ರಿಟಿಷ್ ಇಂಡಿಯಾದ ಗಡಿಯನ್ನು ಸಿಂಧುವಿನ ಆಚೆ ತಳ್ಳುವ ಪ್ರಯತ್ನದಿಂದ ತನ್ನ ಅಧಿಕಾರವನ್ನು ಅವರ ಮೇಲೆ ವ್ಯಾಪಿಸಲಿಚ್ಛಿಸಿತು. ಮೊದಲಿನ ಕೆಲವೊಂದು ಎಡರು ತೊಡರುಗಳ ತರುವಾಯ ತಮ್ಮ ಅಧಿಕಾರ ವಲಯದ ಬಗ್ಗೆ ಎರಡು ಸರ್ಕಾರಗಳು ಒಂದು ತೀರ್ಮಾನಕ್ಕೆ ಬಂದವು. ಸರ್ ಮಾಟ್ಟಿಮರ್ ಡ್ಯೂರಾಂಡನ್ ಅಧ್ಯಕ್ಷತೆಯಲ್ಲಿನ ಆಫ್‌ಘನ್ ಗಡಿ ಆಯೋಗ ಗಡಿರೇಖೆಯನ್ನು ನಿರ್ಧರಿಸಿತು. ಅಮೀರನ ವಾರ್ಷಿಕ ನೆರವನ್ನು ಹನ್ನೆರಡರಿಂದ ಹದಿನೆಂಟು ಲಕ್ಷಕ್ಕೇರಿಸಲಾಯಿತು ಮತ್ತು ಗಡಿರೇಖೆಯ ಭಾರತದ ಕಡೆಯ ಜನಾಂಗಗಳ ಬಗ್ಗೆ ಮಧ್ಯೆ ಪ್ರವೇಶಿಸದಿರಲು ಅವನು ಒಪ್ಪಿಕೊಂಡನು.

ಈ ಜನಾಂಗಗಳೊಡನೆ ಪರಿಣಾಮಕಾರಿಯಾಗಿ ವರ್ತಿಸುವುದೇ ಮುಂದಿನ ಸಮಸ್ಯೆ ಆಗಿದ್ದಿತು. ಇದೇನೂ ಸುಲಭ ಕಾರ್ಯವಾಗಿರಲಿಲ್ಲ ಮತ್ತು ಈ ದಂಗೆ ಪ್ರವೃತ್ತಿಯ ಬುಡಕಟ್ಟಿನವರನ್ನು ಅಡಗಿಸಲು ಪ್ರತೀಕಾರರೊಡನೆ ದಾಳಿ ಅಗತ್ಯವಾಗಿತ್ತು. ಚಿತ್ರಾಲ್ ಹಾಗೂ ಗಿಲ್‌ಗಿಟ್‌ಗಳ ಮೇಲೆ 1893 ರಲ್ಲಿ ಔಪಚಾರಿಕ ಅಧಿಕಾರವನ್ನು (formal Protectorate) ಘೋಷಿಸಲಾಯಿತು. ಅಧಿಕಾರಕ್ಕೆ ಸ್ಪರ್ಧಿಯಾಗಿದ್ದ ಒಬ್ಬನಿಗೆ ನೆರವು ನೀಡಲು ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಕಳುಹಿಸಲಾಯಿತು. ಆದರೆ ಬ್ರಿಟಿಷರ ವಿರುದ್ಧ 'ಜಿಹಾದ್' ಅಥವಾ ಧರ್ಮ ಯುದ್ಧ ಘೋಷಿಸಿದ್ದ ಬಹುಪಾಲು ಬುಡಕಟ್ಟಿನವರು ಈ ಅಧಿಕಾರಿಯನ್ನು ಮುತ್ತಿದರು. ನಿಲ್‌ಗಿಟ್‌ನಿಂದ ಒಂದು ಮಾಲ್‌ಖಂಡ್ ಕಣಿವೆಯ ಮಾರ್ಗವಾಗಿ ಮತ್ತೊಂದು ಈ ರೀತಿ ಹೆಚ್ಚಿನ ಸೇನೆ ಬರುವವರೆಗೆ ಒಂದೂವರೆ ತಿಂಗಳ ಕಾಲ ಈ ಮುತ್ತಿಗೆ ಮುಂದುವರೆಯಿತು. 1897 ರಲ್ಲಿ ಮತ್ತೊಮ್ಮೆ ಉಗ್ರತರವಾದ ಕದನ ಆರಂಭವಾಯಿತು. ಮೊಹ್ಮಂತರು ಹಾಗೂ ಆಫ್ರಿಕಗಳೂ ಸೇರಿದಂತೆ ಬಹು ಸಂಖ್ಯೆಯಲ್ಲಿನ ಜನಾಂಗಗಳು ದಂಗೆಯೆದ್ದವು. ಈ ದಂಗೆಗಳನ್ನು ಅಡಗಿಸಲು ಸೇನಾ ಕಾರ್ಯಾಚರಣೆಗಳು ವಿಶೇಷವಾಗಿ ಲೆರ್‍ಹಾ ದಂಡಯಾತ್ರೆ ಅಗತ್ಯವಾದುವು.

ಈ ಕದನಾರಂಭಗಳು ತಲೆದೋರುವುದನ್ನು ತಡೆಗಟ್ಟುವ ಸಲುವಾಗಿ, ಗಡಿ ಜಿಲ್ಲೆಗಳಲ್ಲಿ ಸಮರಕ್ಕೆ ಅಗತ್ಯವಾದ ರಸ್ತೆ ಹಾಗೂ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು ಮತ್ತು ದಂಗೆಕೋರ ಜನಾಂಗಗಳನ್ನು ಪರಿಣಾಮಕಾರಿಯಾಗಿ ಹಾಗೂ ತ್ವರಿತಗತಿಯಿಂದ ಅಡಗಿಸಲು ವತಿಗಳ ಪುನರ್ ವಿತರಣೆ ನಡೆಯಿತು. ಗಡಿನಾಡ ಜಿಲ್ಲೆಗಳನ್ನು ಪಂಜಾಬಿನಿಂದ ಪ್ರತ್ಯೇಕಿಸಲಾಯಿತು ಮತ್ತು ಗವರ್ನರ್

ಜನರಲ್‌ನ ನೇರ ನೇತೃತ್ವದಲ್ಲಿ ತರುವಾಯ ಗವರ್ನರ್ ನೇತೃತ್ವದಲ್ಲಿನ ಚೀಫ್ ಕಮೀಷನರ್‌ನಿಂದ ಆಳಲಾಗುವ ವಾಯುವ್ಯ ಗಡಿ ಪ್ರಾಂತವನ್ನಾಗಿ ವಿಸರ್ಜಿಸಲಾಯಿತು. ಆದರೆ ಆ ಪ್ರಾಂತವನ್ನು ಗೊಂದಲವಿಲ್ಲದೆ ಶಾಂತವಾಗಿಡುವುದರಲ್ಲಿ ಈ ಕ್ರಮಗಳು ಯಶಸ್ವಿಯಾಗಲಿಲ್ಲ. ಆಗಾಗ್ಗೆ ಬ್ರಿಟಿಷ್ ಪ್ರಾಂತಗಳ ಮೇಲೆ ಗುಡ್ಡಗಾಡು ಜನಾಂಗಗಳ ದಾಳಿ ಹಾಗೂ ಇತರ ತೊಂದರೆಗಳು ಮಾಮೂಲು ಘಟನೆಗಳಾಗಿಬಿಟ್ಟವು. ಅವರಲ್ಲಿ ಭೀತಿಯನ್ನುಂಟುಮಾಡಲು ಬ್ರಿಟಿಷ್ ಸರ್ಕಾರ ವಿಮಾನಗಳಿಂದ ಬಾಂಬ್‌ಗಳನ್ನು ಹಾಕಲು ಪ್ರಾರಂಭಿಸಿತು. ಈ ಘಟನಾವಳಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಲಾರ್ಡ್ ಲ್ಯಾನ್ಸ್ ಡೌನ್‌ನಿಗೆ (1888-94) ಅಮೀರ ಅಬ್ದುಲ್ ರೆಹಮಾನ್ ಬರೆದ ಪತ್ರದಲ್ಲಿ ಬ್ರಿಟಿಷರ ಅಗ್ರಗಾಮಿ ನೀತಿಯ ಪ್ರಾಯಃ ಫಲಿತಾಂಶಗಳು ವಿವರಿಸುವುದನ್ನು ಗಮನಿಸಿದರೆ ಅಮೀರನ ಯುಕ್ತತೆ ನಮಗೆ ಗೊತ್ತಾಗುವುದು.

"ನನ್ನ ಪ್ರಾಂತಗಳಿಂದ ನೀವು ಗಿರಿ ಜನಾಂಗಗಳನ್ನು ನಿರ್ಮೂಲನ ಮಾಡುವುದರಿಂದ ಅದರಿಂದ ನಿಮಗಾಗಲಿ ನನಗಾಗಲಿ ಯಾವ ಪ್ರಯೋಜನವೂ ಇಲ್ಲ. ನೀವು ಸದಾ ಕಾಲ ಅವರೊಡನೆ ಯುದ್ಧದಲ್ಲಿ ತೊಡಗಬೇಕಾಗುತ್ತದೆ ಅಥವಾ ಒಂದಲ್ಲ ಒಂದು ತೊಂದರೆಯನ್ನು ಎದುರಿಸಬೇಕಾಗುತ್ತದೆ. ಅವರು ಕೊಳ್ಳೆಹೊಡೆಯುತ್ತಲೇ ಇರುತ್ತಾರೆ. ನಿಮ್ಮ ಸರ್ಕಾರ ಬಲಿಷ್ಠ ಹಾಗೂ ಶಾಂತಿಯುತವಾಗಿರುವವರೆಗೆ, ನೀವು ನಿಮ್ಮ ಬಲದಿಂದ ಅವರನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ಆದರೆ ಯಾವುದೇ ಸಮಯದಲ್ಲಿ ಭಾರತದ ಗಡಿಗೆ ವಿದೇಶೀ ಶತ್ರುಗಳು ಬಂದರೆಂದರೆ, ಈ ಗಡಿನಾಡ ಜನಾಂಗಗಳೇ ನಿಮ್ಮ ಪ್ರಬಲ ವೈರಿಗಳಾಗುತ್ತಾರೆ".

ಈ ಗಿರಿ ಪ್ರಾಂತಗಳ ಪ್ರವೇಶಕ್ಕೆ ಅಗ್ರಗಾಮಿ ನೀತಿಯ ಪ್ರತಿಪಾದಕರು ಬೆಂಬಲ ನೀಡುತ್ತಿದ್ದರು. ಪಶ್ಚಿಮದಿಂದ ಯಾವುದೇ ದಾಳಿ ತಡೆಯಲು ಸಿಂಧೂ ನದಿಗಿಂತ ಇದು ಉತ್ತಮ ರಕ್ಷಣಾದುರ್ಗದ ಸಾಲಾಗುತ್ತದೆ ಎಂಬುದೇ ಇದಕ್ಕೆ ಕಾರಣವಾಗಿತ್ತು. ಸೇನೆಯ ದೃಷ್ಟಿಕೋನದಿಂದಲೆ ಆದರೆ ಇದು ಅತ್ಯಂತ ಸೂಕ್ಷ್ಮವಾದುದು. ಆದರೆ ಪಶ್ಚಿಮದ ಕಡೆಯಿಂದ ಯಾವುದೇ ರೀತಿಯ ತೀವ್ರ ದಾಳಿಯ ನಿಜವಾದ ಭೀತಿಯಿದ್ದಲ್ಲಿ ಮಾತ್ರ ಅತಿಯಾದ ಕ್ರಮ ಹಾಗೂ ವ್ಯಯ ಸಮರ್ಥನೀಯವಾಗಿತ್ತು. ಈ ನೀತಿಯನ್ನು ಮೊದಲು ಅಳವಡಿಸಿಕೊಂಡಾಗ ಅಂಥ ಒಂದು ಭೀತಿ ದೂರವಾದುದಾಗಿತ್ತು ಎಂಬುದು ನಿಸ್ಸಂದೇಹವಾದುದು. ಆಗ ಯಾರೂ ಮುಂಗಾಣಲಾಗದಿದ್ದ ತರುವಾಯ ಘಟನೆಗಳ ದೃಷ್ಟಿಯಿಂದ ಈ ಭಯ ಸಂಪೂರ್ಣವಾಗಿ ಕಾಲ್ಪನಿಕವಾದುದೆಂದು ವಿವರಿಸಲಾಗುವುದಿಲ್ಲ.

## 79.2 ಮೇಲಣ ಬರ್ಮಾವನ್ನು ಸ್ವಾಧೀನಪಡಿಸಿಕೊಂಡುದು

ಎರಡು ಯುದ್ಧಗಳ ಪರಿಣಾಮವಾಗಿ ಬ್ರಿಟಿಷರು ಕೆಳಗಣ ಬರ್ಮಾದಲ್ಲಿ ಪೆಗು ಮತ್ತು ಅರಕಾನ್ ತೆನಾಸ್ಸೆರಿಮ್‌ಗಳನ್ನು ಆಕ್ರಮಿಸಿದ್ದರು. ಹಳೆಯ ಬರ್ಮೀ ಸಂತತಿ ಮೇಲಣ ಬರ್ಮಾವನ್ನು ಆಳುತ್ತಿತ್ತು. ಒಬ್ಬ ಬ್ರಿಟಿಷ್ ರೆಸಿಡೆಂಟನನ್ನು ಮಾಂಡಲೆಯಲ್ಲಿ ಇರಿಸಲಾಗಿತ್ತು. ಇಲ್ಲಿಂದ ರಾಜಧಾನಿಯನ್ನು 1857 ರಲ್ಲಿ ತೆಗೆಯಲಾಯಿತು. ಮೇಲಣ ಬರ್ಮಾದೊಂದಿಗೆ ವ್ಯಾಪಾರವನ್ನು ಆರಂಭಿಸಲಾಯಿತು ಮತ್ತು 1862 ರ ಹಾಗೂ 1867 ರ ಎರಡು ಒಪ್ಪಂದಗಳಿಂದ ಇಂಗ್ಲೀಷರ ಹಕ್ಕುಗಳು ರಕ್ಷಿತವಾದವು.

ಆದರೆ ಈ ಎರಡು ಸರ್ಕಾರಗಳ ನಡುವಣ ಸಂಬಂಧ ಸದಾ ಸೌಹಾರ್ದಶೀಲವಾದುದಾಗಿರಲಿಲ್ಲ. ಕೆಳಗಣ ಬರ್ಮಾವನ್ನು ಕಳೆದುಕೊಂಡದ್ದು ಬರ್ಮೀಯರ ದೊರೆ ಮಿಂಡನ್‌ನಿಗೆ ವೇದನೆಯ ವಿಷಯವಾಗಿದ್ದರೆ ಮಧ್ಯ ಯುಗದ ರಾಜ ಗೌರವದ ಪ್ರತಿಷ್ಠೆಯ ಇವನ ಕಲ್ಪನೆ ಬ್ರಿಟಿಷರಿಗೆ ವೇದನಕಾರಿಯಾಗಿತ್ತು. ಬರ್ಮೀಯರ ಪದ್ಧತಿಯ ಪ್ರಕಾರ ಬ್ರಿಟಿಷ್ ರೆಸಿಡೆಂಟನು ರಾಜನ ಆಸ್ಥಾನವನ್ನು ಪ್ರವೇಶಿಸುವಾಗ ತನ್ನ ಪಾದರಕ್ಷೆಯನ್ನು ಕಳಚಿ ದೊರೆಯ ಮುಂದೆ ತರಬೇಕಾಗಿತ್ತು. ವೈಸರಾಯ್ 1876 ರಲ್ಲಿ ಇದಕ್ಕೆ ವಿರೋಧಿಸಿನಾದರೂ ಮಿಂಡನ್ ಈ ವಿರೋಧವನ್ನು ಗಮನಕ್ಕೆ ತಂದು ಕೊಳ್ಳಲಿಲ್ಲ. ತತ್ಪರಿಣಾಮವಾಗಿ ಬ್ರಿಟಿಷ್ ರೆಸಿಡೆಂಟನ್ನು ರಾಜನನ್ನು ಭೇಟಿಯಾಗುವುದನ್ನು ನಿಲ್ಲಿಸಿದರು. ಇದರಿಂದ ಬರ್ಮಾದ ಆಸ್ಥಾನದಲ್ಲಿ ಬ್ರಿಟಿಷ್ ಪ್ರಭಾವ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು.

ಮಿಂಡ್‌ನ್‌ನ ಉತ್ತರಾಧಿಕಾರಿ ಥೀಬಾ ದುರ್ಬಲನೂ ದುಷ್ಟನೂ ಆದ ರಾಜನಾಗಿದ್ದನು. ತನ್ನ ವೈರಿಗಳೆಂದು ಭಾವಿಸಿದ ಎಂಬತ್ತು ಮಂದಿ ರಾಜಕುಮಾರ ರಾಜಕುಮಾರಿಯರ ಕಗ್ಗೊಲೆಯ ಮೂಲಕ ತನ್ನ ಅಧಿಕಾರಾರೋಹಣವನ್ನು ಸೂಚಿಸಿದ. ಬ್ರಿಟಿಷ್ ರೆಸಿಡೆಂಟ್ ಇದನ್ನು ವಿರೋಧಿಸಿದ. ಆದರೆ ಬರ್ಮಾ ಪರಮಾಧಿಕಾರವುಳ್ಳ ದೇಶವೆಂದು ಅವನಿಗೆ ಸಂಕ್ಷಿಪ್ತವಾಗಿ ತಿಳಿಸಲಾಯಿತು. ರೆಸಿಡೆಂಟ್‌ನನ್ನು ಹಿಂದಕ್ಕೆ ಕರೆಸಿಕೊಳ್ಳಲು ಪೆಗುವಿನ ಚೀಫ್ ಕಮೀಷನರ್ ಶಿಫಾರಸ್ಸು ಮಾಡಿದ. ಆದರೆ ಭಾರತ ಸರ್ಕಾರ ಈ ಶಿಫಾರಸ್ಸನ್ನು ಒಪ್ಪಲಿಲ್ಲ. ಥೀಬಾ ಮತ್ತೊಮ್ಮೆ 1884 ರಲ್ಲಿ ಕಗ್ಗೊಲೆಯನ್ನು ಮುಂದುವರಿಸಿದ. ಮಾನವೀಯತೆಯ ಹೆಸರಿನಲ್ಲಿ ಭುಗಿಲೆದ್ದಿತು.

ರಂಗೂನಿನಲ್ಲಿ ನಡೆದ ಸಾರ್ವಜನಿಕ ಸಭೆಗಳಲ್ಲಿ ಮೇಲಣ ಬರ್ಮಾದ ತಕ್ಷಣ ಸ್ವಾಧೀನ ಪಡಿಸಿಕೊಳ್ಳುವರೆಗೆ ಭಾರತ ಸರ್ಕಾರವನ್ನು ಒತ್ತಾಯ ಪಡಿಸಲಾಯಿತು. ಬರ್ಮಾದ ಜನತೆ ಈ ಸಭೆಗಳಿಗೆ ಹಾಜರಾಗಲಿಲ್ಲವೆಂಬ ಅಂಶವನ್ನು ಗಮನಿಸಬೇಕು. ಈ ಸಭೆಗಳನ್ನು ವ್ಯಾಪಾರ ಹಿತಾಸಕ್ತಿ ಹೊಂದಿದ್ದ ಇಂಗ್ಲೀಷ್ ಹಾಗೂ ಚೀನೀ ವರ್ತಕರು ವಾಸ್ತವವಾಗಿ ಏರ್ಪಡಿಸಿದ್ದರು. ಈ ಘಟನೆಗಳ ಬಗ್ಗೆ ಗಮನ ವಹಿಸದೆ ಬರ್ಮಾದ ವ್ಯವಹಾರಗಳು ತಮ್ಮ ಪಾಡಿಗೆ ತಾವು ನಡೆದುಕೊಂಡು ಹೋಗಲು ಭಾರತ ಸರ್ಕಾರ ಬಿಟ್ಟಿತು.

ಈ ವೇಳೆಗೆ ಈಶಾನ್ಯದ ರಾಜಕೀಯದಲ್ಲಿ ಒಂದು ಹೊಸ ಅಂಶ ಉದ್ಭವಿಸಿತ್ತು. ಫ್ರಾನ್ಸ್ ದೂರ ಪ್ರಾಚ್ಯದಲ್ಲಿ ಒಂದು ವಸಾಹತು ಸಾಮ್ರಾಜ್ಯ ಸ್ಥಾಪಿಸಿತ್ತು. 1884 ರಲ್ಲಿ ಕೊಚ್ಚಿನ್ ಚೈನಾ ಹಾಗೂ ಟೊಂಕಿನ್‌ಗಳು ಅದರ ವಶದಲ್ಲಿದ್ದವು ಮತ್ತು ಮೇಲಣ ಬರ್ಮಾದತ್ತ ಅದು ಮುನ್ನುಗ್ಗುತ್ತಿತ್ತು. ಫ್ರಾನ್ಸ್‌ನೊಡನೆ ಮೈತ್ರಿ ಬೆಳೆಸಲು ಬರ್ಮಾ ಸರ್ಕಾರ ಕಾತುರವಾಗಿತ್ತು. ಈ ಎರಡು ರಾಷ್ಟ್ರಗಳು 1885 ರಲ್ಲಿ ಒಂದು ವ್ಯಾಪಾರ ಒಪ್ಪಂದಗಳ ಸಹಿ ಹಾಕಿದಲ್ಲಿ ಮತ್ತು ಬರ್ಮಾದ ಟೊಂಕಾನ್‌ನ ಮೂಲಕ ಶಸ್ತ್ರಾಸ್ತ್ರಗಳ ಆಮದಿಗೆ ಫ್ರೆಂಚರು ಗುಪ್ತ ವಾಗ್ದಾನ ನೀಡಿದರು. ಮಾಂಡಲೆಯಲ್ಲಿ ಫ್ರೆಂಚರ ರಾಯಭಾರಿಗಳನ್ನು ಇಡಲಾಯಿತು ಮತ್ತು ಅಲ್ಲಿ ಒಂದು ಫ್ರೆಂಚ್ ಬ್ಯಾಂಕ್ ತೆರೆಯಲು ರೈಲ್ವೆಯನ್ನು ಸ್ಥಾಪಿಸಲು ಮತ್ತು ರಾಜ್ಯಸ್ವಾಮ್ಯಗಳ ಆಡಳಿತ ಪಡೆಯಲು ಅಧಿಕಾರೀ ಪ್ರಸ್ತಾವನೆಗಳು ನಡೆಯುತ್ತಿದ್ದವು.

ಫ್ರೆಂಚರು ಶಾಂತಿಯುತವಾಗಿ ಬಂದದ್ದು ಬ್ರಿಟಿಷ್ ಸರ್ಕಾರಕ್ಕೆ ಭೀತಿಯುಂಟಾಯಿತು. ಆದರೆ ಯುದ್ಧಕ್ಕೆ ಕಾರಣವಾದ ಸಂದರ್ಭ ಅಥವಾ ಮಧ್ಯ ಪ್ರವೇಶಿಸಲು ಹೇಳಿಕೊಳ್ಳುವಂತಹ ಕಾರಣ ಯಾವುದೂ ತಮಗೆ ಇರಲಿಲ್ಲ. ಧೀಬಾನ್ ಒಂದು ಕಾರ್ಯ ಇದಕ್ಕೆ ಅವಕಾಶ ಮಾಡಿಕೊಟ್ಟಿತು. ಬಾಂಬೆ-ಬರ್ಮಾ ಟ್ರೇಡಿಂಗ್ ಕಂಪೆನಿ ಎಂಬ ಒಂದು ಇಂಗ್ಲೀಷ್ ಸಂಸ್ಥೆ ಬರ್ಮಾ ಸರಕಾರದಿಂದ ಪ್ರತಿ ಮರದ ದಿಮ್ಮಿಗೆ ನಿರ್ದಿಷ್ಟ ದ್ರವ್ಯ ನೀಡುವ ಷರತ್ತಿನ ಮೇಲೆ ಕೆಲವೊಂದು ಅರಣ್ಯಗಳನ್ನು ಗುತ್ತಿಗೆಗೆ ಪಡೆಯಿತು. ಈ ಕಂಪೆನಿ ಸರಕಾರಕ್ಕೆ ಬೃಹತ್ ಪ್ರಮಾಣದಲ್ಲಿ ಮೋಸಮಾಡಿದೆ ಎಂದು ಆಪಾದಿಸಲಾಯಿತು. ನ್ಯಾಯ ವಿಚಾರಣೆ ನಡೆಯಿತು ಮತ್ತು ಕಂಪೆನಿ 25 ಲಕ್ಷ ರೂಗಳಿಗೂ ಮೀರಿದ ದಂಡ ತೆರಬೇಕೆಂದೂ ತೀರ್ಪು ನೀಡಲಾಯಿತು. ಕಂಪನಿ ಭಾರತದ ಸರ್ಕಾರದ ಮೇಲೆ ಪ್ರಭಾವ ಬೀರಿತು. ಭಾರತ ಸರ್ಕಾರ ಈ ಪ್ರಕರಣವನ್ನು ವೈಸರಾಯ್‌ನ ಪಂಚಾಯಿತಿಯಲ್ಲಿ ಮಂಡಿಸಬೇಕೆಂದು ಸೂಚಿಸಿತು. ಬರ್ಮಾದ ದೊರೆ ಇದಕ್ಕೆ ಒಪ್ಪಲಿಲ್ಲ. ಇವನ ದುರದೃಷ್ಟದಿಂದಾಗಿ ಇದೇ ಸಮಯದಲ್ಲಿ ಫ್ರೆಂಚರು ಟೊಂಕಾನ್‌ನಲ್ಲಿ ತೀವ್ರ ಸೋಲನ್ನು ಅನುಭವಿಸಿ ಮೇಲಣ ಬರ್ಮಾದಿಂದ ಹಿಂದೆಗೆದು ಕೊಂಡರು. ಲಂಡನ್‌ನಲ್ಲಿದ್ದ ಫ್ರೆಂಚ್ ರಾಜದೂತ ಮಾಂಡಲೆಯಲ್ಲಿನ ಫ್ರೆಂಚ್ ರಾಯಭಾರಿಯ ಅರೆ ಅಧಿಕಾರಿ ಸಂಧಾನಗಳನ್ನು ಅಂಗೀಕರಿಸಲಿಲ್ಲ. ಇಂತಹ ಸುವರ್ಣಾವಕಾಶವನ್ನು ಬ್ರಿಟಿಷರು ಸದುಪಯೋಗಪಡಿಸಿಕೊಂಡರು. ಈ ಮುಂದಿನ ಷರತ್ತುಗಳಿಗೆ ಅಂಗೀಕರಿಸುವಂತೆ ದೊರೆ ದೀಭಾಗೆ ಒಂದು ಗಡುವು ನೀಡಲಾಯಿತು.

1. ಮಾಂಡಲೆಯಲ್ಲಿ ಒಬ್ಬ ಖಾಯಂ ರೆಸಿಡೆಂಟ್ ಇರಬೇಕು ಮತ್ತು ಪಾದರಕ್ಷೆಗಳನ್ನು ಕಳಚಿ ರಾಜನ ಮುಂದೆ ತಲೆ ಬಾಗುವುದು ಮುಂತಾದ ಹೀನಾಯಘರ ಸಂಪ್ರದಾಯಗಳನ್ನು ಆಚರಿಸದೆ ರಾಜನಲ್ಲಿಗೆ ಹೋಗಲು ಅವನಿಗೆ ಸ್ವಾತಂತ್ರ್ಯವಿರಬೇಕು.
2. ಬರ್ಮಾದ ವಿದೇಶಿ ನೀತಿ ಬ್ರಿಟಿಷರಿಂದ ನಿಯಂತ್ರಿತಗೊಳ್ಳಬೇಕು.
3. ಬಾಂಬೆ-ಬರ್ಮಾ ಟ್ರೇಡಿಂಗ್ ಕಾರ್ಪೋರೇಷನ್‌ಗೆ ಸಂಬಂಧಿಸಿದ ಪ್ರೇರಣವನ್ನು ವೈಸರಾಯಿ ಕಳುಹಿಸುವ ವಿಶೇಷ ಅಧಿಕಾರಿಯೊಡನೆ ಸಮಾಲೋಚನೆಯಿಂದ ತೀರ್ಮಾನಿಸಬೇಕು.
4. ಯುನ್ನನ್‌ನೊಡನೆ ಬ್ರಿಟನ್ ವ್ಯಾಪಾರಗಳ ಬರ್ಮಾ ಸರ್ಕಾರ ನೆರವು ನೀಡಬೇಕು.

1885 ರ ನವೆಂಬರ್ 9 ರಂದು ದೀಭಾ ಗಡುವು ನಿರಾಕರಿಸಿದುದು ಬ್ರಿಟಿಷರ ದಾಳಿಗೆ ಕಾರಣವಾಯಿತು. ಇಪ್ಪತ್ತು ದಿನಗಳಲ್ಲಿ ಮಾಂಡಲೆ ಬ್ರಿಟಿಷರ ವಶವಾಯಿತು ಮತ್ತು ಧೀಬಾ ತನ್ನ ಅರಮನೆಯಲ್ಲಿಯೇ ಬಂಧಿಯಾಗಿದ್ದನು. ರಾಜಧಾನಿಯ ಪತನ ರಾಜ್ಯದ ಪತನವಾಗಲಿಲ್ಲ. ದರೋಡೆಕಾರರ ತಂಡಗಳು ಮತ್ತು ಸೈನಿರೋದ್ಯೋಗ ಬಿಟ್ಟು ಹೋದ ಸೈನಿಕರು ಒಂದು ರೀತಿಯ ಗೆರಿಲ್ಲಾ ಯುದ್ಧ ಕ್ರಮ ಮುಂದುವರಿಸಿದರು. ಮೇಲಣ ಬರ್ಮಾ ರಾಜ್ಯವನ್ನು ಕ್ರೋಢೀಕರಿಸಿ ಸಮಾಧಾನಗೊಳಿಸಲು ಐದು ವರ್ಷಗಳೇ ಬೇಕಾದವು ಮತ್ತು ಷಾನರು ಹಾಗೂ ಚೀನರು ಮುಂತಾದ ಗಡಿ ಜನಾಂಗಗಳು ಆಳುತ್ತಿದ್ದ ಪ್ರದೇಶಗಳನ್ನು ಪರಿಣಾಮಕಾರಿ ರೀತಿಯಲ್ಲಿ ನಿಯಂತ್ರಣಕ್ಕೆ ತರಲು ಮತ್ತು ಆರು ವರ್ಷಗಳೇ ಬೇಕಾದವು. ಈ ಆಕ್ರಮಿತ ಪ್ರದೇಶಗಳು, ಕೆಳಗಣ ಬರ್ಮಾದೊಡನೆ ಸೇರಿ, ರಂಗೂನನ್ನು ಕೇಂದ್ರ ಕಾರ್ಯಸ್ಥಾನವನ್ನಾಗಿ ಹೊಂದಿದ್ದ ಹೊಸ ಬರ್ಮಾ ಪ್ರಾಂತವಾಯಿತು.

ಎದುರು ಗಡಿಯಲ್ಲಿ ಆಫ್‌ಘಾನಿಸ್ತಾನದ ವಿಷಯದೊಡನೆ ಬರ್ಮಾದ ವಿಷಯ ಕುತೂಹಲಕಾರಿಯಾದ ಸಂವಾದಿಯಾಗಿದೆ. ಎರಡರಲ್ಲಿಯೂ ಮತ್ತೊಂದು ಬಲಿಷ್ಠ ಯುರೋಪಿಯನ್ ರಾಷ್ಟ್ರವಾದ ರಷ್ಯ ಫ್ರಾನ್ಸ್, ಬ್ರಿಟಿಷ್ ಪ್ರಾಂತಗಳ ಎಲ್ಲೆಯಿದ್ದ ಏಷ್ಯಾಟಿಕ್ ರಾಜ್ಯಗಳಲ್ಲಿ ರಾಜಕೀಯ ಪ್ರಭಾವ ಸ್ಥಾಪಿಸಬಹುದೆಂಬ ಭೀತಿಯಿಂದ ಬ್ರಿಟಿಷ್ ನೀತಿ ನಿಯಂತ್ರಿತಗೊಂಡಿತು. ಈ ರಾಜ್ಯಗಳಲ್ಲಿ ಆಡಳಿತಗಾರರು ವೈರಿ ಯುರೋಪಿಯನ್ ರಾಷ್ಟ್ರದಿಂದ ನೆರವು ಪಡೆಯುವೆವೆಂಬ ಭರವಸೆಯ ಮೇಲೆ ಇಂಗ್ಲೀಷರನ್ನು ನಿರ್ಲಕ್ಷಿಸಿದರು ಮತ್ತು ಎರಡು ಪರಿಸ್ಥಿತಿಗಳಲ್ಲೂ ಅತ್ಯಂತ ಸಂದಿಗ್ಧ ಸಮಯದಲ್ಲಿ ಅವರು ನಿರಾಶಗೊಳಗಾಗಬೇಕಾಯಿತು. ಭೌಗೋಳಿಕ ಹಾಗೂ ಕುಲಸಂಬಂಧಿ ಅಂಶಗಳು ಫಲಿತಾಂಶವನ್ನು ಭಿನ್ನಗೊಳಿಸಿದವು. ಬರ್ಮಾ ಬ್ರಿಟಿಷ್ ಇಂಡಿಯಾಕ್ಕೆ ಸೇರಿತು. ಆದರೆ ಎತ್ತರವಾದ ಹಾಗೂ ಏರುಪೇರಿನ ಆಫ್‌ಘಾನಿಸ್ತಾನದ ಪರ್ವತ ಶ್ರೇಣಿಗಳು ಹಾಗೂ ಬಲಿಷ್ಠ ಯುದ್ಧ ಪ್ರಿಯ ಪಠಾಣರು ಆದೇಶದ ಸಂಪೂರ್ಣ ಆಕ್ರಮಣವನ್ನು ಅಸಾಧ್ಯ ಕಾರ್ಯವನ್ನಾಗಿ ಮಾಡಿದರು.

## 79.3 ಭಾರತೀಯ ರಾಜ್ಯಗಳು

ಚಕ್ರವರ್ತಿ ಸರ್ಕಾರವನ್ನು ವಹಿಸಿಕೊಂಡ ತರುವಾಯ ಭಾರತದ ರಾಜ್ಯಗಳ ನಡುವೆ ಬ್ರಿಟಿಷ್ ಸರ್ಕಾರದ ಸಂಬಂಧಗಳು ಮಹತ್ತರವಾಗಿ ಬದಲಾವಣೆಗೊಂಡವು. ಇದಕ್ಕೆ ಮುಂಚೆ ಈ ಸಂಬಂಧಗಳು ಏಕರೂಪದ್ದಾಗಿರಲಿಲ್ಲ; ಇಲ್ಲವೇ ನಿರ್ದಿಷ್ಟವಾದುದಾಗಿರಲಿಲ್ಲ. ವಿವಿಧ ರಾಜ್ಯಗಳು ವಿವಿಧ ಕಾಲದಲ್ಲಿ ಹಾಗೂ ವಿವಿಧ ಸಂದರ್ಭಗಳಲ್ಲಿ ವಿವಿಧ ರೀತಿಯ ಒಪ್ಪಂದಗಳನ್ನು ಮಾಡಿಕೊಂಡಿದ್ದರಿಂದಲೇ ಏಕರೂಪತೆಯ ದೋಷ ಅನಿವಾರ್ಯವಾಗಿತ್ತು. ಬೆಳೆಯುತ್ತಿದ್ದಂಥ ಬ್ರಿಟಿಷ್ ಅಧಿಕಾರದ ನೀತಿ ವಿವಿಧ ಸ್ಥಿತಿಗಳು ಹಾಗೂ ಪ್ರಭಾವಗಳ ಪರಿಣಾಮವಾಗಿ ಕಾಲದಿಂದ ಕಾಲಕ್ಕೆ ನಿರ್ದಿಷ್ಟವಾಗಿಲ್ಲದಿದ್ದುದಕ್ಕೆ ಕಾರಣವಾಗಿತ್ತು. ವೈಯುಕ್ತಿಕ ಅಂಶಗಳ ಮೇಲೂ ಹೆಚ್ಚು ಆಧಾರಿತವಾಗಿತ್ತು. ವೆಲ್ಲೆಸ್ಲಿ, ಡಾಲ್‌ಹೌಸಿ ಹಾಗೂ ಲಾರ್ಡ್ ಹೇಸ್ಟಿಂಗ್ಸ್ ಇವರ ಆಳ್ವಿಕೆಯ ಕಾಲದಲ್ಲಿ ಕಂಪನಿ ಹೊಸ ನೀತಿಗಳನ್ನು ನಿರುಪಾಸದಿದ್ದರೂ ಇವರು ಇತರರಿಗಿಂತ ಹೆಚ್ಚಿನ ಅಗ್ರಗಾಮಿ ಪ್ರವೃತ್ತಿಯನ್ನು ತೋರಿದರು ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ.

ಇದರ ಪರಿಣಾಮವಾಗಿ ಭಾರತೀಯ ರಾಜ್ಯದಲ್ಲಿ ಒಂದು ರೀತಿಯ ಅನಿಶ್ಚಿತತೆ ಮತ್ತು ಜಟಿಲತೆ ಇದ್ದಿತು. ಅವುಗಳಿಗೆ ತಾವು ವಾಸ್ತವವಾಗಿ ಯಾವ ಸ್ಥಿತಿಯಲ್ಲಿದ್ದೇವೆಂಬುದು ತಮಗೆ ತಿಳಿದಿರಲಿಲ್ಲ. ತಾತ್ತ್ವಿಕವಾಗಿ ಅವುಗಳ ಪ್ರತ್ಯೇಕ ರಾಜಕೀಯ ಅಸ್ತಿತ್ವಕ್ಕೆ ಒಪ್ಪಂದಗಳ ಮೂಲಕ ಭರವಸೆಯಿದ್ದಿತು ಮತ್ತು ಕೆಲವೇ ಕೆಲವು ನಿರ್ದಿಷ್ಟ ನಿರ್ಬಂಧನೆಗೊಳಪಟ್ಟು ಅವುಗಳಲ್ಲಿ ಹೆಚ್ಚಿನವು ಸ್ವತಂತ್ರ ಸ್ಥಾನಮಾನ ಹೊಂದಿದ್ದವು. ಆದರೆ ಕಾರ್ಯತಃ ಹೆಚ್ಚಿನ ರಾಜ್ಯಗಳನ್ನು (ಔಧ್, ಸತಾರಾ, ನಾಗಪುರ, ಝಾನ್ಸಿ ಮತ್ತು ಕರ್ನಾಟಕ) ಬ್ರಿಟಿಷರು ಸ್ವಾಧೀನಪಡಿಸಿಕೊಂಡಿದ್ದರು ಮತ್ತು ಇನ್ನುಳಿದ ಹಲವು ರಾಜ್ಯಗಳಲ್ಲಿ (ಭರತ್‌ಪುರ, ಮೈಸೂರು ಮತ್ತು ಗ್ವಾಲಿಯರ್ ಮೊದಲಾದವು) ಬ್ರಿಟಿಷರು ಆ ರಾಜ್ಯಗಳ ಆಂತರಿಕ ಆಡಳಿತದಲ್ಲಿ ಮಧ್ಯ ಪ್ರವೇಶಿಸಿದ್ದುದು ಮಾತ್ರವಲ್ಲದೆ ಅಲ್ಲಿನ ನಾಯಕರನ್ನು ಪದಚ್ಯುತಗೊಳಿಸಿದ್ದರು ಅಥವಾ ಸ್ಥಾನ ಭ್ರಷ್ಟರನ್ನಾಗಿ ಮಾಡಿದ್ದರು.

1841 ರಲ್ಲಿ 'ಯಾವುದೇ ರೀತಿಯ ನ್ಯಾಯ ಸಮ್ಮತವಾದ ಪ್ರಾಂತ ಅಥವಾ ಆದಾಯದ ಸ್ವಾಧೀನವನ್ನು ನಿಷೇಧಿಸುವ' ನೀತಿಯನ್ನು ಕೋರ್ಟ್ ಆಫ್ ಡೆರೆಕ್ಟರ್ ನಿಶ್ಚಿತವಾಗಿ ಅಳವಡಿಸಿತು ಮತ್ತು ಲಾರ್ಡ್ ಡಾಲ್ ಹೌಸಿ ಈ ನೀತಿಯನ್ನು ಸಂಪೂರ್ಣವಾಗಿ ಜಾರಿಗೆ ತಂದ. 1857 ರಲ್ಲಿನ ದಂಗೆಯ ಆರಂಭ ಈ ನೀತಿಯ ಮೇಲಣ ಭಯಂಕರ ಟೀಕೆಯಾಗಿ ಕಂಡು ಬಂದಿತು ಮತ್ತು ನಿರ್ಧಾರವನ್ನು ಚಕ್ರವರ್ತಿಗೆ ವರ್ಗಾಯಿಸಿದಾಗ ಸ್ಥಳೀಯ ರಾಜ್ಯಗಳತ್ತ ನೀತಿ ಸಂಪೂರ್ಣವಾಗಿ ಪುನರ್ ನಿರ್ದೇಶನಗೊಂಡಿತ್ತು. ಬ್ರಿಟಿಷ್ ಇಂಡಿಯಾದಲ್ಲಿನ ಇನ್ನಿತರ ಬದಲಾವಣೆಗಳಿಗಿಂತ ಈ ಹೊಸ ಸಂಬಂಧ ಮಂದಗತಿಯಲ್ಲಿ ಹಾಗೂ ಕ್ರಮೇಣ ರೂಪುಗೊಂಡಿತು. ಇದು ಭಾಗಶಃ ನೀತಿಯ ಲಿಖಿತ ಘೋಷಣೆಗಳಿಂದಲಾದರೂ ಪ್ರಧಾನವಾಗಿ ರೂಢಿಬದ್ಧ ಹಾಗೂ ಆಚರಣೆಯಿಂದಾಗಿತ್ತು.

ಹೊಸ ನೀತಿಯು ರಾಣಿಯ ಪ್ರಸಿದ್ಧ ಪತ್ರಿಕೆಯಲ್ಲಿದ್ದ "ನಮ್ಮ ಪ್ರಸಕ್ತ ಪ್ರಾಂತೀಯ ಸ್ವಾಧೀನಗಳನ್ನು ವಿಸ್ತರಿಸುವ ಬಯಕೆ ನಮಗಿಲ್ಲ" ಎಂಬ ಖಚಿತವಾದ ಪ್ರಮಾಣದಿಂದ ಘೋಷಿಸಲ್ಪಟ್ಟಿತ್ತು. ಈ ಪ್ರಕಟಣೆಯು ಈ ಘೋಷಣೆಯ ಸಂಪೂರ್ಣವಾದ ರೀತಿಯಲ್ಲಿ ನಡೆಸಿಕೊಂಡು ಹೋಗಲು ಇತರ ಕ್ರಮಗಳಲ್ಲದಿದ್ದರೆ ಸಮಸ್ಯೆಯನ್ನೇನೂ ಬಗೆಹರಿಸುತ್ತಿರಲಿಲ್ಲ. ಇತ್ತೀಚಿನ ಸ್ವಾಧೀನಪಡಿಸಿಕೊಳ್ಳುವಿಕೆಗೆ ಕಾರಣಗಳೆಂದರೆ:-

1. ನಿಜ ಉತ್ತರಾಧಿಕಾರಿಗಳ ವಿಫಲತೆ

2. ಸ್ಥಳೀಯ ರಾಜರ ದುರಾಡಳಿತ

ಸ್ವಾಧೀನಪಡಿಸಿಕೊಳ್ಳದಿರುವ ನೀತಿಯನ್ನು ಕಾರ್ಯ ರೂಪಕ್ಕೆ ತರುವ ಮೊದಲು ಇಂತಹ ಪರಿಸ್ಥಿತಿಗಳನ್ನು ಎದುರಿಸಲು ಕ್ರಮಗಳನ್ನು ರೂಪಿಸಬೇಕಿತ್ತು.

ಮೊದಲನೆಯದು ಸುಲಭವಾದ ಪರಿಹಾರವನ್ನು ಸೂಚಿಸಿತು ಮತ್ತು ಅದನ್ನು ಸುಲಭವಾಗಿ ಆಚರಣೆಗೆ ತರಲಾಯಿತು. 1860 ರಲ್ಲಿ ರಾಜರುಗಳಿಗೆ ಸನ್ನದಗಳನ್ನು ನೀಡಲಾಯಿತು. ಇದರ ಪ್ರಕಾರ ವಾಸ್ತವ ಉತ್ತರಾಧಿಕಾರಿಗಳಿಲ್ಲದಿದ್ದಲ್ಲಿ ಹಿಂದೂ ರಾಜರು ದತ್ತುಪುತ್ರ ಸ್ವೀಕಾರ ಮಾಡಬಹುದಿತ್ತು ಮತ್ತು ಮುಸಲ್ಮಾನ ರಾಜರು ತಮ್ಮ ಕಾನೂನಿನಲ್ಲಿ ಹೇಳಲಾಗಿರುವ ಯಾವುದೇ ರೀತಿಯಿಂದಲಾದರೂ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಬಹುದಿತ್ತ. ದತ್ತು ಸ್ವೀಕಾರದ ಸನ್ನದು ಎಂದು ಕರೆಯಲಾಗುತ್ತಿದ್ದ ಇದು ರಾಜ್ಯಗಳ ನಿರಂತರತೆಯ ಬಗ್ಗೆ ಭರವಸೆ ನೀಡಿದ್ದವು.

ದುರಾಡಳಿತಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿಗಳು ಮತ್ತಷ್ಟು ಜಟಿಲವಾಗಿದ್ದವು. ಯಾವುದೇ ರೀತಿಯ ನಿರ್ದಿಷ್ಟ ನೀತಿ ನಿಯಮಗಳಿಂದ ಅವುಗಳ ಬಗ್ಗೆ ವ್ಯವಹರಿಸುವಂತಿರಲಿಲ್ಲ. 1858 ರ ತರುವಾಯ ನಡೆದ ಘಟನೆಗಳಿಂದ ನಿರ್ಣಯಿಸುವುದಾದರೆ ಹೊಸ ನೀತಿ ದುರಾಡಳಿದ ಆಡಳಿತಗಾರರನ್ನು ದಂಡಿಸುವುದು ಮತ್ತು ಅವಶ್ಯವಾದಲ್ಲಿ ಅವರನ್ನು ಪದಚ್ಯುತಗೊಳಿಸುವುದೇ ಹೊರತು ಅವರ ದುಷ್ಕಾರ್ಯಗಳಿಗಾಗಿ ರಾಜ್ಯವನ್ನು ಸ್ವಾಧಿನಪಡಿಸಿಕೊಳ್ಳವುದಲ್ಲವೆಂಬುದೇ ಆಗಿದ್ದಂತೆ ಕಂಡು ಬರುತ್ತದೆ. ಹೆಚ್ಚಿನ ಉಗ್ರ ಕ್ರಮಗಳನ್ನು ಸಮರ್ಥಿಸುವಷ್ಟರ ದುರಾಡಳಿತ ಪರಮಾವಧಿಯನ್ನು ತುಲುಪುವ ಮೊದಲೇ ಆಂತರಿಕ ಆಡಳಿತದಲ್ಲಿ ಮಧ್ಯೆ ಪ್ರವೇಶಿಸುವುದು ಈ ಹೊಸ ನೀತಿಯ ಮತ್ತೊಂದು ಕ್ರಮವಾಗಿದ್ದಿತು.

ಕೆಲವು ವಾಸ್ತವ ಘಟನೆಗಳು ಹೊಸ ನೀತಿಯ ಪ್ರವೃತ್ತಿಯನ್ನು ವಿವರಿಸುತ್ತವೆ. ಮಲ್ಹಾರ್‌ರಾಯ್ ಗಾಯಕವಾಡನದೇ ಅತ್ಯಂತ ಪ್ರಮುಖ ಘಟನೆಯಾಗಿದೆ. ಸಂಪೂರ್ಣ ದುರಾಡಳಿತದ ಆಪಾದನೆಗೆ ಅವನು ಗುರಿಯಾಗಿದ್ದ ಮತ್ತು ರೆಸಿಡೆಂಟ್ ಕರ್ನಲ್ ವಾರ್‍ರೈ ಅವನ ಆಡಳಿತದ ದೋಷಗಳನ್ನು ಹೊರಗೆಡಹಿದ. ಅನಂತರ, ಗಾಯಕವಾಡ ರೆಸಿಡೆಂಟ್ ಆಹಾರದಲ್ಲಿ ವಜ್ರದ ಪುಡಿ ಸೇರಿಸಿ ವಿಷ ವುಣಿಸಲು ಪ್ರಯತ್ನಿಸಿದನೆಂದು ಆಪಾದಿಸಲಾಯಿತು. (ನವೆಂಬರ್ 1874) . 1875 ರ ಜನವರಿಯಲ್ಲಿ ಲಾರ್ಡ್ ನಾರ್ಥ್ ಬ್ರೂಕ್ ಗಾಯಕವಾಡನನ್ನು ಬಂಧಿಸಿದ ಮತ್ತು ಅವನ ವಿಚಾರಣೆಗೆ ಒಂದು ವಿಚಾರಣಾ ಮಂಡಳಿಯನ್ನು ನೇಮಿಸಿದ. ಈ ವಿಚಾರಣಾ ಮಂಡಳಿಯಲ್ಲಿ ಮೂವರು ಭಾರತೀಯರೂ, ಮೂರು ಇಂಗ್ಲೀಷರು ಇದ್ದು, ಬಂಗಾಳದ ಮುಖ್ಯ ನ್ಯಾಯಾಧೀಶ ಇದರ ಅಧ್ಯಕ್ಷನಾಗಿದ್ದನು. ವಿಚಾರಣಾ ಆಯೋಗ ತನ್ನ ತೀರ್ಪಿನಲ್ಲಿ ಒಮ್ಮತದ್ದಾಗಿರಲಿಲ್ಲ. ಗಾಯಕವಾಡ್ ತಪ್ಪಿತಸ್ಥನೆಂದು ಮೂವರು ಇಂಗ್ಲೀಷರು ತೀರ್ಪಿತ್ತರು. ಆದರೆ ಭಾರತದ ಮೂವರು ಘನ ಸದಸ್ಯರಾಗಿದ್ದ ಗ್ವಾಲಿಯರ್, ಜಯಪುರದ ಮಹಾರಾಜರು ಮತ್ತು ಸರ್ ದಿನಕರ್ ರಾವ್ ಅಪರಾಧ ಸ್ಥಿರಪಟ್ಟಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗಾಗಿ ಕೊಲೆಗೆ ಪ್ರಯತ್ನ ನಡೆಸಿದನೆಂಬ ಆಪಾದನೆಯಿಂದ ಗಾಯಕವಾಡ್‌ನನ್ನು ಭಾರತ ಸರ್ಕಾರ ಮುಕ್ತಗೊಳಿಸಿತು. ಆದರೆ, ಅವನ "ಕುಪ್ರಸಿದ್ಧ ದುರ್ನಡತೆ" ಅವನ ರಾಜ್ಯದ ಸಂಪೂರ್ಣ ದುರಾಡಳಿತ ಮತ್ತು ಅಗತ್ಯ ಸುಧಾರಣೆಗಳನ್ನು ಕಾರ್ಯ ರೂಪಕ್ಕೆ ತರಲು ಅವನ ಅಸಮರ್ಥತೆಯ" ಕಾರಣಗಳಿಗಾಗಿ ಅವನನ್ನು ಪದಚ್ಯುತಿಗೊಳಿಸಿತು.

ಹೊಸ ಗಾಯವಾಡನೊಬ್ಬನನ್ನು ಅಧಿಕಾರಕ್ಕೆ ತರಲಾಯಿತು. ಸಯ್ಯಾಜಿರಾವ್ ಎಂಬ ಬಾಲಕನನ್ನು ಆಯ್ಕೆ ಮಾಡಿದರು. ಈ ಬಾಲಕ ಆಳುತ್ತಿದ್ದ ರಾಜವಂಶದ ದೂರದ ಸಂಬಂಧಿಯಾಗಿದ್ದ. ಬಾಲಕನಿಗೆ ಸರಿಯಾದ ಶಿಕ್ಷಣ ಹಾಗೂ ತರಬೇತಿಗಾಗಿ ಸೂಕ್ತ ಏರ್ಪಾಟನ್ನು ಮಾಡಲಾಯಿತು. ಬಾಲಕನ ಅಪ್ರಾಪ್ತ ವಯಸ್ಸಿನಲ್ಲಿ ಸರ್. ಟಿ. ಮಾಧವ ರಾವ್ ರಾಜ್ಯದ ಆಡಳಿತವನ್ನು ಸಮರ್ಥ ರೀತಿಯಲ್ಲಿ ನಡೆಸಿದ. ಈ ರೀತಿಯಲ್ಲಿ ಸಿಂಹಾಸನಕ್ಕೆ ಬಂದ ಬಾಲಕ ಭಾರತದ ಶ್ರೇಷ್ಠ ಆಡಳಿಗಾರರಲ್ಲೊಬ್ಬನಾದ ಮತ್ತು ಅವನ ಮಿತವ್ಯಯವಾದ ನೇತೃತ್ವದಲ್ಲಿ ಬರೋಡ ಇಡೀ ಭಾರತದಲ್ಲಿ ಅತ್ಯಂತ ಪ್ರಗತಿಪರ ರಾಜ್ಯಗಳಲ್ಲೊಂದಾಗಿ ಪರಿಣಮಿಸಿತು. ಜನವರಿ 1939 ರಲ್ಲಿ ಅವನು ಬಲವಾದ.

ಮಣಿಪುರದ ಪ್ರಕರಣ ಈ ಹೊಸ ನೀತಿಗೆ ಮತ್ತೊಂದು ನಿದರ್ಶನವನ್ನು ಒದಗಿಸುತ್ತದೆ. 1890 ರ ಸೆಪ್ಟೆಂಬರ್ 21 ರ ಅರಮನೆಯ ದಂಗೆಯ ಫಲವಾಗಿ ಹೊಸ ಮಹಾರಾಜ ಸೂರಚಂದ್ರನನ್ನು ಪದಚ್ಯುತಗೊಳಿಸಲಾಯಿತು. ಸಮರ್ಥ ಹಾಗೂ ಜನಪ್ರಿಯ

ವ್ಯಕ್ತಿಯಾಗಿದ್ದ ಸೇನಾಪತಿ ಟಿಕೇಂದ್ರಜಿತನೇ ಈ ದಂಗೆಗೆ ಪ್ರಚೋದಕನೆಂದು ಅನುಮಾನಿಸಲಾಗಿದ್ದರೂ ಇದರ ಬಗ್ಗೆ ಯಾವುದೇ ಖಚಿತ ಆಧಾರವಿರಲಿಲ್ಲ. ತನ್ನ ಪುನರ್‌ಸ್ಥಾಪನೆಗೆ ಸೂರಬಾಹು ಬ್ರಿಟಿಷರ ನೆರವು ಕೋರಿದ. ರಾಜಕೀಯ ಏಜೆಂಟ್ ಗ್ರೀಮ್‌ಪುಷ್ ಇದಕ್ಕೆ ವಿರುದ್ಧವಾಗಿದ್ದ ವೈಸರಾಯ್ ಲಾರ್ಡ್ ಲ್ಯಾನ್ಸ್ ಡೌನ್ ಹಾಗೂ ಅಸ್ಸಾಂನ ಚೀಫ್ ಕಮೀಷನರ್ ಕ್ವಿಂಟನ್‌ರ ನಡುವೆ 1891 ರ ಫೆಬ್ರವರಿ ಅಂತ್ಯದ ವೇಳೆಗೆ ನಡೆದ ಸಮಾಲೋಚನೆಯ ತರುವಾಯ ಮಣಿಪುರದ ಮಹಾರಾಜನಾಗಿ ಮಾನ್ಯ ಮಾಡಲು ಭಾರತ ಸರ್ಕಾರ ತೀರ್ಮಾನಿಸಿತು.

1. ರಾಜಕೀಯ ಏಜೆಂಟ್‌ನ ಸಲಹೆಯ ಮೇಲೆ ರಾಜ್ಯವನ್ನಾಳುವುದು

2. ರೆಸಿಡೆನ್ಸಿಯಲ್ಲಿ 300 ಸೈನಿಕರನ್ನು ಹೊಂದಿರಲು ರಾಜಕೀಯ ಏಜೆಂಟನಿಗೆ ಅವಕಾಶ ನೀಡುವುದು ಮತ್ತು

3. ಟಿಕೇಂದ್ರ ಜಿತನನ್ನು ಮಣಿಪುರದಿಂದ ಗಡೀಪಾರು ಮಾಡುವುದು ಇವೇ ಆ ಷರತ್ತುಗಳಾಗಿದ್ದವು. ಇದನ್ನು ಕಾರ್ಯಾಚರಣೆಗೆ ತರಲು 400 ಘೂರ್ಖಾ ಸೈನಿಕರು ಹಾಗೂ ಕೆಲವು ಮಂದಿ ಪೌರರೊಡನೆ ಕ್ವಿಂಟನ್ 1891 ರ ಮಾರ್ಚ್‌ನಲ್ಲಿ ಮಣಿಪುರದತ್ತ ಹೊರಟ. ಕ್ವಿಂಟನ್ ಮಾರ್ಚ್ 24 ರಂದು ಟಿಕೇಂದ್ರ ಜಿತನನ್ನು ಅವನ ಮನೆಯಲ್ಲಿ ಬಂಧಿಸಲು ಪ್ರಯತ್ನಿಸಿದಾಗ ಟಿಕೇಂದ್ರಜಿತ್ ತನ್ನ ಮಣಿಪುರದ ಸೈನಿಕರೊಡನೆ ಪ್ರಬಲ ವಿರೋಧವನ್ನೊಡ್ಡಿದ ಪರಿಣಾಮವಾಗಿ ಬ್ರಿಟಿಷ್ ಪಡೆ ರೆಸಿಡೆನ್ಸಿಗೆ ಹಿಮ್ಮೆಟ್ಟಬೇಕಾಯಿತು. ಮಣಿಪುರಿ ಸೈನಿಕರು ರೈಸಿಡೆನ್ಸಿಯ ಮೇಲೂ ದಾಳಿ ಮಾಡಿದರು. ಬ್ರಿಟಿಷರ ಸ್ಥಿತಿ ಬಹುಮಟ್ಟಿಗೆ ನಿರಾಶಾದಾಯಕವಾಗಿದ್ದ ಸಮಯದಲ್ಲಿ ಯುದ್ಧ ವಿರಾಮವೇರ್ಪಟ್ಟಿತು. ಟಿಕೇಂದ್ರ ಜಿತನೊಡನೆ ಒಂದು ಸಂದರ್ಶನ ಏರ್ಪಡಿಸಲಾಯಿತು. ಇದರಲ್ಲಿ ಕ್ವಿಂಟನ್, ಗ್ರೀಮ್‌ವುಡ್, ಲೆಫ್ಟಿನೆಂಟ್ ಸಿಂಪ್ಸನ್ ಮತ್ತು ಇತರ ಇಬ್ಬರು ಇಂಗ್ಲೀಷರು ಹಾಜರಿದ್ದರು. ಆದರೆ ಮಾತುಕತೆಗಳು ಫಲಪ್ರದವಾಗಿರಲಿಲ್ಲ. ಬ್ರಿಟಿಷರ ತಂಡ ಮಹಾದ್ವಾರದತ್ತ ಹೊರಟಾಗ ಉದ್ರಿಕ್ತ ಗುಂಪೊಂದು ಅವರ ಮೇಲೆ ದಾಳಿ ಮಾಡಿತು ಮತ್ತು ಟಿಕೇಂದ್ರ ಜಿತನ ಅರಿವಿಲ್ಲದಂತೆಯೆ ಟೊಂಗಾಲ್ ಜನರಲ್ ನಾಲ್ವರು ಇಂಗ್ಲೀಷರನ್ನು ಕೊಂದನು. ಉಳಿದವರು ಮಾರ್ಚ್ 31 ರಂದು ಬ್ರಿಟಿಷ್ ಪ್ರಾಂತಕ್ಕೆ ಹಿಂದಿರುಗಿದರು.

ಈ 'ಹೀನಾಯಕರ ಕಗ್ಗೊಲೆ' ಯ ಬಗ್ಗೆ ಏಪ್ರಿಲ್ 8 ರಂದು ಕೇಳಿದ ಬ್ರಿಟಿಷ್ ಸರ್ಕಾರ ತಕ್ಷಣವೇ ಅದರ ಬಗ್ಗೆ ಪ್ರತೀಕಾರ ಮಾಡಲು ಸೇನಾ ಪಡೆಯನ್ನು ಕಳುಹಿಸಿತು. ಮೇ 23 ರ ವೇಳೆಗೆ ಕುಲಚಂದ್ರ, ಟೊಂಗಾಲ್ ಜನರಲ್ ಹಾಗೂ ಟಿಕೇಂದ್ರ ಜಿತರನ್ನು ಸೆರೆಹಿಡಿಯಲಾಯಿತು. ಟಿಕೇಂದ್ರ ಜಿತ್ ಹಾಗೂ ಟೊಂಗಾಲ್ ಜನರಲ್‌ರನ್ನು ವಿಶೇಷ ನ್ಯಾಯಾಲಯವೊಂದು ವಿಚಾರಣೆ ನಡೆಸಿತು. ಕೆಲವರ ಅಭಿಪ್ರಾಯದ ಪ್ರಕಾರ ಮಣಿಪುರದ ಪ್ರಜೆಗಳ ಮೇಲೆ ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯೇ ಇರಲಿಲ್ಲ. ಅವರನ್ನು ಮರಣದಂಡನೆಗೆ ಗುರಿಮಾಡಿ ಆಗಸ್ಟ್ 21 ರಂದು ಬಹಿರಂಗವಾಗಿ ಗಲ್ಲಿಗೇರಿಸಲಾಯಿತು. ಆಸ್ತಿಯನ್ನು ವಶಮಾಡಿಕೊಂಡು ಕುಲಚಂದ್ರ ಹಾಗೂ ಅವನ ಸೋದರ ಅಂಗಾಮೋ ಸೇನಾರ ಮೇಲಣ ಮರಣದಂಡನೆಯನ್ನು ಜೀವದಾನಕ್ಕಾಗಿ ಪರಿವರ್ತಿಸಿ ಗಡೀಪಾರು ಮಾಡಲಾಯಿತು. ಟಿಕೇಂದ್ರಜಿತ್ ವಾಸ್ತವವಾಗಿ ಕೊಲೆಯ ಆಪಾದನೆಗೆ ಗುರಾಯದ ಅಥವಾ ಭಾರತದ ಸಾಮ್ರಾಜ್ಞಿಯ ವಿರುದ್ಧ ಯುದ್ಧ ಹೂಡುವ ಪ್ರಯತ್ನ ನಡೆಸಿದ. ಆಪಾದನೆಯ ತಪ್ಪಿತಸ್ಥನಲ್ಲ. ಆದರೆ ಯಾವುದೇ ಸ್ಥಳೀಯ ರಾಜ್ಯದ ಕಾರ್ಯತಃ ಅಥವಾ ನ್ಯಾಯವಾದ ದೊರೆಯ ಬಗ್ಗೆ ಬ್ರಿಟಿಷರು ಸಹಿಸಲಾಗದಂತಹ ತನ್ನ ಸಾಮರ್ಥ್ಯ ಹಾಗೂ ಪುರುಷ ಯೋಗ್ಯ ಗುಣಗಳಿಗೆ ತಾನು ಅನುಭಾವಿಸಬೇಕಾದಂತಹ ಪರಮಾವಧಿ ಶಿಕ್ಷೆ ಎಂಬುದನ್ನು ಆಧುನಿಕ ಸಂಶೋಧನೆಗಳು ಹೊರಗೆಡಗಿವೆ. 1891 ರ ಸೆಪ್ಟೆಂಬರ್‌ನಲ್ಲಿ ಐದು ವರ್ಷದ ಬಾಲಕನೊಬ್ಬನನ್ನು ಮಣಿಪುರದ ಹೊಸ ಆಳ್ವಿಕೆಗಾರನಾಗಿ ನೇಮಕ ಮಾಡಲಾಯಿತು ಮತ್ತು ಅವನು ಅಪ್ರಾಪ್ತ ವಯಸ್ಕನಾಗಿದ್ದುದರಿಂದ ರಾಜ್ಯದ ಆಳ್ವಿಕೆಯನ್ನು ರಾಜಕೀಯ ಏಜೆಂಟ್ ನಡೆಸುತ್ತಿದ್ದನು.

ಬರೋಡ ಹಾಗೂ ಮಣಿಪುರದ ಘಟನೆಗಳು ಆಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯ ಕಾಲದಲ್ಲಿ ಅಂತಹುದೇ ಕಾರಣಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಔದ್, ಪಂಜಾಬ್, ಕೊಡಗು ಹಾಗೂ ಇನ್ನಿತರ ರಾಜ್ಯಗಳ ಘಟನೆಗಳಿಗೆ ಗಮನಾರ್ಹವಾದ ವೈದೃಶ್ಯವನ್ನು ತೋರುತ್ತವೆ. ವಿವಾದಕ್ಕೊಳಗಾದ ಉತ್ತರಾಧಿಕಾರ, ದುರಾಡಳಿತ, ಆಂತರಿಕ ಗಲಭೆ ಇತ್ಯಾದಿಗಳ ಪರಿಸ್ಥಿತಿಗಳಲ್ಲಿ ವಿಷಮ ಪರಿಸ್ಥಿತಿಗಳನ್ನು ಸರಿಪಡಿಸಲು ಮಧ್ಯ ಪ್ರವೇಶಿಸುವುದು ಮಾತ್ರವೆ ಅಲ್ಲದೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲೂ ಪರಮಾಧಿಕಾರ ಸರ್ಕಾರದ ಸಿದ್ಧತೆಗೆ ಅವು ಸಾಕ್ಷಿಯಾಗಿವೆ. ಮತ್ತೊಂದು ಕಡೆ, ಭಾರತೀಯ ರಾಜ್ಯಗಳನ್ನು ಸ್ವಾಧೀನ ಪಡಿಸಿಕೊಳ್ಳುವುದರ ಬಗ್ಗೆ ತಮಗೆ ಇಷ್ಟ ಇಲ್ಲದಿರುವುದನ್ನು ಅವು ಅಷ್ಟೇ ಪ್ರಮಾಣದಲ್ಲಿ ತೋರಿವೆ.

ರಾಜ್ಯಗಳ ಪ್ರತ್ಯೇಕ ಅಸ್ತಿತ್ವವವನ್ನು ಉಳಿಸಿಕೊಂಡು ಬರುವ ಬ್ರಿಟಿಷರ ಇಚ್ಛೆ ಮೈಸೂರಿನ ಉದಾಹರಣೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆವ. 1831 ರಲ್ಲಿ ರಾಜ್ಯವನ್ನು ಬ್ರಿಟಿಷರ ಆಡಳಿತಕ್ಕೆ ಒಳಪಡಿಸಲಾಯಿತು ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಐವತ್ತು ವರ್ಷಗಳ ಬ್ರಿಟಿಷ್ ಆಳ್ವಿಕೆಯ ತರುವಾಯ ರಾಜ್ಯವನ್ನು ಅದರ ನ್ಯಾಯಬದ್ಧ ರಾಜನಿಗೆ ವಹಿಸಲಾಯಿತು (1881). 'ಮೈಸೂರಿನ ಅಧಿಕಾರವನ್ನು ಮತ್ತೆ ನೀಡಿದುದು' ಭಾರತೀಯ ರಾಜ್ಯಗಳ ಬಗ್ಗೆ ಹೊಸ ನೀತಿಗೆ ಸಂಪೂರ್ಣವಾಗಿ ಅನುಗುಣವಾಗಿರುವ ಮತ್ತು ಗಮನಾರ್ಹ ನಿದರ್ಶನವಾಗಿದೆ.

ಭಾರತದ ರಾಜ್ಯಗಳ ಸ್ವಾಧೀನಪಡಿಸಿಕೊಳ್ಳುವಿಕೆಯು ಹಿಂದಿನ ವಿಷಯವಾಯಿತು ಎಂಬುದನ್ನು ಈ ನಿದರ್ಶನಗಳು ಖಚಿತವಾಗಿ ಪ್ರದರ್ಶಿಸಿವೆ ಮತ್ತು ವಾಸ್ತವ ಉತ್ತರಾಧಿಕಾರಿಗಳೆಲ್ಲದಿರುವಿಕೆಯಾಗಲಿ ಯಾವುದೇ ರಾಜನ ದುರಾಡಳಿತವಾಗಲಿ ರಾಜ್ಯದ ಅಸ್ತಿತ್ವಕ್ಕೆ ಯಾವ ಅಪಾಯವನ್ನು ಉಂಟು ಮಾಡುತ್ತಿರಲಿಲ್ಲವೆಂಬ ಅಂಶವನ್ನು ಈ ನಿದರ್ಶನಗಳು ಸ್ಪಷ್ಟಪಡಿಸುತ್ತವೆ. ಸರ್ಕಾರ ಕಂಪನಿಯಿಂದ ಚಕ್ರವರ್ತಿಗೆ ವರ್ಗಾಹಿತವಾದುದರಿಂದ ಈವರೆಗೆ ಭಾರತೀಯ ರಾಜ್ಯಗಳಿಗೆ ಅನುಕೂಲಕರವಾಗಿತ್ತೆಂಬ ಅಂಶ ನಿಸ್ಸಂದೇಹವಾದುದು. ಆದರೆ ಈ ಸುರಕ್ಷತತೆ ಹಾಗೂ ಸ್ಥಿರತೆಯ ಹೆಚ್ಚಳದೊಡನೆಯೇ ಅವುಗಳ ಸ್ಥಾನಮಾನಗಳಲ್ಲಿ ಕ್ರಮೇಣವಾದ ಕ್ಷೀಣತೆ ಕಂಡು ಬಂದಿತು. ಇದು ಸ್ವಲ್ಪ ಮಟ್ಟಿಗೆ ಅನಿವಾರ್ಯವಾದುದಾಗಿದ್ದರೆ ಸ್ವಲ್ಪಮಟ್ಟಿಗೆ ಉದ್ದೇಶಪೂರ್ವಕ ನೀತಿಯ ಫಲಿತಾಂಶವಾಗಿತ್ತು.

1858 ರಲ್ಲಿದ್ದ ರಾಜ್ಯಗಳ ಸಂಖ್ಯೆ ಸುಮಾರು ಆರುನೂರು. ಇವುಗಳ ಪೈಕಿ ಸುಮಾರು ಐನೂರಕ್ಕೂ ಹೆಚ್ಚಿನವು ಸಣ್ಣಪುಟ್ಟ ರಾಜ್ಯಗಳಾಗಿದ್ದವು. ಬ್ರಿಟಿಷ್ ಸರ್ಕಾರದೊಡನೆ ಈ ಸಣ್ಣ ರಾಜ್ಯಗಳ ಸಂಬಂಧವನ್ನು ಲಿಖಿತ ರೂಪದಲ್ಲಿ ಯಾವಾಗಲೂ ಸ್ಪಷ್ಟಪಡಿಸಿರಲಿಲ್ಲ. ಉಳಿದ ರಾಜ್ಯಗಳಿಗೆ ಸಂಬಂಧಿಸಿದಂತೆ ಅಂತಹ ಸಂಬಂಧಗಳನ್ನು ಒಪ್ಪಂದಗಳ ಮೂಲಕ ವಿವರಿಸಲಾಗಿತ್ತು. ಆದರೆ ಒಪ್ಪಂದದ ಹಕ್ಕುಗಳ ರಾಜ್ಯದಿಂದ ರಾಜ್ಯಕ್ಕೆ ಗಣನೀಯ ಪ್ರಮಾಣದಲ್ಲಿ ಭಿನ್ನವಾಗಿದ್ದವು. ಹಾಗಾಗಿ ಚಕ್ರಾಧಿಪತ್ಯದ ಅಧಿಕಾರಕ್ಕೆ ಅವು ವಿವಿಧ ಪ್ರಮಾಣದಲ್ಲಿ ಒಳಪಟ್ಟಿದ್ದವು. ಹೆದರಾಬಾದಿನಂಥ ಕೆಲವು ರಾಜ್ಯಗಳು ಮೊದಲಿಗೆ ಕಂಪೆನಿಯೊಡನೆ ಸಮಾನ ಷರತ್ತುಗಳ ಆಧಾರದ ಮೇಲೆ ಒಪ್ಪಂದ ಮಾಡಿಕೊಂಡಿದ್ದವು. ಕ್ರಮೇಣ ಕೆಲವೊಂದು ನಿರ್ದಿಷ್ಟ ಹಕ್ಕುಗಳನ್ನು (ಉದಾ. ವಿದೇಶೀ ನೀತಿ ನಿಯಂತ್ರಣ) ಬಿಟ್ಟುಕೊಂಡದ್ದು ಮತ್ತು ಮತ್ತೆ ಕೆಲವು ನಿರ್ದಿಷ್ಟ ಕರಾರುಗಳಿಗೆ (ನಿರ್ದಿಷ್ಟ ಪ್ರಮಾಣದ ಸೇನಾ ಸರಬರಾಜು) ಒಳಪಟ್ಟವು. ಈ ವಿಷಯಗಳನ್ನು ಬಿಟ್ಟರೆ, ತಾತ್ವಿಕವಾಗಿ ಅವು ಯಾವುದೇ ರೀತಿಯ ಬ್ರಿಟಿಷ್ ನಿಯಂತ್ರಣವಿಲ್ಲದೆ ಸಂಪೂರ್ಣವಾಗಿ ಸ್ವತಂತ್ರವಾಗಿದ್ದವು.

ರಜಪೂತ ರಾಜ್ಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಈ ರಾಜ್ಯಗಳ ರಾಜರು ಯಾವ ವಿದೇಶಿ ರಾಜ್ಯದೊಡನೆ ಯಾವ ರೀತಿಯ ಸಂಬಂಧವನ್ನು ಹೊಂದುವಂತಿರಲಿಲ್ಲ; ಯುದ್ಧದ ಸಮಯದಲ್ಲಿ ರಾಜ್ಯದ ಸಕಲ ಸಂಪನ್ಮೂಲಗಳೊಡನೆ ಅವು ಕಂಪನಿಗೆ ಸಹಾಯ ಮಾಡಬೇಕಿತ್ತು. ಆದರೆ ತಮ್ಮ ಪ್ರಾಂತದ ಎಲ್ಲೆಗಳೊಳಗೆ ಸಂಪೂರ್ಣ ಅಧಿಕಾರ ಪ್ರಯೋಗಿಸಲು ಒಪ್ಪಂದಗಳು ಅವಕಾಶ ಮಾಡಿಕೊಟ್ಟಿದ್ದವು.

ಮೈಸೂರು, ಬರೋಡ ಅಥವಾ ಜಾವ್‌ನಂತಹ ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ಬ್ರಿಟಿಷರು ಮಧ್ಯೆ ಪ್ರವೇಶಿಸಲು ಒಪ್ಪಂದ ನಿಶ್ಚಿತವಾಗಿ ಅವಕಾಶ ಮಾಡಿಕೊಟ್ಟಿತು. ಇಂತ ರಾಜ್ಯಗಳಿಂದ ಪ್ರತ್ಯೇಕವಾದ ಅಸ್ತಿತ್ವದ ಮೇಲೆ ಮೇಲ್ಕಂಡ ರಾಜ್ಯಗಳಿದ್ದವು. ಆದರೆ ಈ ರಾಜ್ಯಗಳಿಗೆ ಸೇರಿದಂತೆಯೂ ಸಂಬಂಧಗಳು ಒಪ್ಪಂದಗಳಿಂದ ವಿವರಿಸಲ್ಪಡುತ್ತಿದ್ದವು. ಇವುಗಳ ನಡುವಣ ಒಪ್ಪಂದ ಸಾರ್ವಭೌಮ ಅಧಿಕಾರವೊಂದು ತನ್ನ ಅಧೀನ ರಾಜ್ಯದ ಮೇಲೆ ವಿಧಿಸುವಂತಹ ಒಪ್ಪಂದವಾಗಿರದೆ ಎರಡು ಸ್ವತಂತ್ರ ಅಧಿಕಾರಗಳ ನಡುವಣ ಒಪ್ಪಂದದಂತೆ ಇರುತ್ತಿತ್ತು.

ಭಾರತೀಯ ರಾಜ್ಯಗಳಲ್ಲಿನ ಸ್ಥಾನಮಾನಗಳಲ್ಲಿನ ಈ ಭೇದಗಳನ್ನು ನಿರ್ಲಕ್ಷಿಸುವುದು ಮತ್ತು ತಾತ್ತ್ವಿಕವಾಗಿ ಹಾಗೂ ಕಾರ್ಯಚರಣೆಯಲ್ಲಿ ಬ್ರಿಟಿಷ್ ಚಕ್ರವರ್ತಿಯ ಸಾರ್ವಭೌಮತ್ವವನ್ನು ಎಲ್ಲರ ಮೇಲೂ ಏಕರೀತಿಯಲ್ಲಿ ಎತ್ತಿ ಹಿಡಿಯುವುದೇ ಚಕ್ರವರ್ತಿಯ ಸರ್ಕಾರದ ನೀತಿಯಾಗಿದ್ದಿತು. 1858 ರಿಂದ ಭಾರತದ ರಾಜ್ಯಗಳ ಬಗ್ಗೆ ಬ್ರಿಟಿಷ್ ಸರ್ಕಾರದ ಪ್ರವೃತ್ತಿಯ ಅಧ್ಯಯನ ನಡೆಸಿದಲ್ಲಿ ಈ ಅಂಶ ಯಾರಿಗಾದರೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ನೀತಿ ಅತ್ಯಂತ ನೇರವಾಗಿ ಪ್ರಕಟಗೊಂಡ ಅಂಶ 1876 ರ ಕಾಯ್ದೆಯಿಂದ ನಮಗೆ ತಿಳಿಯುತ್ತದೆ. ಇದರ ಪ್ರಕಾರ 1877 ರ ಜನವರಿ 1 ರಿಂದ ವಿಕ್ಟೋರಿಯಾ ರಾಣಿ 'ಭಾರತದ ಸಾಮ್ರಾಜ್ಞಿ' ಎಂಬ ಬಿರುದನ್ನು ಪಡೆದಳು. ಇದು ಭಾರತದ ರಾಜ್ಯಗಳನ್ನು ಒಮ್ಮೆಲೆ

ಬ್ರಿಟಿಷ್ ಸಾಮ್ರಾಜ್ಯಕ್ಕೊಳಪಡಿಸಿತ್ತು ಮತ್ತು ನ್ಯಾಯದ ದೃಷ್ಟಿಯಿಂದ ಹೇಳವುದಾದರೆ ರಾಜ್ಯಗಳ ರಾಜರು ಹಾಗೂ ಪ್ರಜೆಗಳು ಇನ್ನು ಮುಂದೆ ಬ್ರಿಟೀಷ್ ಸಾರ್ವಭೌಮದ ಅಧೀನರೆಂದು ವರ್ಗೀಕರಿಸಬೇಕಾಯಿತು. ತಾತ್ವಿಕವಾಗಿಯಂತೂ ಈ ವ್ಯತ್ಯಾಸ ಬಹುಮಟ್ಟಿನದಾಗಿತ್ತು. ಈಸ್ಟ್ ಇಂಡಿಯಾ ಕಂಪೆನಿಯ ಆಳ್ವಿಕೆಯ ದಿನಗಳಲ್ಲಿ ಈ ರಾಜ್ಯಗಳ ಸ್ಥಾನಮಾನಗಳ ಬಗ್ಗೆ ಮೇಲೆ ವಿವರಿಸಲಾಗಿದೆ. 1858 ರ ಪ್ರಸಿದ್ಧ ಪತ್ರಿಕೆಯ ಮೂಲಕ ಚಕ್ರವರ್ತಿ ಇದಕ್ಕೆ ಸಂಪೂರ್ಣ ಮಾನ್ಯ ನೀಡಿದ. ಪ್ರಸಿದ್ಧ ಪತ್ರಿಕೆ ಈ ರೀತಿ ಇದ್ದಿತು.

"ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರದಲ್ಲಿ ಅಥವಾ ಅವರೆಲ್ಲರೊಡನೆ ಭಾರತದ ಸ್ಥಳೀಯ ರಾಜರು ಮಾಡಿಕೊಂಡ ಎಲ್ಲ ಒಪ್ಪಂದಗಳು, ಕರಾರುಗಳನ್ನು ನಾವು ಅಂಗೀಕರಿಸಿದ್ದೇವೆ ಮತ್ತು ವಿದಿಪೂರ್ಣವಾಗಿ ಪಾಲಿಸುತ್ತೇವೆ ಮತ್ತು ಸ್ಥಳೀಯ ರಾಜರು ಸಹ ಅವುಗಳನ್ನು ಅದೇ ರೀತಿ ಪಾಲಿಸುವರೆಂದು ತಿಳಿಯುತ್ತೇವೆ ಎಂದು ಈ ಮೂಲಕ ಭಾರತದ ಸ್ಥಳೀಯ ರಾಜರುಗಳಿಗೆ ಪ್ರಕಟಿಸಿದ್ದೇವೆ".

"ನಮ್ಮ ಪ್ರಸಕ್ತ ಪ್ರಾಂತೀಯ ಸ್ವಾಧೀನಗಳನ್ನು ವಿಸ್ತರಿಸುವ ಯಾವ ಅಪೇಕ್ಷೆಯೂ ನಮಗಿಲ್ಲ ಮತ್ತು ಪ್ರಾಂತಗಳ ಮೇಲೆ ಯಾವುದೇ ರೀತಿಯ ಆಕ್ರಮಣಗಳಿಗೂ ನಾವು ಅವಕಾಶ ನೀಡುವುದಿಲ್ಲ ಅಥವಾ ನಮ್ಮ ಹಕ್ಕು ಭಾದ್ಯತೆಗಳ ಅಭಯ ಪಡೆದು ಉಲ್ಲಂಘಿಸುವುದಕ್ಕೆ ಅವಕಾಶ ನೀಡುವುದಿಲ್ಲ. ಇತರರ ಹಕ್ಕು ಬ್ಹಾದ್ಯತೆಗಳನ್ನು ನಾವು ಉಲ್ಲಂಘಿಸುವುದಿಲ್ಲ".

"ಸ್ಥಳೀಯ ರಾಜರ ಹಕ್ಕುಗಳು ಗೌರವ ಘನತೆಗಳನ್ನು ನಮ್ಮ ಹಕ್ಕುಗೌರವಗಳಂತೆಯೇ ಗೌರವಿಸುತ್ತೇವೆ; ಆಂತರಿಕ ಶಾಂತಿ ಹಾಗೂ ಸುಭದ್ರ ಸರ್ಕಾರಗಳಿಂದ ಮಾತ್ರ ಪಡೆಯಬಹುದಾದ ಅಭ್ಯುದಯ ಹಾಗೂ ಸಾಮಾಜಿಕ ಪ್ರಗತಿಯನ್ನು ಅವರು ಹಾಗೂ ನಮ್ಮ ಪ್ರಜೆಗಳು ಅನುಭವಿಸಲೆಂಬುದೇ ನಮ್ಮ ಬಯಕೆಯ ನೀತಿ".

ಭಾರತ ಸರ್ಕಾರವನ್ನು ಚಕ್ರವರ್ತಿ ವಹಿಸಿಕೊಂಡ ತರುವಾಯವೂ ಭಾರತದ ರಾಜ್ಯಗಳನ್ನು ಸ್ವತಂತ್ರ ಸಾರ್ವಭೌಮ ರಾಜ್ಯಗಳೆಂದು ಅಂಗೀಕರಿಸಲಾಗಿತ್ತು ಮತ್ತು ಬ್ರಿಟಿಷ್ ಸರ್ಕಾರದ ಅಧೀನ ರಾಜ್ಯಗಳಂತಲ್ಲದೆ ಮಿತ್ರ ರಾಷ್ಟ್ರಗಳಂತೆ ಅವನ್ನು ಭಾವಿಸಲಾಗಿತ್ತು ಎಂಬುದು ಮೇಲ್ಕಂಡ ಅಂಶದಿಂದ ಸುಸ್ಪಷ್ಟವಾಗಿದೆ. ಆದರೆ 1876 ರ ಕಾಯ್ದೆ ಈ ಅಂಶವನ್ನು ಸಂಪೂರ್ಣವಾಗಿ ಬದಲಾಯಿಸಿತು ಮತ್ತು ಇಂಗ್ಲೆಂಡಿನ ಚಕ್ರವರ್ತಿಯನ್ನು ಭಾರತದ ರಾಜ್ಯಗಳ ಅಧಿಪತಿಯನ್ನಾಗಿಯೂ ಮಾಡಿತು. ಈ ತರುವಾಯ ಬ್ರಿಟಿಷರು, ಕಾರ್ಯತಃ ಕೆಲವು ಕಾಲದಿಂದ ಹೊಂದಿದ್ದ ಸಾರ್ವಭಾಮಾಧಿಕಾರವನ್ನು ಈಗ ಧೈರ್ಯವಾಗಿ ವಹಿಸಿಕೊಂಡರು.

ಮೈಸೂರನ್ನು ಅದರ ಭಾರತದ ರಾಜರುಗಳಿಗೆ 1881 ರಲ್ಲಿ ವಹಿಸಿಕೊಟ್ಟ ವರ್ಗಾವಣೆ ದಸ್ತೈವಜಿನಲ್ಲಿ (Instrument of Transfer) ವಿವರಿಸಲಾದ ಷರತ್ತುಗಳಿಂದ ಹೊಸ ಸ್ಥಾನಮಾನಗಳು ಸ್ಪಷ್ಟವಾಗಿವೆ. ಈ ದಾಖಲೆಯನ್ನು ಹೊಸದಾಗಿ ಸರ್ಜನೆಗೊಂಡ ಮೈಸೂರಿನ ಹಿಂದೂ ರಾಜ್ಯದ ಸ್ಥಾನಮಾನಗಳನ್ನು ವೆಲ್ಲೆಸ್ಲಿ ವಿವರಿಸಿದ್ದ ಶ್ರೀರಂಗಪಟ್ಟಣದ ಒಪ್ಪಂದದೊಡನೆ ಹೋಲಿಸುವುದು ಬೋದಪ್ರದವೂ ಕುತೂಹಲಕಾರಿಯಾದುದೂ ಆಗಿದೆ.

ಶ್ರೀರಂಗಪಟ್ಟಣದ ಒಪ್ಪಂದದಲ್ಲಿ 'ಒಪ್ಪಂದಕ್ಕೊಳಪಡುವ ಪಕ್ಷಗಳ ಮಿತ್ರರು ಹಾಗೂ ಶತ್ರುಗಳನ್ನು ಪರಿಗಣಿಸಬೇಕು' ಎಂದು ವಿಧಿಸಲಾಗಿತ್ತು. ವರ್ಗಾವಣೆ ದಸ್ತೈವಜಿನ ಪ್ರಕಾರ ಮೈಸೂರಿನ ದೊರೆ ಮಹಾರಾಣಿಗೆ ರಾಜನಿಷ್ಠೆ ಹಾಗೂ ಅಧೀನತೆಯಲ್ಲಿ ವಿದೇಯವಾಗಿಬೇಕಿತ್ತು.

ಪರಮಾಧಿಕಾರದ ಈ ಎಲ್ಲ ಸ್ವೀಕರಣವು ಶ್ರೀರಂಗಪಟ್ಟಣದ ಒಪ್ಪಂದದಲ್ಲಿ ಪ್ರತ್ಯೇಕವಾಗಿ ಇಲ್ಲದಿದ್ದ ವರ್ಗಾವಣೆ ದಸ್ತೈವಜಿನಲ್ಲಿನ ಹಲವಾರು ಅವಕಾಶಗಳಿಂದ ಪೂರಕಗೊಂಡವು. ಇವುಗಳಿಂದಾಗಿ "ತಂತಿ ಮತ್ತು ರೈಲ್ವೆ" ಉಪ್ಪು ಹಾಗೂ ಅಫೀಮಿನ ತಯಾರಿಗೆ, ಪಾತಕಗಳ ನಿರ್ಮೂಲನ ಮತ್ತು ಬ್ರಿಟಿಷ್ ಇಂಡಿಯಾದ ಕರೆನ್ಸಿಯ ಬಳಕೆ " ಮುಂತಾದ ಆಡಳಿತ ಸಂಬಂಧಿ ವಿಷಯಗಳಲ್ಲಿ ಮೈಸೂರು ಸರ್ಕಾರ ಬ್ರಿಟಿಷರೊಡನೆ ಸಹ ಕಲಿಸಬೇಕಾಗಿತ್ತು.

ವಿಶೇಷವಾಗಿ ಗಮನಾರ್ಹವಾದ ಒಂದು ಹೊಸ ಸೌಲಭ್ಯ ಈ ದಸ್ತೈವಜಿನಲ್ಲಿತ್ತು. ಮೈಸೂರು ಸರ್ಕಾರದಲ್ಲಿನ ಯಾವುದೇ ರೀತಿಯ ಉತ್ತರಾಧಿಕಾರ ಗವರ್ನರ್-ಜನರಲ್-ಇನ್ ಕೌನ್ಸಿಲ ಮಾನ್ಯ ಮಾಡುವವರೆಗೆ ನ್ಯಾಯ ಸಮ್ಮತವಲ್ಲವೆಂಬುದು ಖಚಿತವಾದ ಘೋಷಣೆಯಾಗಿತ್ತು. ದತ್ತು ಸ್ವೀಕರವನ್ನು ನ್ಯಾಯಬದ್ಧಗೊಳಿಸುವುದರ ಮೂಲಕ ಭಾರತದ ರಾಜ್ಯಗಳ ಬೇಡಿಕೆಗೆ ಬಹುಮಟ್ಟಿಗೆ ರಿಯಾಯಿತಿಗಳನ್ನು ಚಕ್ರವರ್ತಿ ತೋರಿದ್ದರೂ ಈ ಉತ್ತರಾಧಿಕಾರದ ಹೊಸ ಸಿದ್ಧಾಂತದಿಂದ ಅದಕ್ಕೆ ಸಮನಾಗಿರುವುದಕ್ಕಿಂತ

ಹೆಚ್ಚಿನದಾಗಿತ್ತು. ರಾಜ್ಯಕ್ಕೆ ಉತ್ತರಾಧಿಕಾರಿಯಿಲ್ಲದೆ ರಾಜ ಕಾಲಾವಾದಗ ಮಾತ್ರ ರಾಜ್ಯದಲ್ಲಿನ ಉತ್ತರಾಧಿಕಾರದ ಬಗ್ಗೆ ಕಂಪೆನಿಯು ನಿಯಂತ್ರಿಸುವುದಾಗಿ ಹೇಳಿಕೊಂಡಿತ್ತು. ಆದರೆ ದಸ್ಸೈವಜಿನಲ್ಲಿ ಘೋಷಿಸಲಾದ ಹೊಸ ತತ್ತ್ವದ ಪ್ರಕಾರ ಬ್ರಿಟಿಷ್ ಸರ್ಕಾರ ಮಂಜೂರು ಮಾಡುವವರೆಗೆ ಭಾರತದ ಯಾವುದೇ ರಾಜ್ಯದಲ್ಲಿ ಉತ್ತರಾಧಿಕಾರ ನ್ಯಾಯಸಮ್ಮತವಾಗುವಂತಿರಲಿಲ್ಲ. ಇನ್ನು ಮುಂದೆ ಸರ್ಕಾರದಿಂದ ಅಂಗೀಕೃತವಾದ ರೀತಿ ಇದೇ ಎಂಬುದು ಭಾರತ ಸರ್ಕಾರ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್‌ರ ಎರಡೂ ಘೋಷಣೆಗಳಿಂದ ಸ್ಪಷ್ಟಪಟ್ಟಿತ್ತು. ಭಾರತ ಸರ್ಕಾರ 1884 ರಲ್ಲಿ ಈ ರೀತಿ ಬರೆದಿತ್ತು; "ಬ್ರಿಟಿಷ್ ಅಧಿಕಾರ ವರ್ಗದವರಿಂದ ಯಾವುದಾದರೂ ರೀತಿಯಲ್ಲಿ ಅಂಗೀಕಾರ ಪಡೆಯುವವರೆಗೆ ಸ್ಥಳೀಯ ರಾಜ್ಯವೊಂದಕ್ಕೆ ಉತ್ತರಾಧಿಕಾರ ನ್ಯಾಯ ಸಮ್ಮತವಲ್ಲ. "ಈ ಕೆಳಗೆ ಕಂಡಂತೆ 1891 ರಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಅದನ್ನೇ ಮತ್ತೆ ವಿವರಿಸಿದ. "ಪ್ರತಿಯೊಂದು ಉತ್ತರಾಧಿಕಾರಕ್ಕೆ ಬ್ರಿಟಿಷ್ ಸರ್ಕಾರ ಮಾನ್ಯತೆ ನೀಡಲೇಬೇಕು ಮತ್ತು ಅಂಗೀಕಾರ ನೀಡುವವರೆಗೆ ಯಾವುದೇ ಉತ್ತರಾಧಿಕಾರ ನ್ಯಾಯಸಮ್ಮತವಾಗುವುದಿಲ್ಲ". ಈ ರೀತಿಯಲ್ಲಿ ತಾತ್ತ್ವಿಕವಾಗಿ ಭಾರತದ ರಾಜನೊಬ್ಬನ ಮರಣದ ತರುವಾಯ ರಾಜವಿಚ್ಛತ್ತಿ ಉಂಟಾಗುತ್ತಿತ್ತು ಮತ್ತು ರಾಜನ ಮಗನೂ ಬ್ರಿಟಿಷ್ ಸರ್ಕಾರದಿಂದ ತನ್ನೊಳಗೆ ಅಂಗೀಕಾರ ದೊರೆಯುವವರೆಗೆ ಉತ್ತರಾಧಿಕಾರಿಯಾಗುವಂತಿರಲಿಲ್ಲ.

ಭಾರತದ ರಾಜ್ಯಗಳಲ್ಲಿ ಉತ್ತಮ ಸರ್ಕಾರ ಸ್ಥಾಪಿಸುವ ಅಗತ್ಯ ಎಲ್ಲೆಲ್ಲಿ ಕಂಡು ಬರುತ್ತದೋ ಅಲ್ಲಿನ ಆಂತರಿಕ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಿಸುವ ಬ್ರಿಟಿಷ್ ಸರ್ಕಾರದ ವಾದಕ್ಕೆ ಭಾರತೀಯ ರಾಜ್ಯಗಳ ಮೇಲೆ ಪರಮಾಧಿಕಾರಗದ ತತ್ತ್ವಸಮರ್ಥನೆಯನ್ನು ಆಧಾರವನ್ನು ನೀಡಿತು. ಪರಮಾಧಿಕಾರವುಳ್ಳವರಾಗಿ ಅವರು ರಾಜ್ಯಗಳಲ್ಲಿ ಉನ್ನತ ಮಟ್ಟದ ಆಡಳಿತವನ್ನು ಕಾಪಾಡಿಕೊಂಡು ಬರುವ ಜವಾಬ್ದಾರಿ ಹೊತ್ತಿದ್ದರು. ರಾಜ್ಯವೊಂದು ರಾಜ ನಿಷ್ಠೆಯಿಂದ ಇರುವವರೆಗೆ ಅದನ್ನು ಹಾಗಯೇ ಬಿಡುತ್ತಿದ್ದು, ದುರಾಡಳತದ ಮಟ್ಟ ಮಿತಿಮೀರಿದಾಗ ಮಾತ್ರ ಪ್ರಾಯಃಶ ಖಾಯಂ ಆಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳುತ್ತಿದ್ದುನ್ನು ಬಿಟ್ಟರೆ ರಾಜ್ಯದ ಆಂತರಿಕ ವ್ಯವಹಾರಗಳಲ್ಲಿ ಕಂಪನಿ ಪ್ರವೇಶಿಸುತ್ತಿರಲಿಲ್ಲ. ಚಕ್ರವರ್ತಿಯ ಆಡಳಿತದಲ್ಲಿ ಒಂದು ರಾಜ್ಯ ರಾಜನಿಷ್ಠೆಯಿಂದ ಇರುವುದು ಮಾತ್ರವೇ ಅಲ್ಲದೆ ಉತ್ತಮ ರೀತಿಯ ಆಡಳಿತವನ್ನು ನಡೆಸಿಕೊಂಡು ಬರಬೇಕಿತ್ತು. ತಪ್ಪಿದಲ್ಲಿ ಪರಮಾಧಿಕಾರ ಮಧ್ಯೆ ಬರಲು ಅವಕಾಶವಾಗುತ್ತಿತ್ತು. ಮೇಲೆ ವಿವರಿಸಲಾದ ಬರೋಡಾ ಹಾಗೂ ಮಣಿಪುರದ ಪ್ರಕರಣಗಳ ಜೊತೆಗೆ ಹೈದರಾಬಾದ್, ಕಾಶ್ಮೀರಾ ಹಾಗೂ ಆಳ್ವಾರ್ ರಾಜ್ಯಗಳ ವ್ಯವಹಾರದಲ್ಲಿ ಅನಂತರ ಮಧ್ಯೆ ಪ್ರವೇಶಿಸಿದುದರ ಬಗ್ಗೆಯೂ ಉಲ್ಲೇಖ ಮಾಡಬಹುದು.

ನಿಜಾಮನ ರಾಜ್ಯದಲ್ಲಿ ಮಧ್ಯೆ ಪ್ರವೇಶಿಸುವ ಸಂಬಂಧದಲ್ಲಿ ಹೊಸ ನೀತಿಯನ್ನು ಲಾರ್ಡ್ ರೀಡಾಂಗ್ ಬಹು ಸ್ಪಷ್ಟವಾಗಿ ತಿಳಿಸಿದರು.

## 79.4 ಉಪಸಂಹಾರ

"ಭಾರತದ ರಾಜ್ಯಗಳ ಆಂತರಿಕ ವ್ಯವಹಾರದಲ್ಲಿ ಮಧ್ಯೆ ಪ್ರವೇಶಿಸುವ ಬ್ರಿಟಿಷ್ ಸರ್ಕಾರದ ಹಕ್ಕು ಬ್ರಿಟಿಷ್ ಚಕ್ರವರ್ತಿಯ ಪರಿಮಾಧಿಕಾರದಲ್ಲಿ ಅಗತ್ಯವುಂಟಾಗಿರುವ ಪರಿಣಾಮಗಳಿಗೆ ಮತ್ತೊಂದು ನಿದರ್ಶನವಾಗಿದೆ. ಪ್ರಬಲವಾದ ಕಾರಣಗಳಿಲ್ಲದೆ ಈ ಹಕ್ಕನ್ನು ಚಲಾಯಿಸುವ ಇಚ್ಛೆ ಬ್ರಿಟಿಷ್ ಸರ್ಕಾರಕ್ಕಿಲ್ಲವೆಂಬುದು ವಾಸ್ತವವಾಗಿ ಮೇಲಿಂದ ಮೇಲೆ ಬ್ರಿಟಿಷ್ ಸರ್ಕಾರ ತೋರಿಸಿಕೊಟ್ಟಿದೆ. ಆಳ್ವಿಕೆ ನಡೆಸುತ್ತಿರುವ ರಾಜರು ಅನುಭವಿಸುತ್ತಿರುವ ಹೊರಗಿನಷ್ಟೇ ಆಂತರಿಕ ಸುಭದ್ರತೆ ಸಹ ಬ್ರಿಟಿಷ್ ಸರ್ಕಾರದ ರಕ್ಷಣಾಶಕ್ತಿಯ ಫಲವೇ ಆಗಿದೆ. ಮತ್ತು ಸಾಮ್ರಾಜ್ಯದ ಹಿತಾಸಕ್ತಿಗಳ ದೃಷ್ಟಿಯಿಂದ ಅಥವಾ ರಾಜ್ಯದ ಸರ್ಕಾರದ ಕೆಲಸಗಳಿಂದ ರಾಜ್ಯವೊಂದರ ಜನತೆಯ ಸಾಮಾನ್ಯ ಐಹಿಕಾಭ್ಯುದಯಕ್ಕೆ ತೀವ್ರವಾಗಿ ಧಕ್ಕೆಯುಂಟಾದಲ್ಲಿ ಅವಶ್ಯವಾದಲ್ಲಿ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಅಂತಿಮ ಜವಾಬ್ದಾರಿ ಪರಮಾಧಿಕಾರಕ್ಕೆ ಸೇರಿರಲೇಬೇಕು. ರಾಜರು ಪಡೆದಿರುವ ವಿವಿಧ ಪ್ರಮಾಣದ ಆಂತರಿಕ ಸಾರ್ವಭೌಮತ್ವ ಪರಮಾಧಿಕಾರದ ಈ ಜವಾಬ್ದಾರಿಯಿಂದ ಚಲಾಯಿಸುವುದನ್ನು ಅವಲಂಬಿಸಿರುತ್ತದೆ".

## 79.5 ಮಾದರಿಯ ಪ್ರಶ್ನೆಗಳು

1. ನ್ಯಾಯಬದ್ಧ ನಿರಂಕುಶ ಪ್ರಭುತ್ವದ ಚೌಕಟ್ಟಿನೊಳಗೆ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ವಿದೇಶ ನೀತಿ ಮತ್ತು ಗಡಿ ಸಂರಕ್ಷಣೆ ನೀತಿ ಕುರಿತು ಚರ್ಚಿಸಿ.
2. ಬ್ರಿಟಿಷ್ ಮತ್ತು ಆಫ್ಘನ್ ರಾಜಕೀಯ ಸಂಬಂಧಗಳನ್ನು ಬರೆಯಿರಿ.

## 79.6 ಪರಾಮರ್ಶನ ಕೃತಿಗಳು


| | | | |
|---|---|---|---|
| 1. | J.W.S. Wyllie | : | "Essay on the External Policy of India" |
| 2. | Dilip Kumar Ghose | : | "England and Afghanistan (1960)" |
| 3. | Sir Henry .M. Durand | : | "1st Afghan war and its Causes (1879) |



ಡಾ. ಎನ್. ಸರಸ್ವತಿ
ಇತಿಹಾಸ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,
ಮೈಸೂರು

## ಟಿಪ್ಪಣಿಗಳು

# ಘಟಕ - 80

## ಬ್ರಿಟಿಷ್ ಭಾರತದ ನ್ಯಾಯಾಂಗ, ಕಾನೂನು ಮತ್ತು ರಕ್ಷಣೆ

80.0 ಪ್ರಸ್ತಾವನೆ

80.1 ನ್ಯಾಯಾಂಗ

80.2 ಕಾನೂನು

80.3 ರಕ್ಷಣೆ

80.4 ಉಪಸಂಹಾರ

80.5 ಮಾದರಿ ಪ್ರಶ್ನೆಗಳು

80.6 ಪರಾಮರ್ಶನ ಕೃತಿಗಳು

## 80.0 ಪ್ರಸ್ತಾವನೆ

ಬ್ರಿಟಿಷ್ ಭಾರತದ ಕಾಲದಲ್ಲಿ ನ್ಯಾಯಾಂಗ, ಕಾನೂನು ಮತ್ತು ರಕ್ಷಣೆಯು ಸುವ್ಯವಸ್ಥಿತವಾಗಿತ್ತು. 1858 ರ ನಂತರ ಬ್ರಿಟಿಷ್ ಚಕ್ರವರ್ತಿನಿ ಈಸ್ಟ್ ಇಂಡಿಯಾ ಕಂಪೆನಿಯಿಂದ ಅಧಿಕಾರವನ್ನು ತನ್ನ ಕೈಗೆ ತೆಗೆದು ಕೊಂಡ ಮೇಲೆ ಕಲ್ಕತ್ತಾ, ಮದ್ರಾಸ್ ಮತ್ತು ಬೊಂಬಾಯಿಯಲ್ಲಿ ಹೈಕೋರ್ಟ್‌ಗಳ ಸ್ಥಾಪನೆಯಾದವು. ಹಾಗೆಯೇ 1861 ರ ಪೋಲೀಸ್ ಕಾಯ್ದೆ ಅನ್ವಯ ಸ್ಥಾಪಿತವಾದ ಪೋಲೀಸ್ ವ್ಯವಸ್ಥೆ ವಾಸ್ತವವಾಗಿ ಸುವ್ಯವಸ್ಥಿತವಾಗಿತ್ತು. ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆಯಲ್ಲಿ ಸೈನ್ಯ ಸಂಘಟನೆ, ತರಬೇತಿ ಮತ್ತು ರಕ್ಷಣೆಗೆ ಆದ್ಯತೆ ನೀಡಲಾಯಿತು. ಲಾರ್ಡ್ ಕರ್ಜನ್ ವೈಸರಾಯ್ ಆಗಿದ್ದಾಗ ಈ ಇಲಾಖೆ ಇನ್ನೂ ಹೆಚ್ಚಿನ ಪ್ರಮಾಣದ ಬೆಳವಣಿಗೆ ಸಾಧಿಸಿತು.

## 80.1 ನ್ಯಾಯಾಂಗ

1861 ರಲ್ಲಿ ಕಲ್ಕತ್ತಾ, ಮದ್ರಾಸ್ ಮತ್ತು ಬೊಂಬಾಯಿಗಳಲ್ಲಿ ಹೈಕೋರ್ಟ್‌ಗಳು ಸ್ಥಾಪನೆಯಾದವು. ಹಿಂದೆ ಇದ್ದ ಸುಪ್ರೀಂ ಕೋರ್ಟ್‌ಗಳು ಮತ್ತು ಸದರ್ ನ್ಯಾಯಾಲಯಗಳನ್ನು ಇದರಲ್ಲಿಯೇ ಸೇರಿಸಲಾಯಿತು. ಹೈಕೋರ್ಟ್‌ಗಳ ನ್ಯಾಯಾಧೀಶರ ಪೈಕಿ ಕನಿಷ್ಟ ಪಕ್ಷ ಮೂರನೆ ಒಂದು ಭಾಗದವರನ್ನು ಭಾರತದಲ್ಲಿ ಚಕ್ರವರ್ತಿನಿಯ ಸಿವಿಲ್ ಸರ್ವೀಸ್‌ನಿಂದ (Hermajerty's Civil Service) ನೇಮಕ ಮಾಡಬೇಕಿತ್ತು. ಮೂರನೆ ಒಂದು ಭಾಗವನ್ನು ಇಂಗ್ಲೆಂಡಿನ ಬ್ಯಾರಿಸ್ಟರ್‌ಗಳು ಅಥವಾ ಸ್ಕಾಟ್ಲೆಂಡಿನ ಅಡ್ವೋಕೇಟರ ಪೈಕಿ ನೇಮಕ ಮಾಡಬೇಕಿತ್ತು ಮತ್ತು ಉಳಿದವರನ್ನು ಹೈಕೋರ್ಟಿನ ನ್ಯಾಯವಾದಿಗಳು ಅಥವಾ ನ್ಯಾಯಾಲಯಗಳ ಅಧಿಕಾರಗಳ ಪೈಕಿ ನೇಮಕ ಮಾಡಬಹುದಿತ್ತು. ಹೈಕೋರ್ಟಿಗೆ ಮುಖ್ಯ ನ್ಯಾಯಾಧೀಶರನ್ನು ಇಂಗ್ಲೆಂಡಿನ ಬ್ಯಾರಿಸ್ಟರುಗಳು ಅಥವಾ ಸ್ಕಾಟ್ಲೆಂಡಿನ ಅಡ್ವೋಕೇಟರ ಪೈಕಿ ನೇಮಕ ಮಾಡಬೇಕಿತ್ತು. 1911 ರ ಭಾರತೀಯ ಹೈಕೋರ್ಟ್‌ಗಳ ಕಾಯ್ದೆಯ ಆಧಾರದ ಮೇಲೆ ಪಾಟ್ನಾ, ಲಾಹೋರ್ ಮತ್ತು ರಂಗೂನ್‌ಗಳಲ್ಲಿ ಹೈಕೋರ್ಟ್‌ಗಳ ಸ್ಥಾಪನೆಯಾದವು. ನ್ಯಾಯಸ್ಥಾನದಿಂದ ಪೌರ ಅಂಶವನ್ನು ತೆಗೆದು ಹಾಕಬೇಕೆಂದು ಭಾರತೀಯ ಜನಾಭಿಪ್ರಾಯ ಒತ್ತಾಯ ಮಾಡಿತು. ಆದರೆ ಭಾರತ ಸರ್ಕಾರದ 1935 ರ ಕಾಯ್ದೆಯ ಅಂಶ ಈ ಒತ್ತಾಯವನ್ನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಅದು ಹಳೆಯ ಪ್ರಮಾಣಾನುಗುಣ ವ್ಯವಸ್ಥೆಯನ್ನು ರದ್ದುಗೊಳಿಸಿತು ಮತ್ತು ಅನುಕೂಲಕ್ಕನುಗುಣವಾಗಿ ಈ ಮೂರು ವರ್ಗಗಳಿಂದ ಆದರೆ "ಅತ್ಯಗತ್ಯವಾಗಿ ಹಳೆಯ ಪ್ರಮಾಣಾನುಗುಣದಲ್ಲಲ್ಲ" - ನ್ಯಾಯಾಧೀಶರನ್ನು ನೇಮಕ ಮಾಡುವುದು ಎಂದು ವಿಧಿಸಿತ್ತು. ಹಾಗಾಗಿ ಇಂಡಿಯನ್ ಸಿವಿಲ್ ಸರ್ವೀಸಿನ ಸದಸ್ಯರಿಗೆ ಹಿಂದೆ ಇದ್ದುದಕ್ಕಿಂತ ಈ ವಿಷಯದಲ್ಲಿ ಈಗ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿತು. ಮುಖ್ಯ ನ್ಯಾಯಾಧೀಶರನ್ನು ಬ್ಯಾರಿಸ್ಟರುಗಳು ಅಥವಾ ಅಡ್ವೋಕೇಟ್‌ರಿಂದಲೇ ಆಯ್ಕೆ ಮಾಡಬೇಕೆಂಬ ಹಳೆಯ ನಿಯಮವನ್ನು ಈಗ ಅವರನ್ನು ಹೈಕೋರ್ಟಿನ ನ್ಯಾಯವಾದಿಗಳಿಂದ ಇಲ್ಲವೆ ಇಂಡಿಯನ್ ಸಿವಿಲ್ ಸರ್ವೀಸಿನ ಅಧಿಕಾರ ವರ್ಗದಿಂದ ಆಯ್ಕೆ ಮಾಡಬಹುದು ಎಂಬ ಮಟ್ಟಿಗೆ ಮಾರ್ಪಾಟುಗೊಳಿಸಲಾಯಿತು.

ಪ್ರಸ್ತಾವಿತ ಫೆಡರೇಷನ್‌ನಿಂದಾಗಿ ನ್ಯಾಯಾಂಗದಲ್ಲಿ ಮತ್ತೊಂದು ಬದಲಾವಣೆ ಅಗತ್ಯವಾಯಿತು. ಭಾರತ ಸರ್ಕಾರದ 1935 ರ ಕಾಯ್ದೆಯ ಪ್ರಕರಣ 200 ಮತ್ತು ಪ್ರಕರಣ 203 ಫೆಡರಲ್ ಕೋರ್ಟಿನ ಸ್ಥಾಪನೆಗೆ ಅವಕಾಶ ಕಲ್ಪಿಸಿತ್ತು. ಈ ನ್ಯಾಯಾಲಯ ದೆಹಲಿಯಲ್ಲಿದ್ದು ಇದರಲ್ಲಿ ಒಬ್ಬ ಮುಖ್ಯ ನ್ಯಾಯಾಧೀಶ ಹಾಗೂ ಅದಕ್ಕಿಂತ ಹೆಚ್ಚಿಲ್ಲದಂತೆ ಕಿರಿಯ ನ್ಯಾಯಾಧೀಶರು ಇರಬೇಕಿತ್ತು. ನ್ಯಾಯಾಧೀಶರನ್ನು ಚಕ್ರವರ್ತಿ ನೇಮಕ ಮಾಡುತ್ತಿದ್ದ. ನ್ಯಾಯಾಧೀಶರು ಅರವತ್ತೈದು ವರ್ಷಗಳವರೆಗೆ ಅಧಿಕಾರದಲ್ಲಿರುತ್ತಿದ್ದರು. ಪ್ರಾಂತ-ಪ್ರಾಂತಗಳ ನಡುವೆ ಒಂದು ಪ್ರಾಂತ ಹಾಗೂ ಒಂದು ಒಕ್ಕೂಟದ ರಾಜ್ಯದ ನಡುವೆ ಮತ್ತು ಒಂದು ಪ್ರಾಂತ ಹಾಗೂ ಒಕ್ಕೂಟದ ಅಧಿಕಾರ ವರ್ಗದವರ ನಡುವೆ ಸಂವಿಧಾನಾತ್ಮಕ ವಿವಾದಗಳಲ್ಲಿ ಫೆಡರಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯಲ್ಲಿದ್ದಿತು. ಭಾರತ ಸರ್ಕಾರದ ಕಾಯ್ದೆ ಅಥವಾ ಅದರ ಅಧೀನದಲ್ಲಿ ಕೌನ್ಸಿಲ್‌ನಲ್ಲಿ ಮಾಡಲಾದ ಯಾವುದೇ ಆದೇಶದ ವಿವರಣೆಯ ವ್ಯಾಖ್ಯಾನಗಳಿಗೆ ಸಂಬಂಧಿಸಿದ ನ್ಯಾಯದ ಮೂಲಭೂತ ಪ್ರಶ್ನೆಗಳಿಗೆ ಸಂಬಂಧಿಸಿದುದರ ಬಗ್ಗೆ ಅಪೀಲು ಎಂಬ ಬಗ್ಗೆ ಹೈಕೋರ್ಟ್ ಪ್ರಮಾಣ ಪಡಿಸಿದಲ್ಲಿ ಅದು ಹೈಕೋರ್ಟಿನ ಅಪೀಲುಗಳ ಬಗ್ಗೆಯೂ ವಿಚಾರಣೆ ನಡೆಸುತ್ತಿತ್ತು. 1937 ರ ಅಕ್ಟೋಬರ್ 1 ರಂದು ಫೆಡರಲ್ ಕೋರ್ಟಿನ ರಚನೆಯಾಯಿತು.

## 80.2 ಕಾನೂನು

1861 ರ ಪೋಲೀಸ್ ಕಾಯ್ದೆಯಿಂದ ಸ್ಥಾಪಿತವಾದ ಪೋಲೀಸ್ ವ್ಯವಸ್ಥೆ ವಾಸ್ತವ ಕಾರ್ಯಾಚರಣೆಯಲ್ಲ. ತೀವ್ರ ದೋಷಗಳಿಂದ ಕೂಡಿತ್ತು. ಇದಕ್ಕೆ ಕಾರಣ ಶಾಂತಿ ಮತ್ತು ಶಿಸ್ತನ್ನು ಪಾಲಿಸುವ ಜವಾಬ್ದಾರಿಯುತ ಕರ್ತವ್ಯವನ್ನು ಸಾಕಷ್ಟು ತರಬೇತಿ ಪಡೆಯುವ ಜನರಿಗೆ ವಹಿಸಿದುದರಿಂದ ಅದನ್ನು ಬೇಜವಾಬ್ದಾರಿ ವ್ಯಕ್ತಿಗಳಿಗೆ ವಹಿಸಿದಂತಾಗಿತ್ತು. ಪೋಲೀಸ್ ಆಡಳಿತದ ಸ್ಥಿತಿಗತಿಗಳನ್ನು ಪರಿಶೀಲಿಸಲು 1902 ರಲ್ಲಿ ಒಂದು ಪೋಲೀಸ್ ಆಯೋಗವನ್ನು ನೇಮಕ ಮಾಡಲಾಯಿತು. ಪೋಲೀಸ್ ವ್ಯವಸ್ಥೆಯ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ಆಯೋಗ ಅನೇಕ ಶಿಫಾರಸ್ಸುಗಳನ್ನು ಮಾಡಿತು. ಈ ಶಿಫಾರಸ್ಸುಗಳನ್ನು ಬಹುಮಟ್ಟಿಗೆ ಅಲ್ಲಿ ಇಲ್ಲಿ ಸಣ್ಣಪುಟ್ಟ ಮಾರ್ಪಾಡುಗಳೊಡನೆ ಅಂಗೀಕರಿಸಲಾಯಿತು. ಆಯೋಗ ವಿಶೇಷ ಪೋಲೀಸ್ ಪಡೆಯನ್ನು ಸೃಷ್ಟಿಸಿತು. ಇದು ಅಪರಾಧ ತನಿಖಾ ವಿಭಾಗ (ಕ್ರಿಮಿನಲ್ ಇನ್ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್) ಆಗಿದ್ದು ಪ್ರತಿಯೊಂದು ಪ್ರಾಂತದಲ್ಲೂ ಇದಕ್ಕೆ ವಿಶೇಷ ಹಾಗೂ ಉದ್ಯೋಗನಿರತ ಅಪರಾಧಗಳನ್ನು ಪತ್ತೆ ಹಚ್ಚುವ ಕಾರ್ಯವಿದ್ದಿತು. ಇಷ್ಟೇ ಅಲ್ಲದೆ, ಎಲ್ಲ ಪ್ರಾಂತೀಯ ಅಪರಾಧಿ ತನಿಖಾ ವಿಭಾಗಗಳಿಂದ ಮಾಹಿತಿ ಸಂಗ್ರಹಿಸಿ ಅಂತರಪ್ರಾಂತೀಯ ಸಂಪರ್ಕದ ಕಾರ್ಯ ನಿರ್ವಹಿಸಲು ಭಾರತ ಸರ್ಕಾರದ ಗೃಹಶಾಖೆಯಲ್ಲಿ ಸೆಂಟ್ರಲ್ ಇಂಟಲಿಜೆನ್ಸ್ ಬ್ಯೂರೋವನ್ನು ರೂಪಿಸಲಾಯಿತು.

ನಿಷ್ಪಕ್ಷವಾಗಿ ಹೇಳಬೇಕೆಂದರೆ, ಭಾರತೀಯ ಅಥವಾ ಅಖಿಲ ಭಾರತೀಯ ಪೋಲೀಸು ವ್ಯವಸ್ಥೆಯನ್ನೇನೂ ರೂಪಿಸಲಿಲ್ಲ. 1861 ರ ಕಾಯ್ದೆಯಿಂದ ಸ್ಥಾಪನೆಗೊಂಡ ಪೋಲೀಸು ಬಹುಮಟ್ಟಿಗೆ ಪ್ರಾಂತೀಯ ವ್ಯವಸ್ಥೆಯಾಗಿತ್ತು. ಸಂಬಂಧಪಟ್ಟ ಸ್ಥಳೀಯ ಸರ್ಕಾರ ಇದರ ಆಡಳಿತ ನೋಡಿಕೊಳ್ಳುತ್ತಿದ್ದು, ಇದು ಕೇಂದ್ರ ಸರ್ಕಾರದ ಸಾಮಾನ್ಯ ಹತೋಟಿಗೆ ಒಳಪಟ್ಟಿರಲಿಲ್ಲ. ಪ್ರತಿಯೊಂದು ಪ್ರಾಂತದಲ್ಲಿ ಪೋಲೀಸು ವ್ಯವಸ್ಥೆಯ ಮುಖ್ಯಸ್ಥನಾಗಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಇದ್ದು ಇಲಾಖೆಯ ಮೇಲೆ ನಿಯಂತ್ರಣ ಅಧಿಕಾರ ಪಡೆದಿದ್ದ. ಪ್ರಾಂತಗಳ ಭಾಗಗಳ ಅಧೀನ ಅಧಿಕಾರವನ್ನು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲುಗಳಿಗೆ ನೀಡಲಾಗಿತ್ತು. ಪ್ರತಿಯೊಂದು ಜಿಲ್ಲೆಯಲ್ಲಿ ಇಲಾಖೆಯ ಮುಖ್ಯನಾಗಿ ಜಿಲ್ಲೆಯ ಪೋಲೀಸ್ ಸೂಪರಿಡೆಂಟ್‌ನನ್ನು ನೇಮಕ ಮಾಡಲಾಗುತ್ತಿತ್ತು. ಇವನ ಅಧೀನದಲ್ಲಿ ಉಪವಿಭಾಗಗಳು ಅಥವಾ ಠಾಣಾಗಳು ಎಂದು ಕರೆಯಲಾಗುತ್ತಿದ್ದ ವಿಭಾಗಗಳ ಮೇಲ್ವಿಚಾರಣೆಯಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರುಗಳು ಮತ್ತು ಕಾನ್‌ಸ್ಟೇಬಲ್ಲುಗಳು ಇರುತ್ತಿದ್ದರು. ಗ್ರಾಮದಲ್ಲಿ 'ಚೌಕೀದಾರರು' ಇರುತ್ತಿದ್ದರು. ಇವರಿಗೆ ವೇತನ ನೀಡುತ್ತಿರಲಿಲ್ಲ. ಆದರೆ ಇವರು ಗ್ರಾಮಸ್ಥರಿಂದ ಇನಾಮನ್ನು ಅಥವಾ ಕಂದಾಯ ರಹಿತ ಭೂಮಿಯನ್ನು ಅಥವಾ ಸರ್ಕಾರದಿಂದ ಸ್ವಲ್ಪ ಹಣವನ್ನು ಪಡೆಯುತ್ತಿದ್ದರು. ಕಲ್ಕತ್ತಾ, ಮದ್ರಾಸು ಮತ್ತು ಬೊಂಬಾಯಿಯಂತ ಪ್ರೆಸಿಡೆನ್ಸಿ ನಗರಗಳಲ್ಲಿ ಪೋಲೀಸ್ ಕಮೀಷನರ್‌ನ ಕೈಕೆಳಗೆ ಒಂದು ಏಕೀಕೃತ ಪೋಲೀಸು ಪಡೆಯಿರುತ್ತಿತ್ತು. ಇದು ಪ್ರಾಂತೀಯ ಇನ್ಸ್‌ಪೆಕ್ಟರ್ ಜನರಲ್‌ನ ಅಧೀನದಲ್ಲಿ ಕಾರ್ಯನಿರ್ವಹಿಸದ ಸರ್ಕಾರದೊಡನೆ ನೇರವಾಗಿ ವ್ಯವಹರಿಸುತ್ತಿದ್ದ, ಶಾಂತಿ ಮತ್ತು ಶಿಸ್ತು ಪಾಲನೆಗೆ, ಇಲಾಖೆಯಲ್ಲಿನ ದಕ್ಷತೆ ಮತ್ತು ತರಬೇತಿಗೆ ಹೊಣೆಯಾಗಿತ್ತು.

ಪೋಲೀಸ್ ಇಲಾಖೆಯಲ್ಲಿ ಇಂದಿಗೂ ಸಂಪೂರ್ಣವಾದ ಸುಧಾರಣೆಗಳಾಗಬೇಕೆಂಬುದರ ಬಗ್ಗೆ ಸಂದೇಹವಿಲ್ಲ, ಅತ್ಯಗತ್ಯವಾಗಿರುವ ಒಂದು ಅಂಶವೆಂದರೆ, ಅಧಿಕಾರಿಗಳು ತಮ್ಮ ಅಧಿಕಾರವನ್ನು ಹೆಚ್ಚಿನ ವಿವೇಚನೆಯಿಂದ ಚಲಾಯಿಸುವಂತಾಗಲು ಪೋಲೀಸ್ ಅಧಿಕಾರಿಗಳ "ನೈತಿಕ ಸ್ಥಿತಿ ಮತ್ತು ಯುಕ್ತಿಯನ್ನು" ಸುಧಾರಿಸಲೇಬೇಕಾಗಿದೆ. ಈಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಕ್ಷರಸ್ಥ ಪೋಲೀಸು ಪೇದೆಗಳ ನೇಮಕ ಮಾಡಿಕೊಳ್ಳುವಿಕೆ ಮತ್ತು ಸ್ಥಳೀಯ ಪ್ರದೇಶಗಳ ರಕ್ಷಣೆಗೆ ಗೃಹ ರಕ್ಷಕ ದಳದವರ ನೇಮಕ ಇವು ಪ್ರೋತ್ಸಾಹಕರ ಅಂಶಗಳಾಗಿವೆ.

1894 ರ ಭಾರತೀಯ ಬಂದೀಖಾನೆಗಳ ಕಾಯ್ದೆಯಿಂದ ಮತ್ತು ಅದರಿಂದ ಭಾರತ ಸರ್ಕಾರ ಹಾಗೂ ಪ್ರಾಂತೀಯ ಸರ್ಕಾರಗಳು ಹೊರಡಿಸಿರುವ ನಿಯಮಗಳಿಂದ ಈಚಿನ ದಿನಗಳಲ್ಲಿ ಭಾರತದಲ್ಲಿ ಬಂದೀಖಾನೆಗಳ ಆಡಳಿತ ಕ್ರಮಬದ್ಧಗೊಂಡಿದೆ. ಕೇಂದ್ರ ಜಿಲ್ಲಾ ಮತ್ತು ಸಹಾಯಕ ಬಂದೀಖಾನೆಗಳು' ಎಂಬ ಮೂರು ರೀತಿಯ ಬಂದೀಖಾನೆಗಳನ್ನು ಸ್ಥಾಪಿಸಲಾಯಿತು. ಪ್ರತಿಪ್ರಾಂತದಲ್ಲೂ ಜೈಲು ಇಲಾಖೆ ಬಂದೀಖಾನೆಗಳ ಇನ್‌ಸ್ಪೆಕ್ಟರ್ ಜನರಲ್‌ರ ಅಧೀನದಲ್ಲಿರುತ್ತಿತ್ತು. ಈ ಅಧಿಕಾರಿ ಸಾಮಾನ್ಯವಾಗಿ ಜೈಲುಗಳ ಬಗ್ಗೆ ಅನುಭವ ಪಡೆದ ಇಂಡಿಯನ್ ಮೆಡಿಕಲ್ ಸರ್ವೀಸಿನ ಸದಸ್ಯನಾಗಿರಬೇಕಿತ್ತು. ಕೇಂದ್ರಿಯ ಬಂದೀಖಾನೆಗಳು ಸೂಪರಿಟೆಂಡೆಂಟ್‌ನ ಅಧೀನದಲ್ಲಿರುತ್ತಿದ್ದವು. ಇವನನ್ನು ಸಹ ಅದೇ ಸೇವಾ ವರ್ಗದಿಂದ ನೇಮಕ ಮಾಡಿಕೊಳ್ಳಲಾಗುತ್ತಿತ್ತು ಮತ್ತು ದೊಡ್ಡ ಕೇಂದ್ರಿಯ

ಬಂದೀಖಾನೆಗಳಲ್ಲಿ ಇವನಿಗೆ ಸಹಾಯಕರಾಗಿ ಡೆಪ್ಯುಟಿ ಸೂಪರಿಂಟೆಂಡೆಂಟ್‌ಗಳು ಇರುತ್ತಿದ್ದರು. ಜಿಲ್ಲಾ ಬಂಧೀಖಾನೆ ಸಿವಿಲ್ ಸರ್ಜನ್‌ನ ಅಧೀನದಲ್ಲಿರುತ್ತಿತ್ತು. ಇವನ ಅಧೀನದಲ್ಲಿ ಜೈಲರುಗಳು, ಉಪ ಮತ್ತು ಸಹಾಯಕ ಜೈಲರುಗಳು ಹಾಗೂ ವಾರ್ಡರುಗಳು ಸಹಾಯಕ ಸಿಬ್ಬಂದಿಯಿರುತ್ತಿತ್ತು. ಅನೇಕ ಬೃಹತ್ ನಗರಗಳಲ್ಲಿ 1899 ರಿಂದ ಶಿಕ್ಷಣ ಇಲಾಖೆ ನೋಡಿಕೊಳ್ಳುತ್ತಿರುವ ಸುಧಾರಣೆ ಶಾಲೆಗಳಿವೆ.

ಬಂಧೀಖಾನೆಗಳ ಆಡಳಿತ ಸುಧಾರಣೆ ಮಾಡುವ ದೃಷ್ಟಿಯಿಂದ ಭಾರತ ಸರ್ಕಾರ 1919 ರಲ್ಲಿ ಬಂಧೀಖಾನೆಗಳ ಸಮಿತಿಯನ್ನು ನೇಮಿಸಿತು. ಈ ಸಮಿತಿ ಭಾರತದ ಬಂಧೀಖಾನೆಗಳ ಆಡಳಿತದ ಸಮಗ್ರ ಸರ್ವೇಕ್ಷಣೆ ನಡೆಸಿತು; ಮತ್ತು "ಹಾಲಿ ಇರುವ ಬಂದೀಖಾನೆಗಳ ಸ್ಥಳವನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ಉತ್ತಮಗೊಳಿಸುವುದು; ವಾರ್ಡರುಗಳ ಹುದ್ದೆಗಳಿಗೆ ಉತ್ತಮ ವರ್ಗದವರನ್ನು ನೇಮಕ ಮಾಡಿಕೊಳ್ಳುವುದು. ಸರ್ಕಾರದ ಗ್ರಾಹ ಇಲಾಖೆಗಳ ಅಗತ್ಯಗಳನ್ನು ಪೂರೈಸಲು ಬಂದೀಖಾನೆ ಕೈಗಾರಿಕೆಗಳ ಅಭಿವೃದ್ಧಿಯ ಅಗತ್ಯ ಮತ್ತು ಪ್ರಾಮುಖ್ಯ" ಇವುಗಳ ಬಗ್ಗೆ ಗಮನ ನೀಡಿತ್ತು. ಕ್ರಿಮಿನಲ್ ಅಪರಾಧಿಗಳಿಂದ ಸಿವಿಲ್ ಅಪರಾಧಗಳನ್ನು ಬೇರ್ಪಡಿಸುವುದರ ಬಗ್ಗೆ ಮತ್ತು ಬಾಲನ್ಯಾಯಲಯಗಳ ಸ್ಥಾಪನೆಯ ಬಗ್ಗೆ ಶಿಫಾರಸ್ಸು ಮಾಡಿತು ಮತ್ತು ಈ ವ್ಯವಸ್ಥೆಯ ಸುಧಾರಣಾ ಅಂಶದತ್ತ ವಿಶೇಷ ಗಮನ ಸೆಳೆದಿತ್ತು. ಈ ಶಿಫಾರಸ್ಸುಗಳನ್ನು ಹೆಚ್ಚು ಕಡಿಮೆ ಕಾರ್ಯರೂಪಕ್ಕೆ ತರಲು ಪ್ರಾಂತೀಯ ಸರ್ಕಾರಗಳು ಪ್ರಯತ್ನಿಸಿವೆ.

ಭಾರತ ಸರ್ಕಾರದ 1919 ರ ಕಾಯ್ದೆಯ ಪ್ರಕಾರ ಬಂದೀಖಾನೆಗಳ ಆಡಳಿತ ಪ್ರಾಂತೀಯ ಸರ್ಕಾರಗಳ ಕ್ಷೇತ್ರಕ್ಕೆ ಸೇರಿತು. ಆದರೂ ಇದು ಅಖಿಲ ಭಾರತೀಯ ಶಾಸನಕ್ಕೊಳಪಟ್ಟಿತ್ತು. 1937ರ ಏಪ್ರಿಲ್ 1 ರಿಂದ ಪ್ರಾಂತೀಯ ಸ್ವಾಯತ್ತತೆ ಜಾರಿಗೆ ಬಂದುದರಿಂದ ಬಂದೀಖಾನೆಗಳ ಆಡಳಿತ ಪ್ರಾಂತೀಯ ವಿಷಯವಾಯಿತು ಮತ್ತು ಈ ದೃಷ್ಟಿಯಿಂದ ಶಾಸಕಾಂಗದ ಅಧಿಕಾರ ಪ್ರಾಂತೀಯ ಸರ್ಕಾರಗಳಿಗೇ ಸೇರಿತು. ಬಂದಿಗಳು ಮತ್ತು ಅಪರಾಧಿಗಳನ್ನು ಒಂದು ಘಟಕದಿಂದ ಮತ್ತೊಂದು ಘಟಕಕ್ಕೆ ವರ್ಗಾಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪ್ರಾಂತೀಯ ಸರ್ಕಾರದೊಡನೆ ಸಮ್ಮತಿ ನೀಡುವ ನ್ಯಾಯರೂಪಣೆಯ ಅಧಿಕಾರ ಮಾತ್ರ ಚಲಾಯಿಸುತ್ತಿತ್ತು.

## 80.3 ರಕ್ಷಣೆ

ಲಾರ್ಡ್ ಕರ್ಜನ್ ವೈಸರಾಯ್ ಆಗಿದ್ದಾಗ ಸೇನೆಯ ಆಡಳಿತದಲ್ಲಿ ಒಂದು ಮಹತ್ತರ ಬದಲಾವಣೆಯಾಯಿತು. ಆವರೆವಿಗೆ ಗವರ್ನರ್ ಜನರಲ್ಲನ ಕಾರ್ಯ ನಿರ್ವಾಹಕ ಮಂಡಳಿಯ ವಿಶೇಷ ಸದಸ್ಯ ಕಮ್ಯಾಂಡರ್ ಇನ್ ಚೀಫ್ ಆಗಿರುತ್ತಿದ್ದ. ಆದರೆ ಈ ಮಂಡಳಿಯಲ್ಲಿ "ಸೈನ್ಯಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳಲ್ಲಿಯೂ ವೈಸರಾಯನಿಗೆ ಸಂವಿಧಾನಾತ್ಮಕ ಸಲಹೆಗಾರನಾಗಿದ್ದ" ಸೇನಾ ಸದಸ್ಯನೊಬ್ಬ ಈ ಮಂಡಳಿಯಲ್ಲಿ ಇರುತ್ತಿದ್ದ. ಕಮ್ಯಾಂಡರ್ ಇನ್ ಚೀಪ್ ತನ್ನ ಪ್ರಸ್ತಾಪಗಳನ್ನು ಹಾಗೂ ಸಲಹೆ, ಯೋಜನೆಗಳನ್ನೆಲ್ಲ ತನಗಿಂತ ಕೆಳದರ್ಜೆಯ ಅಧಿಕಾರಿಯಾಗದ್ದ ಸೇನಾ ಸದಸ್ಯನ ಮೂಲಕ ಕೌನ್ಸಿಲ್‌ನ ಮುಂದೆ ಮಂಡಿಸಬೇಕಾಗಿತ್ತು. 1902 ರ ನವೆಂಬರ್‌ನಿಂದ ಭಾರತದ ಕಮ್ಯಾಂಡರ್ ಇನ್ ಛೀಫ್ ಆಗಿದ್ದ ಲಾರ್ಡ್ ಕರ್ಜನರು ಈ ವ್ಯವಸ್ಥೆಯನ್ನು "ಅತಿ ದುಬಾರಿಯಾದ ಹಾಗೂ ವಿಳಂಬಕಾರಿಯಾದ ಮಿಲಿಟರಿ ಅನೌಚಿತ್ಯ" ಎಂದು ಖಂಡಿಸಿದ. ಸೇನಾ ಸದಸ್ಯನ ರದ್ದತಿಗಾಗಿ ಅವನು ಒತ್ತಾಯಪಡಿಸಿದ ಮತ್ತು ಕಮ್ಯಾಂಡರ್ ಇನ್ ಛೀಫ್‌ನನ್ನು ಭಾರತ ಸರ್ಕಾರಕ್ಕೆ ಸಂಪೂರ್ಣ ಸೇನಾ ಸಲಹೆಗಾರನಾಗಿ ಮಾಡುವಂತೆ ಒತ್ತಾಯಪಡಿಸಿದ. ಆದರೆ ಸೇನೆ ನಾಗರಿಕ ಅಧಿಕಾರಕ್ಕೆ ಅಧೀನವಾಗಿರಬೇಕೆಂಬ ಆಧಾರದ ಮೇಲೆ ಈ ಕ್ರಮವನ್ನು ಲಾರ್ಡ್ ಕರ್ಜನ್ ವಿರೋಧಿಸಿದ. ಈ ವಿವಾದದಿಂದ 1905 ರ ಆಗಸ್ಟ್‌ನಲ್ಲಿ ವೈಸರಾಯ್ ರಾಜೀನಾಮೆ ನೀಡುವಂತಾಯಿತು. ಬ್ರಿಟಿಷ್ ಕ್ಯಾಬಿನೆಟ್ ಲಾರ್ಡ್ ಕರ್ಜನ್‌ರ ಪರವಾಗಿ ತೀರ್ಮಾನಿಸಿತು ಮತ್ತು ಒಂದು ಸಂಧಾನ ಮಾಡಿಕೊಂಡಿತು. ಆದರೆ ಅಲ್ಪಾವಧಿಯಲ್ಲಿ ಇದು ಕಾರ್ಯ ಸಾಧ್ಯವಾಗಲಾರದೆಂದು ಮನದಟ್ಟಾಯಿತು. ತತ್ಪರಿಣಾಮವಾಗಿ ಇದು ರದ್ದುಗೊಂಡಿತು. 1909 ರ ತರುವಾಯ ಕಮ್ಯಾಂಡರ್ ಇನ್ ಛೀಫ್ ಭಾರತ ಸರ್ಕಾರಕ್ಕೆ ಪ್ರಧಾನ ಸೇನಾ ಸಲಹೆಗಾರನಾದ. ಆದರೆ ಅನೇಕ ಮಂದಿ ಅಂತರ ರಾಷ್ಟ್ರೀಯ ನೀತಿ ವಿಮರ್ಶಕರ ಪ್ರಕಾರ ಲಾರ್ಡ್ ಕರ್ಜನ್‌ನ ನಿಲುವು ಸರಿಯಾದುದು ಯುಕ್ತವಾದುದು ಆಗಿತ್ತು. ಸೇನಾ ಅಧಿಕಾರದಲ್ಲಿ ಕಮ್ಯಾಂಡರ್ ಇನ್ ಛೀಪ್‌ನ ಮೇಲೆ ತಕ್ಷಣದ ಉನ್ನತಾಧಿಕಾರಿಯೆಂದರೆ ಗವರ್ನರ್ ಜನರಲ್ ಇನ್ ಕೌನ್ಸಿಲ್ ಆಗಿರುತ್ತಿದ್ದ. ಭಾರತದಲ್ಲಿ ರಕ್ಷಣಾ ಆಡಳಿತಗಳ ಸಂಬಂಧಿಸಿದುದಂತೆ ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಪಡೆದ ಸಕಲ ಆದೇಶಗಳಿಗೂ ಸೂಕ್ತ ಗೌರವ ಗಮನ ನೀಡಬೇಕಿತ್ತು. ಮಹಾ ಪ್ರಭುವಿನ ಮಂತ್ರಿಗಳಲ್ಲಿ ಒಬ್ಬನಾಗಿ ಸೆಕ್ರೆಟರಿ ಆಫ್ ಸ್ಟೇಟಿಗೆ ಈ ವಿಷಯದಲ್ಲಿ ವಿಶೇಷ ಅಧಿಕಾರ ಮತ್ತು ಜವಾಬ್ದಾರಿಯು ಇದ್ದಿತು.

ಭಾರತೀಯ ರಕ್ಷಣಾ ಸಮಸ್ಯೆ ಆಧುನಿಕ ಭಾರತದ ರಾಜಕೀಯದಲ್ಲಿ ಉಗ್ರ ಚರ್ಚೆಗೆ ಗುರಿಯಾದ ವಿಷಯವಾಗಿದೆ. ಭಾರತದಲ್ಲಿ ರಾಷ್ಟ್ರೀಯ ಚಳುವಳಿಯ ಪ್ರಗತಿಯೊಡನೆ ಭಾರತದ ರಕ್ಷಣಾ ಆಡಳಿತದ ಮೇಲೆ ನಿರ್ದಿಷ್ಟ ನಿಯಂತ್ರಣಕ್ಕಾಗಿ ಒತ್ತಾಯಪಡಿಸಿದರು ಮತ್ತು ರಾಜಕೀಯ ಮುಖಂಡರು ದುಬಾರಿ ಸೇವಾ ವೆಚ್ಚಗಳ ಬಗ್ಗೆ ನಿರಂತರವಾಗಿ ದೂರುತ್ತಿದ್ದರು. ಈ ವೆಚ್ಚವನ್ನು "ರಾಷ್ಟ್ರ-ನಿರ್ಮಾಣ" ಕಾರ್ಯದತ್ತ ಹರಿಸಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು. ಒಂದನೇ ಮಹಾಯುದ್ಧದಲ್ಲಿ ಭಾರತದ ಸೇನೆಯ ಉಜ್ವಲ ಹಾಗೂ ನಿಷ್ಠಾಪೂರ್ಣ ಸೇವೆಯನ್ನು ಸ್ತುತಿಸಿದ ಮಾಂಟೆಗ್ಯೂ-ಚೆಲ್ಮ್ಸ್‌ಫರ್ಡ್ ವರದಿ "ಅದನ್ನು ಮತ್ತಷ್ಟು ಭಾರತೀಕರಣಗೊಳಿಸುವ" ಸಮಸ್ಯೆಯೊಡನೆ ಹೋರಾಡುವ ಅವಶ್ಯಕತೆಯ ಬಗ್ಗ ಮಹತ್ವ ನೀಡಿತು. ನೆಹರು ವರದಿ ಭಾರತದ ಸೇನೆಯ ಮೇಲಣ ಅಧಿಕಾರವನ್ನು ಮಂತ್ರಿಗಳಿಗೆ ವರ್ಗಾಯಿಸಲು ಸಮರ್ಥಿಸುತ್ತಿತ್ತು. 1925 ರ ಜೂನಿನಲ್ಲಿ ಮೇಜರ್ ಜನರಲ್ ಸರ್ ಆಂಡ್ರುಸ್ಕೀನ್ (ಆನಂತರ ಜನರಲ್ ಸ್ಕೀನ್) ಅಧ್ಯಕ್ಷತೆಯಲ್ಲಿ ಸ್ಕೀನ್ ಸಮಿತಿಯನ್ನು ನೇಮಕ ಮಾಡಲಾಯಿತು. ಸ್ಕೀನ್ ಆಗ ಭಾರತದಲ್ಲಿ ಸೇನೆಯ ಛೀಫ್ ಆಫ್ ಸ್ಟೇಟ್ ಆಗಿದ್ದ. ಈ ಸಮಿತಿ "ಭಾರತೀಯ ಸ್ಯಾಂಡ್ ಹರ್ಸ್ಟ್ ಸಮಿತಿ" ಎಂದು ಪರಿಚಿತವಾಗಿದೆ. 1923 ರಲ್ಲಿ ಭಾರತದಲ್ಲಿ ಕಮ್ಯಾಂಡರ್ ಇನ್ ಛೀಫ್ ಆಗಿದ್ದ ಲಾರ್ಡ್ ರಾಲಿನ್ಸನ್ ಘೋಷಿಸಿದ "ಎಂಟು ಯೂನಿಟ್‌ಗಳ ಯೋಜನೆ" ಯನ್ನು ರದ್ದುಗೊಳಿಸಿ 1933 ರ ವೇಳೆಗೆ ಭಾರತೀಯ "ಸ್ಯಾಂಡ್ ಹರ್ಸ್ಟ್‌ನ" ಸ್ಥಾಪನೆಗೆ (ಸ್ಯಾಂಡ್‌ಹರ್ಸ್ಟ್ ಸ್ಯಾಂಡ್‌ಹರ್ಸ್ಟಿನಲ್ಲಿ ಬ್ರಿಟಿಷ್ ಮತ್ತು ರಾವುತರ ಸೈನ್ಯ ಶಿಕ್ಷಣ ಶಾಲೆ) ಈ ಸಮಿತಿ ಶಿಫಾರಸು ಮಾಡಿತು. ಈ ಶಿಫಾರಸುಗಳನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲಿಲ್ಲ. ಭಾರತದ ನಿಬಂಧನೆಗಳ ಆಯೋಗ (Indian Statutory Commission) ರಾಷ್ಟ್ರರಕ್ಷಣೆಯ "ಪ್ರಧಾನ ಸಮಸ್ಯೆ" ಯನ್ನು ವಿವಿಧ ದೃಷ್ಟಿಕೋನಗಳಿಂದ ಗಮನಿಸಿತು ಮತ್ತು ಮೂರು ಅಂಶಗಳ ದೃಷ್ಟಿಯಿಂದ - ಗಡಿನಾಡ ರಕ್ಷಣೆ, ಆಂತರಿಕ ಸುಭದ್ರತೆ ಮತ್ತು ಭಾರತೀಯ ರಾಜ್ಯಗಳಿಗೆ ಹೊಣೆ - ಭಾರತೀಯ ಸೇನೆಯಲ್ಲಿ ಬ್ರಿಟಿಷ್ ಅಂಶದ ಇರುವಿಕೆಗೆ ಒತ್ತಾಯಪಡಿಸಿತು. ಅದು "ಬ್ರಿಟಿಷ್ ಅಂಶದಿಂದ ಕೂಡಿದ ಸೈನ್ಯದ ನಿಯಂತ್ರಣವನ್ನು ಭಾರತೀಯ ಶಾಸಕಾಂಗಕ್ಕೆ ವಹಿಸಿಕೊಡಲಾಗುವುದಿಲ್ಲ" ಮತ್ತು "ಭಾರತದಲ್ಲಿ ಈಗ ಸೇನೆ ನಿರ್ವಹಿಸುತ್ತಿರುವ ಕಾರ್ಯಗಳನ್ನು ಯಾವ ಸಹಾಯವೂ ಪಡೆಯದೆ ನಿರ್ವಹಿಸಬಲ್ಲ ಸಂಪೂರ್ಣವಾಗಿ ಭಾರತೀಯ ಸೇನಾ ಪಡೆಯ ವಿಕಾಸ ಅತಿ ನಿಧಾನ ಗತಿಯದಾಗುತ್ತದೆ" ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಭಾರತ ಸರ್ಕಾರದ 1935 ರ ಕಾಯ್ದೆಯಿಂದ ಭಾರತದ ರಕ್ಷಣೆಯ ವಿಷಯದಲ್ಲಿ ಯಾವ "ಗಣನೀಯ ಬದಲಾವಣೆ" ಯನ್ನು ಮಾಡಲಿಲ್ಲ.

ಸೇನೆಯ ವ್ಯವಸ್ಥೆಗೆ ಸಂಬಂಧಿಸಿದಂತೆ ನಾವು ಗಮನಿಸಬಹುದಾದ ಅಂಶ 1904 ರಲ್ಲಿ ಲಾರ್ಡ್ ಕರ್ಜನ್‌ರು ಜಾರಿಗೆ ತಂದಿದ್ದ ಕಮ್ಯಾಂಡ್ ಪದ್ಧತಿಯನ್ನು ಭಾರತದ ಸೇನೆ 1907 ರಲ್ಲಿ ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ಎರಡು ವಿಭಾಗಗಳಾಗಿ ವಿಭಜಿಸಿಗೊಂಡಾಗ ಅವನೇ ರದ್ದುಪಡಿಸಿದ. 1914-18 ರ ಸಮರ ಸಮಯದಲ್ಲಿ ಎಲ್ಲರೀತಿಯ ಭಾರತೀಯ ಪಡೆಗಳು ಅತ್ಯಮೂಲ್ಯ ಸೇವೆ ಸಲ್ಲಿಸಿದವು. ಈ ವ್ಯವಸ್ಥೆಯ ಲೋಪದೋಷಗಳು ಹೊರಬಂದುವು ಮತ್ತು ಯುದ್ಧಾನಂತರ ಇದನ್ನು ಪುನರ್ ವ್ಯವಸ್ಥೆಗೊಳಿಸಲಾಯಿತು. ಭಾರತೀಯ ಪ್ರದೇಶವನ್ನು ನಾಲ್ಕು ಕಮ್ಯಾಂಡ್‌ಗಳಾಗಿ ಹದಿನಾಲ್ಕು ತುಕ್ಕಡಿಗಳಾಗಿ ಉಪವಿಭಾಗಿಸಲಾಯಿತು. ಪ್ರತಿಯೊಂದು ತುಕಡಿ ನಿರ್ದಿಷ್ಟ ಸಂಖ್ಯೆಯ ಬಿ ಗ್ರೇಡ್ ಕಮ್ಯಾಂಡ್‌ಗಳನ್ನು ಪಡೆದಿತ್ತು. ಇವುಗಳ ಪೈಕಿ ಒಂದಾದ ಪಶ್ಚಿಮ ಕಮ್ಯಾಂಡ್‌ನ್ನು 1938 ರ ನವೆಂಬರ್ 1 ರಂದು ರದ್ದುಗೊಳಿಸಲಾಯಿತು.

1939 ರಲ್ಲಿ ಭಾರತದ ರಕ್ಷಣಾ ಪಡೆಗಳ ವ್ಯವಸ್ಥೆ ಮುಂದಿನಂತಿತ್ತು. ಬ್ರಿಟಿಷ್ ಸೇನೆಯ ಯುನಿಟ್‌ಗಳಿಂದ ಕೂಡಿದ ಕ್ರಮವಾದ ಸೇನೆ ಸಹಾಯಕ ದಳಗಳು - ಇದಕ್ಕೆ ಯುರೋಪಿಯನ್ ಬ್ರಿಟಿಷ್ ಪ್ರಜೆಗಳಿಗೆ ಮಾತ್ರ ಪ್ರವೇಶ ಸೀಮಿತವಾಗಿತ್ತು. ಪ್ರಾದೇಶಿಕ ಪಡೆ ಪ್ರಾಂತೀಯ ಬೆಟಾಲಿಯನ್‌ಗಳು, ನಗರ ಯೂನಿಟ್‌ಗಳು ಮತ್ತು ಯೂನಿವರ್ಸಿಟಿ ಟ್ರೈನಿಂಗ್ ಕೋರ್ ಯೂನಿಟ್‌ಗಳ ಮೂರು ಪ್ರಧಾನ ವರ್ಗಗಳಿಂದ ಕೂಡಿತ್ತು; 1932 ಅಕ್ಟೋಬರ್‌ನಿಂದ ರಾಯಿಲ್‌ರವರ ಫೋರ್ಸ್ ; 1934 ರ ಅಕ್ಟೋಬರ್‌ನಿಂದ ರಾಯಲ್ ಇಂಡಿಯನ್ ಸೇವಿ ಎಂದು ನಾಮಕರಣಗೊಂಡ ರಾಯಿಲ್ ಇಂಡಿಯನ್ ಮರೀನ್. ಭಾರತೀಯ ರಾಜ್ಯ ಪಡೆಗಳೂ ಇದ್ದವು. ಇವು ಮೊದಲಿಗೆ ಇಂಪೀರಿಯಲ್ ಸರ್ವೀಸ್ ಟ್ರೂಪ್ಸ್ ಎಂದು ಪ್ರಸಿದ್ಧವಾಗಿದ್ದವು. ಇದನ್ನು ರಾಜ್ಯದ ರಾಜರೇ ತಮ್ಮ ಸ್ವಂತ ವೆಚ್ಚದಲ್ಲಿ ರಾಜ್ಯದ ಸೇವೆಗಾಗಿ ನಿರ್ವಹಿಸಿಕೊಂಡು ಬರುತ್ತಿದ್ದರು.

ಭಾರತದ ಸೇನೆಯಲ್ಲಿ ಅಧಿಕಾರಿಗಳ ಎರಡು ಪ್ರಧಾನ ವರ್ಗಗಳಿದ್ದವು. ಒಂದು ಕಿಂಗ್ಸ್ ಕಮೀಷನ್ ಪಡೆದಿದ್ದುದು, ಮತ್ತೊಂದು ವೈಸರಾಯಿಯ ಕಮೀಷನ್ ಪಡೆದಿದ್ದುದು. ವೈಸರಾಯ್ ಕಮೀಷನ್ ಪಡೆಯುತ್ತಿದ್ದವರೆಲ್ಲ ಭಾರತೀಯರಾಗಿದ್ದು ಇವರಿಗೆ ಸೀಮಿತ

ಸ್ಥಾನವಿದ್ದು ಇವರ ಕಮ್ಯಾಂಡನ ಅಧಿಕಾರವೂ ಸೀಮಿತವಾಗಿತ್ತು. ಕಿಂಗ್ಸ್ ಕಮೀಷನ್‌ಗೆ ಸಂಬಂಧಿಸಿದಂತೆ ಭಾರತೀಯರು 1918 ರಿಂದ ಮೂರು ವಿಧಗಳಲ್ಲಿ ಅರ್ಹರಾಗಿದ್ದರು.

1. ಸ್ಯಾಂಡ್ ಹರ್ಸ್ಟ್‌ನ ರಾಯಿಲ್ ಮಿಲಿಟರಿ ಕಾಲೇಜು ಮತ್ತು ಡೆಹರಾಡೂನಿನ ಭಾರತೀಯ ಸೇನಾ ಅಕಾಡೆಮಿಯಲ್ಲಿ (1932 ರ ಅಕ್ಟೋಬರ್‌ನಲ್ಲಿ ತೆಗೆದುದು) ಕೇಡೆಟುಗಳಿಗೆ ಅರ್ಹತೆ ಪಡೆಯುವುದು.

2. ದಕ್ಷ ಭಾರತೀಯ ಅಧಿಕಾರಿಗಳಿಂದ ಆಯ್ಕೆ ಅಥವಾ ರೆಜಿಮೆಂಟುಗಳಲ್ಲಿ ನಾನ್ ಕಮೀಷನ್ ಅಧಿಕಾರಿಗಳಿಗೆ ಬಡ್ತಿ ನೀಡುವುದು ಮತ್ತು

3. ವಯೋವೃದ್ಧರಾಗಿರುವುದರಿಂದಲೋ ಅಥವಾ ಶಿಕ್ಷಣದ ಅಭಾವದಿಂದಲೋ ಅರ್ಹತೆ ಪಡೆಯಲು ಸಾಧ್ಯವಿಲ್ಲದ ಅಧಿಕಾರಿಗಳಿಗೆ ಗೌರವಾನ್ವಿತ ಕಿಂಗ್ಸ್ ಕಮೀಷನ್ ನೀಡುವುದು - ಈ ವಿಧಗಳಾಗಿದ್ದವು. ಸರ್ಕಾರ 1932 ರಲ್ಲಿ ಎಲ್ಲ ಪಡೆಗಳ ಒಂದು ಡಿವಿಷನ್ ಮತ್ತು ಒಂದು ಅಶ್ವದಳದ ಬ್ರಿಗ್ರೇಡ್‌ನನ್ನು ಭಾರತೀಕರಣಗೊಳಿಸುವ ತನ್ನ ಧ್ಯೇಯವನ್ನು ಪ್ರಕಟಿಸಿತು. ಭಾರತದ ಸೇನೆಯ ಭಾರತೀಕರಣದ ಮತ್ತೊಂದು ಮುಖ್ಯ ಹಂತವೆಂದರೆ. 1934 ರ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಶಾಸಕಾಂಗ ಭಾರತೀಯ ಸೇನಾ ಕಾಯ್ದೆಯನ್ನು (ತಿದ್ದುಪಡಿ) ಅಂಗೀಕರಿಸಿದುದರಿಂದ ಬಂದಿತು. ಈ ಕ್ರಮದ ಪ್ರಕಾರ ಭಾರತೀಯ ಸೇನಾ ಅಕಾಡೆಮಿಯಿಂದ ಕಮೀಷನ್ ಪಡೆದ ಅಧಿಕಾರಿಗಳು ನ್ಯಾಯಬದ್ಧ ಸ್ಥಾನಮಾನಗಳ ಸೌಲಭ್ಯ ಪಡೆಯಲು ಮತ್ತು ಅವರನ್ನು "ಇಂಡಿಯನ್ ಕಮೀಷನ್ ಅಧಿಕಾರಿಗಳು" ಎಂದು ಕರೆಯಲಾರಂಭಿಸಿದರು.

## 80.4 ಉಪಸಂಹಾರ

ಆನಂತರದ ವರ್ಷಗಳಲ್ಲಿ ಭಾರತೀಯ ರಕ್ಷಣಾ ಪಡೆಗಳ ಸಾಧನ ಸಜ್ಜುಗಳು ಮತ್ತು ವ್ಯವಸ್ಥೆಯನ್ನು ಆಧುನಿಕ ಪರಿಸ್ಥಿತಿಗಳಿಗೆ ಸರಿಹೊಂದಿಸಲು ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಯಿತು. 1939 ರ ಸೆಪ್ಟೆಂಬರ್‌ನಲ್ಲಿ ಚಾಟ್‌ಫೀಲ್ಡ್ ಸಮಿತಿಯ ಶಿಫಾರಸ್ಸುಗಳು ಪ್ರಕಟಗೊಂಡವು. ಅಪೇಕ್ಷಿತ ಸುಧಾರಣೆಗಳನ್ನು ಜಾರಿಗೆ ತರಲು ಯುನೈಟೆಡ್ ಕಿಂಗ್‌ಡಮ್ ಮೂವತ್ತ ಮೂರುವರೆ ಕೋಟಿರೂಗಳ ಬಳುವಳಿ ನೀಡಲು ಯೋಜಿಸಿತು ಮತ್ತು ಹನ್ನೊಂದು ಮುಕ್ಕಾಲು ಕೋಟಿ ರೂಪಾಯಿಗಳ ಬಡ್ಡಿ ರಹಿತ ಸಾಲ ಒದಗಿಸಿತು. ಬ್ರಿಟಿಷ್ ಪಡೆಗಳ ಸೇನಾ ಸಿಬ್ಬಂದಿಯನ್ನು ಬಡ್ಡಿರಹಿತ ಸಾಲ ಒದಗಿಸಿತು. ಬ್ರಿಟಿಷ್ ಪಡೆಗಳ ಸೇನಾ ಸಿಬ್ಬಂದಿಯನ್ನು ಸುಮಾರು ಶೇಕಡ 25 ಭಾಗ ಇಳಿಸಬೇಕು. ರಿಕ್ ಸುರಕ್ಷತೆ, ಕರವಾಳಿ ರಕ್ಷಣೆ ಮತ್ತು ಸಾಮಾನ್ಯ ಕೈಗಾವಲು ಸೈನ್ಯ ಲೈಟ್ ಟ್ಯಾಂಕುಗಳ ಮತ್ತು ಆರ್ಮರ್ಡ್ ಕಾರುಗಳಿಗೆ ಮೋಟಾರು ಸಾಗಾಣಿಕೆಗೆ ಅವಕಾಶ ಕಲ್ಪನೆಯಾಯಿತು. ಫರಂಗಿ ರೆಜಿಮೆಂಟುಗಳನ್ನು ಯಾಂತ್ರೀಕರಣಗೊಳಿಸಿ ಮತ್ತಷ್ಟು ಫಿರಂಗಿಗಳಿಂದ ಸಜ್ಜುಗೊಳಿಸಬೇಕು. ವಾಯುಪಡೆಗಳಲ್ಲಿ ಬಾಂಬರ್ ಸ್ಕ್ವಾಡ್ರನ್‌ಗಳಿರಬೇಕು. ಕರಾವಳಿ ರಕ್ಷಣೆಗೆ ಮತ್ತು ಸೇನೆಗೆ ಸಹಕಾರ ನೀಡಲು ಫ್ಲೈಟ್‌ಗಳಿರಬೇಕು. ರಾಯಲ್ ಇಂಡಿಯನ್ ನೇವಿಯನ್ನು ಹೊಚ್ಚ ಹೊಸ ರೀತಿಯ ನೌಕೆಗಳಿಂದ ಬಲಪಡಿಸಬೇಕು. ಕಾರ್ಖಾನೆಗಳನ್ನು ಪುನರ್ರಚಿಸಿ ವಿಸ್ತರಿಸಬೇಕು.

## 80.5 ಮಾದರಿಯ ಪ್ರಶ್ನೆಗಳು

1. ಬ್ರಿಟಿಷ್ ಚಿಂತಕರು ಬ್ರಿಟಿಷ್ ದಿಗ್ವಿಜಯಗಳನ್ನು ಸಮರ್ಥಿಸಿಕೊಳ್ಳಲು ಪ್ರತಿಪಾದಿಸಿದ ಕಾನೂನು ಮತ್ತು ರಕ್ಷಣೆಯ ನೀತಿಗಳನ್ನು ಪರಿಶೀಲಿಸಿ?

2. ಬ್ರಿಟಿಷ್ ಭಾರತದ ರಕ್ಷಣೆ ಮತ್ತು ಪೋಲೀಸ್ ನೀತಿಯನ್ನು ಕುರಿತು ಬರೆಯಿರಿ.

## 80.6 ಪರಾಮರ್ಶನ ಗ್ರಂಥಗಳು


1. Lord Colchester "History of the Indian Administration of Lord ellenborough (London 1874)

2. M.V. Pylee "The Constitutional History of India"






ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೌರ್ಣಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✢ **M.Ed Study Centres : 06**


Multimedia learning material
STUDENT
INSTRUCTIONAL SYSTEM